ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಬಣ್ಣಗೆಟ್ಟ ಡಾಲರ್

ಆಗಸ್ಟ್ 24, 2011 ಪುಟ 20 ರೂ. 14/-



ಭದ್ರಾ ಮೇಲ್ದಂಡೆ ಹಗರಣ




ಲಂಚದ ಬೆಳೆ

ಟ್ಟಾ + ಪುಟ್ಟಾ ಾಯಂ ಫಿಟ್ಟಾ!




ದರೋಡೆಕೋರರ ನಿಗೂಢ ಇಂಡಿಕಾ



ೋನಿಯಾಗೆ ಕ್ಯಾನ್ಸರ್?

ಅಶೋಕ್ ಪೈ ಭೇಟಿ

ರಾಮುಲುಗೆ ಮೆಂಟಲ್ ಪ್ರಾಬ್ಲಮ್!



ರಾವಣ ಅಂದ್ರೆ ರಾವಣ

ಮಂದಿ ಸೇರಲ್ಲ, ಮನುಷ್ಯ ಸೇರಲ್ಲ


ಲಂಕೇಶಪ್ಪನವರ ಊರಾದ ಕೊನಗವಳ್ಳಿ ಶಿವಮೊಗ್ಗೆಯಿಂದ ಒಂಭತ್ತು ಮೈಲಿ ದೂರದಲ್ಲಿದೆ. ಅರೆಮಲೆನಾಡು ಪ್ರದೇಶ. ಅಲ್ಲಿ ಭತ್ತ ಕಾಳು ಪ್ರಮುಖ ಬೆಳೆಗಳು. ಲಂಕೇಶಪ್ಪನವರ ತಂದೆಯ ಹೆಸರು ನಂದೀಬಸಪ್ಪ ತಾಯಿಯ ಹೆಸರು ದೇವೀರಮ್ಮ. ಅವರಿಗೆ ಒಟ್ಟು ಐವರು ಮಕ್ಕಳು. ಮೂರು ಹೆಣ್ಣು ಎರಡು ಗಂಡು. ಇವರೇ ಚಿಕ್ಕವರು. ಇವರಿಗೆ ಹೆಸರಿಡುವಾಗ 'ಲ' ಅಕ್ಷರ ಮೊದಲು ಅಕ್ಷರವಾಗಿರಬೇಕು ಅಂದರಂತೆ. ಆಗ ಯಾರೋ "ಲಂಕೇಶಪ್ಪ ಎಂದು ಹೆಸರಿಡಿ" ಎಂದಿದ್ದರಿಂದ ಅದನ್ನೇ ಇಟ್ಟಿದ್ದರು.

ಶ್ರಮಜೀವಿಗಳಾಗಿದ್ದ ನಂದೀಬಸಪ್ಪ ಮತ್ತು ದೇವೀರಮ್ಮನವರು ಚೆನ್ನಾಗಿ ದುಡಿದು ಆಗಿನ ಕಾಲದಲ್ಲೇ ಶಿವಮೊಗ್ಗೆಯಲ್ಲಿ ಎರಡು ಟ್ವಿನ್ ಮನೆಗಳನ್ನು ಕಟ್ಟಿಸಿ ಬಾಡಿಗೆಗೆ ಕೊಟ್ಟಿದ್ದರು. ಅವುಗಳಲ್ಲಿ ಒಂದನ್ನು ನನ್ನ ಅಪ್ಪಯ್ಯ ಪಡೆದಿದ್ದರೆ ಇನ್ನೊಂದರಲ್ಲಿ ಲಾಯರ್ ಒಬ್ಬರ ಸಂಸಾರವಿತ್ತು.

ನಿಶ್ಚಿತಾರ್ಥಕ್ಕೆ ಲಂಕೇಶಪ್ಪನವರ ಇಡೀ ಕುಟುಂಬ ಬಂದಿತ್ತು. ನನ್ನ ಭಾವೀ ಅತ್ತೆಗೆ ತಮ್ಮ ಮೊಮ್ಮಗಳನ್ನೇ ಸೊಸೆ ಮಾಡಿಕೊಳ್ಳಬೇಕು ಎಂಬ ಆಸೆ ಇತ್ತು. ಆದರೆ ಇವರು "ನಾನು ಆಡಿಸಿ ಬೆಳೆಸಿದ ಹುಡುಗಿಯನ್ನು ಮದುವೆ ಆಗುವುದಿಲ್ಲ" ಎಂದು ನಿರಾಕರಿಸಿದ್ದರು. ಇದರಿಂದ ಕೋಪಗೊಂಡಿದ್ದ ದೇವೀರಮ್ಮ ಸಿಡಿಮಿಡಿ ಅಂದುಕೊಂಡೇ ಹಾಜರಾದರು. ನನ್ನ ಬಗ್ಗೆ ಅಸಮಾಧಾನಗೊಂಡಿದ್ದ ಅವರು "ಇವಳಲ್ಲಿ ಅದೇನನ್ನು ನೋಡಿ ಒಪ್ಪಿಕೊಂಡಿದ್ದಾನೋ" ಎಂದು ಗೊಣಗಾಡಿಕೊಳ್ಳುತ್ತಿದ್ದರು. ಆ ಹುಡುಗಿಯೂ ನಿಶ್ಚಿತಾರ್ಥಕ್ಕೆ ಬಂದಿದ್ದಳು. ಆಕೆಯನ್ನು ನೋಡಿದೆ.

ಚೆನ್ನಾಗಿಯೇ ಇದ್ದಳು.

****




ನಂದೀಬಸಪ್ಪ



ದೇವೀರಮ್ಮ

ನಿಶ್ಚಿತಾರ್ಥ ಆದನಂತರ "ಸದ್ಯದಲ್ಲೇ ಮದುವೆ ಬೇಡ. ಒಂದು ವರ್ಷ ಕಳೆಯಲಿ. ಇಂದಿರಾನೂ ಓದಲಿ" ಎಂದು ಲಂಕೇಶರು ಹೇಳಿದರು. ಅಷ್ಟು ಹೊತ್ತಿಗೆ. ಅವರಿಗೆ ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿ ಕೆಲಸ ಸಿಕ್ಕಿತು. ಲಂಕೇಶರ ತಂದೆ ನಂದೀಬಸಪ್ಪ ಕಟ್ಟಿಸಿದ್ದ, ಆದರೆ ನನ್ನ ತಂದೆ ಬಾಡಿಗೆಗಿದ್ದ ಮನೆಯಲ್ಲೇ ಲಂಕೇಶರು ವಾಸಿಸಲು ಶುರು ಮಾಡಿದರು. ನಾವಿಬ್ಬರೂ ಒಂದೇ ಮನೆಯಲ್ಲಿ ಇರುವುದು ಸರಿಯಲ್ಲ ಎಂದು ನನ್ನನ್ನು ಬೆಂಗಳೂರಿನ ಅಕ್ಕನ ಮನೆಗೆ ಕಳುಹಿಸಿ ಮೌಂಟ್ ಕಾರ್ಮೆಲ್ ಕಾಲೇಜಿಗೆ ಸೇರಿಸಲಾಯಿತು. ಎಸ್‌ಎಸ್‌ಎಲ್‌ಸಿ ಓದುತ್ತಿದ್ದಾಗ ನನಗೆ ಸೈನ್ಸ್ ಮತ್ತು ಗಣಿತ ಇಷ್ಟದ ಸಬ್ಜೆಕ್ಟ್ ಆಗಿದ್ದವು. ಆದರೆ ಲಂಕೇಶರು ಆರ್ಟ್ಸ್ ತೆಗೆದುಕೋ ಎಂದಿದ್ದರಿಂದ ಆರ್ಟ್ಸ್ ವಿಭಾಗವನ್ನು ಸೇರಿದ್ದೆ. ಹಿಸ್ಟರಿ ಕ್ಲಾಸ್ ನನಗೆ ಬೋರ್ ಹೊಡೆಸುತ್ತಿದ್ದವು.



ಹೀಗೆ ನನ್ನ ಕಾಲೇಜ್ ಜೀವನ ಮತ್ತು ಅವರ ಅಧ್ಯಾಪಕ ಜೀವನ ಪ್ರಾರಂಭವಾಯಿತು.

****

ನಿಶ್ಚಿತಾರ್ಥ ಆದನಂತರ ಇವರು ಮೈಸೂರಿಗೆ ಹಿಂದಿರುಗಿದರು. ಆಗ ನನ್ನ ಚಿಕ್ಕಪ್ಪ ಆಗಬೇಕಾದ ಕರಿಬಸಪ್ಪ ಎಂಬುವವರು ಮೈಸೂರಿನಲ್ಲಿ ಅಗ್ರಿಕಲ್ಚರ್ ಆಫೀಸರ್ ಆಗಿದ್ದರು. "ನಮ್ಮ ಇಂದೂಳನ್ನು ಮದುವೆ ಆಗುತ್ತಿರುವ ಹುಡುಗನನ್ನು ನಮ್ಮ ಮನೆಗೆ ಊಟಕ್ಕೆ ಕರೆಯೋಣ" ಎಂದು ನಿರ್ಧರಿಸಿ ಲಂಕೇಶಪ್ಪನವರನ್ನು ಆಹ್ವಾನಿಸಿದರು.

ಲಂಕೇಶ್ ಕೂಡ ಬರಲು ಒಪ್ಪಿಕೊಂಡರು. ಆದರೆ ನಿಗದಿತ ದಿನ ಅದೇಕೋ ಅವರ ಮನೆಗೆ ಹೋಗಲು ಲಂಕೇಶರಿಗೆ ಮೂಡ್ ಇರಲಿಲ್ಲ, ಎಷ್ಟು ಹೊತ್ತಾದರೂ ಲಂಕೇಶ್ ಬಾರದಿದ್ದಾಗ ಅವರು ಉಳಿದುಕೊಂಡಿದ್ದ ರೂಮಿಗೆ ಕರಿಬಸಪ್ಪ ಅವರು ಹೋಗಿ ವಿಚಾರಿಸಿದರು. ಇವರು ರೂಮಿನಲ್ಲಿದ್ದರೂ ಬೇರೆಯವರಿಂದ "ಅವರು ಇಲ್ಲ" ಎಂದು ಹೇಳಿ ಕರಿಬಸಪ್ಪನವರನ್ನು ಕಳುಹಿಸಿದ್ದರು.

ಅದು ಕರಿಬಸಪ್ಪ ಚಿಕ್ಕಪ್ಪನಿಗೆ ಗೊತ್ತಾಗಿ "ಆಹಾ, ನೀನು ಮದುವೆ ಆಗುತ್ತಿರುವ ಹುಡುಗ ರಾವಣ ಅಂದರೆ ರಾವಣ. ಮಂದಿ ಸೇರಲ್ಲ ಮನುಷ್ಯ ಸೇರಲ್ಲ, ತುಂಬಾ ಒರಟ" ಎಂದು ಬೇಜಾರು ಮಾಡಿಕೊಂಡಿದ್ದರು.

****

ಶಿವಮೊಗ್ಗೆ ಮನೆಯಲ್ಲಿ ಲಂಕೇಶರಿಗೆಂದು ನನ್ನ ಅಪ್ಪಯ್ಯ ತಮ್ಮ ಬೆಡ್‌ರೂಮ್‌ಅನ್ನು ಬಿಟ್ಟುಕೊಟ್ಟಿದ್ದರು. ತಮ್ಮ ಭಾವಿ ಅಳಿಯನನ್ನು ತಮ್ಮ ಮನೆಯಲ್ಲಿ ಇಟ್ಟುಕೊಂಡಿರುವಾಗಲೂ ಮನೆ ಬಾಡಿಗೆಯನ್ನು ಅಪ್ಪಯ್ಯ ತಪ್ಪದೆ ನನ್ನ ಭಾವ ಶಿವರುದ್ರಪ್ಪನವರಿಗೆ ಕೊಡುತ್ತಿದ್ದರು. ಹೀಗೆ ಅಧಿಕೃತವಾಗಿ ಅಳಿಯ ಆಗುವ ಮುನ್ನವೇ ಲಂಕೇಶರು ತಮ್ಮ ಮಾವನ ಮನೆಯಲ್ಲಿ ದರ್ಬಾರು ಶುರುಮಾಡಿದ್ದರು.

ಲಂಕೇಶರು ಬೆಳಗ್ಗೆ ಎದ್ದು, ಅಡುಗೆಯವರು ಮಾಡಿದ್ದ ತಿಂಡಿ ತಿಂದು, ನೀಟಾಗಿ ಡ್ರೆಸ್ ಮಾಡಿಕೊಂಡು, ಸೂಟ್‌ಬೂಟ್ ಧರಿಸಿ, ಕೋಟಿನ ಜೇಬಿನಲ್ಲಿ ಒಂದು ಗುಲಾಬಿ ಹೂವನ್ನು ಸಿಕ್ಕಿಸಿಕೊಂಡು ಸೈಕಲ್ ಹತ್ತಿ ಕಾಲೇಜಿಗೆ ಹೋಗುತ್ತಿದ್ದರು. ಆದರೆ ಆಗಲೂ ಅವರು ತಲೆಕೂದಲನ್ನು ಸರಿಯಾಗಿ ಬಾಚಿಕೊಳ್ಳುತ್ತಿರಲಿಲ್ಲ, ಇದನ್ನು ಗಮನಿಸಿದ ಅವರ ಶಿಷ್ಯರು ಒಂದು ದಿನ ಅವರಿಗೆ ಬಾಚಣಿಗೆಯನ್ನು ಉಡುಗೊರೆಯಾಗಿ ನೀಡಿದ್ದರು.

ಇವರು ಯಾವಾಗಲೂ ಕೆಲಸದವರ ವಿಷಯದಲ್ಲಿ ಬಹಳ ಧಾರಾಳಿ. ಆಗಲೂ ಮನೆ ಅಡುಗೆಯವರಿಗೆ "ಪಿಕ್ಚರ್‌ಗೆ ಹೋಗು", "ಬಟ್ಟೆ ತೆಗೆದುಕೋ" ಎಂದೆಲ್ಲ ದುಡ್ಡು ಕೊಡುತ್ತಿದ್ದರು. ಹಾಗಾಗಿ ಅಡುಗೆಯವರು ಲಂಕೇಶರಿಗೆ ಮೊಸರು ಬಡಿಸಿದರೆ ನನ್ನ ತಮ್ಮ ಶಿವಕುಮಾರನಿಗೆ ಮಜ್ಜಿಗೆ ಬಡಿಸುತ್ತಿದ್ದರು!

ಲಂಕೇಶರಿಗೆ ಹಣ್ಣುಗಳೆಂದರೆ ತುಂಬಾ ಇಷ್ಟ. ಚಿಕ್ಕವರಾಗಿದ್ದಾಗ ಅವರು ಮಂಕರಿಗಟ್ಟಲೆ ಮಾವನ್ನು ತಿನ್ನುತ್ತಿದ್ದರಂತೆ. ಒಮ್ಮೆ ಅವರು ಕಾಲೇಜಿನಿಂದ ಹಿಂದಿರುಗಿದಾಗ ಒಂದು ಕವರ್ ತುಂಬ ಹಣ್ಣುಗಳನ್ನು ತಂದರಂತೆ. ಅದನ್ನು ನೋಡಿ ತನಗೂ ಹಣ್ಣು ಕೊಡಬಹುದೆಂದು ನನ್ನ ತಮ್ಮ ಶಿವು ಕಾದುಕೂತಿದ್ದನಂತೆ. ಸ್ವಲ್ಪ ಹೊತ್ತಿನ ನಂತರ ತಮ್ಮ ರೂಮಿನಿಂದ ಹೊರಬಂದ ಲಂಕೇಶರು ಅದೆಲ್ಲಿಗೋ ಹೊರಟುಹೋದರಂತೆ. ಆಗ ರೂಮನ್ನು ಶಿವು ಹೊಕ್ಕು ನೋಡಿದಾಗ ಅಲ್ಲಿ ಬರೀ ಹಣ್ಣಿನ ಸಿಪ್ಪೆ ಮತ್ತು ತೊಟ್ಟುಗಳು ಇದ್ದವಂತೆ. ಅದನ್ನು ನೋಡಿ ಶಿವು "ಆಹಾ, ತೊಟ್ಟು ಮತ್ತು ಸಿಪ್ಪೆ ತಿನ್ನುವಂತಿದ್ದರೆ ಅದನ್ನೂ ಲಂಕೇಶಪ್ಪ ಬಿಡುತ್ತಿರಲಿಲ್ಲ" ಎಂದು ತಮಾಷೆ ಮಾಡಿದ್ದ.

ಆಗ ಕೊನಗವಳ್ಳಿಯಿಂದ ಶಿವಮೊಗ್ಗೆಗೆ ಪ್ರತಿ ಬೆಳಗ್ಗೆ ಟ್ರೈನ್ ಬರುತ್ತಿತ್ತು, ಕೆಲ ಕೊನಗವಳ್ಳಿ ಜನ ಆ ಟ್ರೈನನ್ನೇರಿ ಶಿವಮೊಗ್ಗೆಗೆ ಸುಮ್ಮನೆ ಕಾಲ ಕಳೆಯಲು ಬರುತ್ತಿದ್ದರು. ಅಂತಹವರಲ್ಲಿ ಲಂಕೇಶರ ಅಣ್ಣ ಶಿವರುದ್ರಪ್ಪನವರೂ ಒಬ್ಬರು. ಅವರೆಲ್ಲ ಶಿವಮೊಗ್ಗೆಗೆ ಬಂದಾಗಲೆಲ್ಲ ಮನೆಗೂ ಬರುತ್ತಿದ್ದರು. ಮುಂಚೆಯೇ ನಮ್ಮ ಅಪ್ಪಯ್ಯನ ಮನೆ ಹೆಣ್ಣು ದಿಕ್ಕಿಲ್ಲದ ಮನೆಯಾಗಿತ್ತು. ಬೀಗರು ಬಂದರೆ ಅವರನ್ನು ಸುಮ್ಮನೆ ಕಳುಹಿಸುವಂತಿಲ್ಲ, ಅವರಿಗೆಲ್ಲ ಅಡುಗೆ ಮಾಡಿಸಿ ನನ್ನ ಅಪ್ಪಯ್ಯನಿಗೆ ಸಾಕುಬೇಕಾಗುತ್ತಿತ್ತು.

****

ಲಂಕೇಶರು ಸಾಧ್ಯವಾದಾಗಲೆಲ್ಲ ಬೆಂಗಳೂರಿಗೆ ಬಂದು ನನ್ನನ್ನು ಮಾತಾಡಿಸಿಕೊಂಡು ಹೋಗುತ್ತಿದ್ದರು. ಸಿನಿಮಾ, ಎಂ.ಜಿ. ರೋಡ್, ಹೋಟೆಲ್ ಎಂದೆಲ್ಲ ಸುತ್ತುತ್ತಿದ್ದೆವು. ನನ್ನನ್ನು ನೋಡಲು ಬರುವ ಮುನ್ನ ಅವರು ಸಿಗರೇಟ್ ಸೇದಿದ್ದರೆ ಅಥವಾ ಬಿಯರ್ ಕುಡಿದಿದ್ದರೆ ಬಾಯಿಗೆ ಒಂದು ಬಂಡಿ ಏಲಕ್ಕಿ ಹಾಕಿಕೊಂಡು ಬರುತ್ತಿದ್ದರು. ಆ ಏಲಕ್ಕಿಯ ಅರ್ಥ ಮದುವೆಯಾದ ನಂತರವೇ ನನಗೆ ಗೊತ್ತಾಗಿದ್ದು.

ಒಮ್ಮೆ ವೈಎನ್‌ಕೆ ಅವರನ್ನು ಭೇಟಿಯಾಗಲು ನನ್ನನ್ನೂ ಪ್ರಜಾವಾಣಿ ಆಫೀಸಿಗೆ ಕರೆದುಕೊಂಡು ಹೋಗಿದ್ದರು. ಆನಂತರದ ದಿನಗಳಲ್ಲಿ ವೈಎನ್‌ಕೆ ಅವರನ್ನು ಭೇಟಿ ಆದಾಗ ಅವರೂ ನಮ್ಮ ಜೊತೆಗೆ ಹೋಟೆಲ್‌ಗೆ ಬರುತ್ತಿದ್ದರು. ಆಗೆಲ್ಲ ವೈಎನ್‌ಕೆ ಅವರು ನನಗಾಗಿ ಚೇರನ್ನು ಹೊರಗೆಳೆದು ನಾನು ಕೂತ ನಂತರವೇ ಅವರು ಕೂರುತ್ತಿದ್ದರು. ಇನ್ನು ಲಂಕೇಶರು ತಮ್ಮ ಇತರೆ ಸ್ನೇಹಿತರನ್ನು ಭೇಟಿಯಾದಾಗ ಅವರೆಲ್ಲ ಸಾಹಿತ್ಯ, ರಾಜಕೀಯ, ಬರಹಗಾರರು ಎಂದೆಲ್ಲ ಮಾತನಾಡುತ್ತಿದ್ದರು. ನನಗೆ ಅವುಗಳ ತಲೆ, ಬುಡ ಗೊತ್ತಿರಲಿಲ್ಲವಾದ್ದರಿಂದ ಒಂದಿಷ್ಟೂ ಅರ್ಥವಾಗದೆ ... ಮುಖ ನೋಡಿಕೊಂಡು ಕೂತಿರುತ್ತಿದ್ದೆ.



ಶಿವಕುಮಾರ್ -ಇಂದಿ...

ಒಮ್ಮೆ ನಾವಿಬ್ಬರು ಪರೇಡ್ ಕಫೆಗೆ (ಈಗಿನ ಕೊ... ಹೋಟೆಲ್) ಹೋಗಿದ್ದೆವು. ಕಾಫಿ ಕುಡಿದು ಹೊ... ಟೇಬಲ್ ಮೇಲೆ ಚಿಲ್ಲರೆ ಇದ್ದದ್ದನ್ನು ನೋಡಿ "ಅ... ತೆಗೆದುಕೊಳ್ಳಲು ಇವರು ಮರೆತಿರಬೇಕು" ಎಂದುಕೊ... ಅದನ್ನು ತೆಗೆದುಕೊಂಡು ಬಂದಿದ್ದೆ. ಇದು ಗೊತ... ಲಂಕೇಶರು "ಅದನ್ನು ಟಿಪ್ಸ್‌ಗೆಂದು ಬಿಟ್ಟುಬಂದಿದ್ದೆ. ನ... ಅದನ್ನು ತೆಗೆದುಕೊಂಡೆ?" ಎಂದು ಪ್ರಶ್ನಿಸಿದ್ದರು. ನ... ಬೆಂಗಳೂರಿನ ಟಿಪ್ಸ್ ಪದ್ಧತಿ ಬಗ್ಗೆ ಗೊತ್ತಿರಲಿಲ್ಲ.

ಈ ಮಧ್ಯೆ ಒಮ್ಮೆ ನನಗೆ ಸಣ್ಣದಾಗಿ ಸ್ಟ್ರೋಕ್ ಆ... ಅದರ ಪರಿಣಾಮವಾಗಿ ನಾನು ನಕ್ಕಾಗ ನನ್ನ ಬಾ... ಒಂದು ಕಡೆ ಚಲನೆ ಇರಲಿಲ್ಲ, ಒಂದೆರಡು ತಿಂ... ಸರಿ ಆಯಿತು. ನನಗೆ ಸ್ಟ್ರೋಕ್ ಆಗಿದ್ದರ... ಲಂಕೇಶಪ್ಪನವರಿಗೆ ಹೇಳಬೇಡ ಎಂದು ಅಪ್ಪಯ್ಯ ಸೇರಿ... ಎಲ್ಲರೂ ಎಚ್ಚರಿಸಿದ್ದರು. ಆದರೆ ಅವರಿಂದ ... ಬಚ್ಚಿಡಲು ನನಗೆ ಮನಸ್ಸು ಬರಲಿಲ್ಲ. ಒಮ್ಮೆ ... ಬೆಂಗಳೂರಿಗೆ ಬಂದಾಗ ನನಗೆ ಆಗಿದ್ದನ್ನೆಲ್ಲ ಹೇ... ಅವರು ಅದರ ಬಗ್ಗೆ ತಲೆಕೆಡಿಸಿಕೊಳ್ಳದೆ "ಪರ... ಬಿಡು" ಎಂದರು.

ಸದ್ಯದಲ್ಲೇ ನಾನು ಹೇಗಿದ್ದರೂ ಮದುವೆ ಆಗ... ಎಂಬ ಸೋಮಾರಿತನದಿಂದ ಸರಿಯಾಗಿ ಕಾಲೇಜಿಗೆ ಹೋ... ತ್ತಿರಲಿಲ್ಲ, ಲಂಕೇಶರು ಪ್ರತಿವಾರ ತಪ್ಪದೆ ಪತ್ರ ಬರೆಯು... ಆ ಪತ್ರಗಳಲ್ಲಿ ನಾವು ಹೇಗೆ ಅನ್ಯೋನ್ಯವಾಗಿರ... ಪರಸ್ಪರ ಅರ್ಥಮಾಡಿಕೊಂಡು ಜೀವಿಸಬೇಕು ಎ... ಬರೆದಿರುತ್ತಿದ್ದರು. ಆದರೆ ನನಗೆ ಪತ್ರ ಬರೆ... ಬರುತ್ತಿರಲಿಲ್ಲ, ಆದ್ದರಿಂದ "ನಿಮ್ಮ ಪತ್ರ ತಲುಪಿತು. ... ಚೆನ್ನಾಗಿದ್ದೇನೆ. ನೀವು ಚೆನ್ನಾಗಿದ್ದೀರಾ?" ಎಂಬ... ಆರ್ಡಿನರಿಯಾದ ನೀರಸ ಪತ್ರಗಳನ್ನು ಬರೆಯುತ್ತಿ...

(ಮುಂದುವರೆಯು...

ನೋ ಕಾಮೆಂಟ್ಸ್

ಇದು ಮೆಚ್ಚುವಂತಹ ನಿಲುವು

ನನಗೆ ಮೊದಲಿನಿಂದಲೂ ಈ ಜ್ಯೋತಿಷ್ಯ, ಹೋಮ, ಹವನ ಮತ್ತಿತರ ಪೂಜಾವಿಧಿ ಕೈಗೊಳ್ಳುವುದರಲ್ಲಿ ನಂಬಿಕೆಯಿಲ್ಲ. ಇದುವರೆಗೆ ನಾನು ಯಾವ ಹೋಮ, ಹವನ ಮಾಡದೆ ಈ ಸ್ಥಾನದವರೆಗೆ ಬಂದಿದ್ದೇನೆ. ಮುಂದೆ ಬರಬೇಕಾದ್ದು ಬಂದೇ ಬರುತ್ತದೆ. ಅದಕ್ಕಾಗಿ ಈ ರೀತಿಯ ವಿಶೇಷ ಪ್ರಯತ್ನ ಮಾಡುವುದು ನನ್ನ ಮನಸ್ಸಿಗೆ ಒಪ್ಪುವುದಿಲ್ಲ.

- ಜಗದೀಶ್ ಶೆಟ್ಟರ್

ಒಂದು ಆಶಾದಾಯಕ ಬೆಳವಣಿಗೆಯನ್ನು ನಿಮಗೆ ಹೇಳಲೇಬೇಕು. ಜನಶ್ರೀ ಚಾನಲ್ ಮಾತ್ರ ಜ್ಯೋತಿಷಿಗಳನ್ನು ಮೈಮೇಲೆ ಬಿಟ್ಟುಕೊಂಡಿಲ್ಲ, ಜ್ಯೋತಿಷಿಗಳನ್ನು ಬಳಸಿಕೊಳ್ಳದೇ ಆ ಚಾನಲ್ ಮುಂದುವರೆಯುತ್ತಿದೆ. ಇತರ ಚಾನಲ್‌ಗಳಲ್ಲಿ ಜ್ಯೋತಿಷಿಗಳು ಪದ್ಮಾಸನ ಹಾಕಿ ಕುಳಿತು ಪ್ರವಚನ ನಡೆಸುವ ಸಮಯಕ್ಕೆ ಸರಿಯಾಗಿ ಜನಶ್ರೀ ಚಾನಲ್ ನಿರುದ್ಯೋಗಿ ಯುವಕ-ಯುವತಿಯರಿಗೆ ಎಲ್ಲೆಲ್ಲಿ ಉದ್ಯೋಗಾವಕಾಶಗಳು ಲಭ್ಯವಿದೆ ಎಂಬುದನ್ನು ಹೇಳುವ ಕಾರ್ಯಕ್ರಮವನ್ನು ಪ್ರಸಾರ ಮಾಡುತ್ತದೆ. ಬೊಗಳೆ ಜ್ಯೋತಿಷ್ಯವನ್ನು ಪ್ರಸಾರ ಮಾಡಿ ಜನರ ತಲೆಕೆಡಿಸುವ ಬದಲು ನಿರುದ್ಯೋಗಿ ಯುವಸಮುದಾಯದ ಭವಿಷ್ಯವನ್ನು ರೂಪಿಸುವ ಕಾರ್ಯಕ್ರಮ ಪ್ರಸಾರ ಮಾಡುವ ಮೂಲಕ ತನ್ನ ಆದ್ಯತೆಗಳೇನು ಎಂಬುದನ್ನು ಅದು ಸ್ಪಷ್ಟಪಡಿಸಿಕೊಂಡಿದೆ.

-ಸಂಪಾದಕೀಯ ಬ್ಲಾಗ್

ಆಡೂ ಆಟ ಆಡೂ

ಮೊದಲ ಎರಡೂ ಟೆಸ್ಟ್ ಮ್ಯಾಚ್‌ಗಳಲ್ಲಿ ಭಾರತದ ಸೋಲಿಗೆ ಕಾರಣ ನಮ್ಮ ಆಟಗಾರರಲ್ಲಿ ಆಡುವ ಛಲವೇ ಇಲ್ಲದಿದ್ದದ್ದು. ಅವರು ಕಿಂಚಿತ್ತೂ ದೃಢತೆಯನ್ನು ತೋರದೆ ಕೈಚೆಲ್ಲಿದರು. ಜಗತ್ತಿನ ಅತಿ ಶ್ರೇಷ್ಠ ತಂಡದಂತೆ ಅವರು ಆಡಲಿಲ್ಲ, ಪ್ರತಿಗಾಮಿ ವಾತಾವರಣದಲ್ಲಿ ಹೋರಾಡುವ ಧೈರ್ಯವೇ ಅವರಲ್ಲಿರಲಿಲ್ಲ. ನಿಜ, ಇಂಗ್ಲೆಂಡಿನ ವಾತಾವರಣದೊಂದಿಗೆ ಹೊಂದಿಕೊಳ್ಳುವುದು ಕಷ್ಟ. ಆದರೆ ಜಗತ್ತಿನ ಶ್ರೇಷ್ಠ ತಂಡ ಎಲ್ಲಕ್ಕೂ ಬೇಗನೆ ಒಗ್ಗಿಕೊಳ್ಳಬೇಕು. ಏಕೆಂದರೆ ಟೆಸ್ಟ್ ಮ್ಯಾಚ್ ಎಂದರೇನೇ ಐದು ದಿನಗಳ ಕಾಲ ಜೀವಂತವಾಗಿ ಉಳಿದುಕೊಂಡಿರುವುದು.

-ಅನ್ಶುಮನ್ ಗಾಯಕ್ವಾಡ್, ಭಾರತದ ಮಾಜಿ ಟೆಸ್ಟ್ ಕ್ರಿಕೆಟಿಗ

ನನ್ನ ಸ್ಥಾನದಲ್ಲಿ ಪುರುಷನೊಬ್ಬನಿದ್ದರೆ ಯಾರೂ ಆತನತ್ತ ಇಷ್ಟು ಗಮನ ಕೊಡುತ್ತಿರಲಿಲ್ಲ, ಯಾರೂ ಆತ ಧರಿಸಿರುವ ಟೈ ಬಗ್ಗೆ ಮಾತನಾಡುತ್ತಿರಲಿಲ್ಲ. ನಾನು ಇರುವ ರೀತಿಯ ಬಗ್ಗೆ ಯಾರಲ್ಲೂ ಕ್ಷಮೆ ಯಾಚಿಸುವ ಅಗತ್ಯತೆ ನನಗೆ ಕಂಡುಬರುತ್ತಿಲ್ಲ.

-ಹೀನಾ ರಬ್ಬಾನಿ ಖರ್, ಪಾಕಿಸ್ತಾನದ ವಿದೇಶಾಂಗ ಸಚಿವೆ

ಕರ್ನಾಟಕದಲ್ಲಿ ಬಿಜೆಪಿಯನ್ನು ಬೆಳೆಸಿದ ಯಡಿಯೂರಪ್ಪ ತಾನೇ ವಿಚಾರಣೆಗೆ ಗುರಿಯಾದರೆ ತಾನು ಪಕ್ಷಕ್ಕೆ ಮಾಡಿಕೊಟ್ಟ ಎಲ್ಲಾ ಲಾಭಗಳನ್ನು ನಾಶಪಡಿಸಲು ಸಿದ್ಧನಾಗಿದ್ದಾನೆ.

-ಇಂಡಿಯಾ ಟುಡೆ

ಇಲ್ಲಿ ವಿದ್ಯೆ ಸಿಗುತ್ತಾ?

ಭಾರತದ 45 ಶ್ರೇಷ್ಠ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಿಕ್ಕಿರುವ ಸ್ಥಾನ 9ನೇಯದ್ದು, ಆದರೆ 100 ಅಂಕಗಳಿಗೆ ಬೆಂಗಳೂರು ವಿವಿ ಪಡೆದಿರುವುದು ಕೇವಲ 27.70.

ಇದೇ ಪಟ್ಟಿಯಲ್ಲಿ ಮೈಸೂರು ವಿವಿ 17 ನೇ ಸ್ಥಾನ (ಒಟ್ಟು ಅಂಕಗಳು 16.24) ಪಡೆದಿದ್ದರೆ, ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯ 25 ನೇ ಸ್ಥಾನ (8.33) ಪಡೆದಿದೆ.

ಅಂದಹಾಗೆ ಈ ಮೂರೂ ವಿವಿಗಳ ವಿದ್ಯಾರ್ಥಿ... ಉತ್ತೀರ್ಣರಾಗಲು ಪಡೆಯಬೇಕಿರುವ ಕನಿಷ್ಠ ಅಂಕ... 35%!

-ಕಿಡಿಗ...

ನೀವು ಯಾವ ರೇಟಿಗೆ ನಿಮ್ಮನ್ನು ಮಾರಿಕೊಳ್ಳುತ್ತೀರಿ?

ಜಾಗತೀಕರಣವು ಖಂಡಿತವಾಗಿಯೂ ಭಾರತ ವ... ಚೀನಾದಲ್ಲಿ ಬಡತನವನ್ನು ಹೆಚ್ಚಿಸಿಲ್ಲ, ಬದಲಾಗಿ ಹೆ... ಸಾಧ್ಯತೆಗಳ ಬಗ್ಗೆ ಕಡು ಬಡಜನತೆಯಲ್ಲೂ ಅರಿ... ಮೂಡಿಸಿದೆ. ಭಾರತದ ಕೇಂದ್ರ, ಮ... ಪೂರ್ವಭಾಗಗಳಲ್ಲಿರುವ ಆದಿವಾಸಿಗಳು ಈಗ ತ... ಭೂಮಿಯನ್ನು ಕಡಿಮೆ ಬೆಲೆಗೆ ಉದ್ಯಮಿಗಳಿಗೆ ಮಾ... ಸಿದ್ಧರಿಲ್ಲ.

ಆದರೆ ಆದಿವಾಸಿಗಳ ಉದ್ಧಾರ ಇರುವುದು ಅ... ಮಾವೋವಾದಿಗಳು ಹೇಳುವಂತೆ ಮುಕ್ತ ಮಾರು... ಯನ್ನು ವಿರೋಧಿಸುವುದರಲ್ಲಿಲ್ಲ, ಬದಲಾಗಿ ವ... ಮಾರುಕಟ್ಟೆಯನ್ನು ಆದಿವಾಸಿಗಳಿಗೆ ತೆರೆದಿಟ್ಟು ಅತಿ... ಬೆಲೆ ನೀಡುವ ಉದ್ಯಮಿಗೆ ತಮ್ಮ ಭೂಮಿಯ... ಮಾರುವುದರಲ್ಲಿದೆ.

ಲ್ಲರ ಹೀರೋ ಸಂತೋಷ್ ಹೆಗ್ಡೆ

ದಿನೂಜಿ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಇವತ್ತು ರಾಜ್ಯದ ಜನರ ಮನದಲ್ಲಿ ದೊಡ್ಡ ಹೀರೋ ದ್ದಾರೆ. ಜೊತೆಗೆ ದೇಶದಾದ್ಯಂತ ಭ್ರಷ್ಟಾಚಾರ ವಿರೋಧಿಸು ವವರ ಗೌರವಕ್ಕೂ ಪಾತ್ರರಾಗಿದ್ದಾರೆ. ಇದೆಲ್ಲ ಸಾಧ್ಯವಾಗಿ ಹೆಗ್ಡೆ ಅವರ ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ.

ಸಜ್ಜನ, ಸರಳ ಮತ್ತು ಸೂಕ್ಷ್ಮ ವ್ಯಕ್ತಿಯಾದ ಹೆಗ್ಡೆಯವರ ಮತ್ತು ನಿಷ್ಠುರ ನಿಲುವು ಇವತ್ತು ಸಾಮಾನ್ಯ ಜನರಿಗೂ ವಾಗಿದೆ. ಆದರೆ ಅವರ ಈ ಗುಣಗಳಿಂದಾಗಿಯೇ ತ್ತು ಸಾರ್ವಜನಿಕವಾಗಿ ಬೆತ್ತಲಾಗಿ ನಿಂತಿರುವ ಭ್ರಷ್ಟರಿಗೆ ಹೆಗ್ಡೆ ವಿರುದ್ಧ ಇನ್ನಿಲ್ಲದಂತಹ ಕೋಪ. ಆದ್ದರಿಂದಲೇ ುಭ್ರಷ್ಟ ಯಡಿಯೂರಪ್ಪ ಹರಕು ಬಾಯಿ ಕಾಚಾರ್ಯನನ್ನು ಹೆಗ್ಡೆ ವಿರುದ್ಧ ಛೂ ಬಿಟ್ಟ. 'ಕಿಸ್ಸಿಂಗ್' ್ರತಿಯ ರೇಣುಕಾ ಎಂದಿನಂತೆ ತನ್ನ ನಾಲಿಗೆಯ ಹಿಡಿತ ಕಳೆದುಕೊಂಡವನಂತೆ ಹೆಗ್ಡೆ ಅವರ ವಿರುದ್ಧ ುಗೆ ಬಂದದ್ದನ್ನು ಮಾಧ್ಯಮಗಳ ಮುಂದೆ ಅರಚಿದ.

ನನ್ನು ಠುಸ್ ಬಾಂಬ್ ಗಿರಾಕಿ ಕಂ ಅದಿರು ಕಳ್ಳ ರ್ದನ ರೆಡ್ಡಿ ಕೂಡ ಲೋಕಾಯುಕ್ತರ ವಿರುದ್ಧ ಾಡುತ್ತ "ನಾಳೆ ಇಡೀ ದೇಶವೇ ಶಾಕ್ ಆಗುವಂತಹ ುವನ್ನು ಬಹಿರಂಗಪಡಿಸುತ್ತೇನೆ" ಎಂದಿದ್ದ. ಆತ ಅವರ ಸಂಬಂಧಿಕರು ನಡೆಸುವ ಖ್ಯಾತ ನಿಟ್ಟೆ ವಿದ್ಯಾ ಗೆ ಸಂಬಂಧಪಟ್ಟಂತೆ ಯಾವುದೋ ಮಾಹಿತಿಯನ್ನು ವ ಮೂಲಕ ಹೆಗ್ಡೆ ಅವರಿಗೆ ಮುಜುಗರ ಮಾಡಲು ಸುತ್ತಾನೆ ಎಂದು ಎಲ್ಲರೂ ಊಹಿಸಿದ್ದರು. ಅದು ಅವರಿಗೂ ಗೊತ್ತಿತ್ತು. "ನನಗೆ ಮಕ್ಕಳಿಲ್ಲ. ಇದ್ದಿದ್ದರೆ ು ಯಾರಿಂದಲೋ ದುಡ್ಡು ಪಡೆದು ನಾನು ತಪ್ಪು ಕೊಟ್ಟಿದ್ದೇನೆ ಎಂದು ಆರೋಪಿಸುತ್ತಿದ್ದರು. ಆದರೆ ಮಕ್ಕಳಿಲ್ಲದಿರುವುದರಿಂದ ಈಗ ನನ್ನ ಸಂಬಂಧಿಕರ ಆರೋಪ ಮಾಡಲು ಯತ್ನಿಸುತ್ತಿದ್ದಾರೆ" ಎಂದು ದ್ದರು.

ಆದರೆ ಹೆಗ್ಡೆ ಅವರ ಸಂಬಂಧಿಕರ 'ಅವ್ಯವಹಾರ'ಗಳ ಮಾಹಿತಿ ಸಂಗ್ರಹಿಸುವುದಾಗಲಿ, ಆರೋಪ ಮಾಡುವು ಲಿ ಬಳ್ಳಾರಿಯಲ್ಲಿ ಅದಿರನ್ನು ಕದಿಯುವಷ್ಟು ಭವಲ್ಲ ಎಂದು ಖದೀಮ ರೆಡ್ಡಿಗೆ ತ್ತಾಗಿರಬಹುದು. ಆದ್ದರಿಂದ ಅವತ್ತಿನಿಂದ ಆತ ಎಲ್ಲ ರಂಧ್ರಗಳನ್ನು ಮುಚ್ಚಿಕೊಂಡು ಾಧ್ಯಮದವರಿಗೆ ಸಿಗದಂತೆ ತಪ್ಪಿಸಿಕೊಂಡಿದ್ದಾನೆ. ಆತ "ಇಡೀ ದೇಶ ಶಾಕ್" ಾವಂತಹ 'ಬಾಂಬ್' ಕೂಡ ಹಿಂದೊಮ್ಮೆ ಜಾತ್ಯತೀತ ಜನತಾದಳದ ನಾಯಕ ಾರಸ್ವಾಮಿ ವಿರುದ್ಧ ಮಾಡಿದ್ದ "150 ಕೋಟಿ "ಯಷ್ಟೇ ಹಾಸ್ಯಾಸ್ಪದವಾಗಿ ಠುಸ್ ಎಂದಿದೆ.

ಹೆಗ್ಡೆ ಅವರು ಪ್ರಚಾರಪ್ರಿಯರು, ಆದ್ದರಿಂದಲೇ ರು ಯಾರು ಕರೆದರೂ ಎಲ್ಲಿಗೆ ಬೇಕಾದರೂ ೀಗುತ್ತಾರೆ ಎಂದು ಕೆಲವರು ಅಪಪ್ರಚಾರ ಡುತ್ತಿದ್ದರು. ಈಗಲೂ ಅದನ್ನೇ ಹೇಳು ತ್ತಾರೆ. ಆದರೆ ನನಗೆ ಗೊತ್ತಿರುವಂತೆ ಹೆಗ್ಡೆ ಅವರು ಗೆ ಹೋದರೂ ಭ್ರಷ್ಟಾಚಾರದ ವಿರುದ್ಧ ಮಾತನಾಡಿ ರಲ್ಲಿ ಅದರ ಬಗ್ಗೆ ಅರಿವು ಮೂಡಿಸಲು ಯತ್ನಿಸುತ್ತಾರೆ. ರು ಅಷ್ಟೂ ಮಾಡದೆ ಸುಮ್ಮನೆ ತಮ್ಮ ಆಫೀಸು ು ಮನೆಯಲ್ಲಿ ಕೂತಿರಬೇಕಿತ್ತೆಂದು ಅಪೇಕ್ಷಿಸು ವುದು ುಮಲ್ಲ. ಹೀಗೆ ಅವರು ಜನಸಾಮಾನ್ಯರೊಂದಿಗೆ ಬೆರೆತು ವು ಕಂಡದ್ದನ್ನು ಹೇಳುವುದಕ್ಕೆ ಇರುವ ಇನ್ನೊಂದು ುಖ ಕಾರಣ ಇವತ್ತು ಭ್ರಷ್ಟಾಚಾರದಲ್ಲಿ ಬರೀ ಜಕಾರಣಿಗಳು ಪಾಲ್ಗೊಂಡಿಲ್ಲ, ಬದಲಾಗಿ ನಮ್ಮ ಾಜದ ವಿವಿಧ ವರ್ಗಗಳು ಕೂಡ ಒಂದಲ್ಲ ಒಂದು ತಿಯಲ್ಲಿ ಅದನ್ನು ಪ್ರೋತ್ಸಾಹಿಸುತ್ತಿದೆ ಅಥವಾ ಸಿಕೊಂಡಿವೆ ಎಂಬ ಹೆಗ್ಡೆಯವರ ದಿಟ್ಟನಂಬಿಕೆಯಿಂದ. ರು ಒಂದು ಸಂದರ್ಶನದಲ್ಲಿ "ಇವತ್ತು ಭ್ರಷ್ಟಾಚಾರದಲ್ಲಿ ನಮ್ಮ ಸಮಾಜದ ಮೇಲುವರ್ಗದ ಪಾತ್ರವಿದೆ. ಯಾಕೆಂದರೆ ಅವರೆಲ್ಲ ರಾಜಕಾರಣಿಗಳಿಗೆ ಅಥವಾ ಅಧಿಕಾರಿಗಳಿಗೆ ಹಣ ನೀಡುವ ಮೂಲಕ ಲಾಭ ಮಾಡಿಕೊಳ್ಳುತ್ತಾರೆ. ಇದು ಸಮಾಜದ ಮಧ್ಯಮ ವರ್ಗಕ್ಕೆ ಗೊತ್ತಿದ್ದರೂ ಅವರು ಪ್ರತಿಭಟಿಸುವ ಗೋಜಿಗೆ ಹೋಗದೆ ನಿಷ್ಕ್ರಿಯರಾಗುವ ಮೂಲಕ ಭ್ರಷ್ಟಾಚಾರವನ್ನು ಪ್ರೋತ್ಸಾಹಿಸುತ್ತಾರೆ. ಇನ್ನು ನಮ್ಮ ಸಮಾಜದ ಕೆಳವರ್ಗದ ಜನರಿಗೆ ಯಾವ ಶಕ್ತಿಯೂ ಇಲ್ಲದಿರುವುದರಿಂದ ಅವರು ಅಸಹಾಯಕರಾಗಿದ್ದಾರೆ" ಎಂದಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಜನರಲ್ಲಿ ಎಚ್ಚರಿಕೆಯನ್ನು ಮೂಡಿಸುವುದು ತಮ್ಮ ಕರ್ತವ್ಯ ಎಂದು ಹೆಗ್ಡೆ ಭಾವಿಸಿದ್ದರೆ ಹೊರತು ಅವರು ಪ್ರಚಾರಕ್ಕೆಂದು ಕರೆದ ಕಡೆಯೆಲ್ಲ ಹೋಗುತ್ತಿರಲಿಲ್ಲ.

ಹಲವು ವರ್ಷಗಳ ಹಿಂದೆ ಭ್ರಷ್ಟ ರಾಜಕಾರಣಿಗಳು ಮತ್ತು ಅಧಿಕಾರಿಗಳ ದೆಸೆಯಿಂದ ಬಳ್ಳಾರಿಯಲ್ಲಿ ಒಂದು ಹೋಟೆಲ್ ರೂಮ್ ಪಡೆಯುವುದಕ್ಕಿಂತ ಸುಲಭವಾಗಿ ಗಣಿ ಲೈಸೆನ್ಸ್ ಅನ್ನು ಪಡೆಯಬಹುದಿತ್ತು. ಅಂತಹ ಲೈಸೆನ್ಸ್‌ಗಳನ್ನು ಪಡೆದು ಸಕ್ರಮ ಮತ್ತು ಅಕ್ರಮ ಗಣಿಗಾರಿಕೆ ನಡೆದು ರಾಜ್ಯದ ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡಲಾಗುತ್ತಿತ್ತು. ಬಳ್ಳಾರಿ ಜಿಲ್ಲೆಯಲ್ಲಿ ಕೇವಲ 158 ಲೈಸೆನ್ಸ್‌ಗಳನ್ನು ನೀಡಲಾಗಿದ್ದರೂ ಅಲ್ಲಿ ಮುನ್ನೂರಕ್ಕೂ ಹೆಚ್ಚು ಪ್ರದೇಶಗಳಲ್ಲಿ ಗಣಿಗಾರಿಕೆ ನಡೆಯುತ್ತಿತ್ತು. ಇದರ ಬಗ್ಗೆ ತನಿಖೆ ನಡೆಸಲು ಒಮ್ಮೆ ಹೆಗ್ಡೆ ಅವರೇ ಸ್ವತಃ ಬಳ್ಳಾರಿಗೆ ಭೇಟಿ ನೀಡಿ ಅಲ್ಲಿ ಮೂರು ದಿನ ತಂಗಿದ್ದರು. ಆಗ ಅಲ್ಲೊಂದು ವಿಚಿತ್ರ ವಿದ್ಯಮಾನ ನಡೆಯಿತು. ಹೆಗ್ಡೆ ಅವರು ಅಲ್ಲಿದ್ದ ಮೂರೂ ದಿನಗಳ ಕಾಲ ಒಂದೇ ಒಂದು ಲಾರಿ ಅಲ್ಲಿಂದ ಕದಲಲಿಲ್ಲ, ಎಲ್ಲೂ ಗಣಿಗಾರಿಕೆ ನಡೆಯಲಿಲ್ಲ, ಬಳ್ಳಾರಿಯ ಪರಿಸರ ಹಾಳಾಗಲಿಲ್ಲ. ಇದನ್ನು ಗಮನಿಸಿದ ಜನ ಹೆಗ್ಡೆ ಅವರನ್ನು ಭೇಟಿ ಆಗಿ ಅವರು ಅಲ್ಲೇ ಶಾಶ್ವತವಾಗಿ ವಾಸಿಸಿದರೆ ತಮ್ಮ ಮತ್ತು ಜಿಲ್ಲೆಯ ಸಮಸ್ಯೆಗಳೆಲ್ಲವೂ ಒಂದೇ ಏಟಿಗೆ ಬಗೆಹರಿಯುತ್ತವೆ ಎಂದು ಕೇಳಿಕೊಂಡಿದ್ದರು! ಹೆಗ್ಡೆ ಅವರು ನಿಷ್ಠುರರಾಗಿ ಮತ್ತು ಪ್ರಾಮಾಣಿಕರಾಗಿ ತಮ್ಮ



ಅಧಿಕಾರವನ್ನು ಚಲಾಯಿಸಿದ್ದರ ಶಕ್ತಿಯನ್ನು ಈ ಪ್ರಕರಣ ತೋರುತ್ತದೆ.

ಪ್ರಾಮಾಣಿಕ ಅರಣ್ಯಾಧಿಕಾರಿ ಗೋಕುಲ್ ಅವರು ಬೇಲೇಕೇರಿ ಬಂದರಿನಿಂದ ಅದಿರು ಕಳ್ಳತನವಾಗಿದ್ದನ್ನು ಬಹಿರಂಗಪಡಿಸಿದ್ದಕ್ಕೆ ಅವರನ್ನು ಯಡಿಯೂರಪ್ಪನ ಭಂಡ ಸರ್ಕಾರ ಅಮಾನತ್ತುಗೊಳಿಸಲು ಮುಂದಾದಾಗ ಹೆಗ್ಡೆ ಅವರು ಆಘಾತಗೊಂಡು ತಮ್ಮ ಹುದ್ದೆಗೆ ರಾಜೀನಾಮೆ ನೀಡಲು ಮುಂದಾದದ್ದು ಎಲ್ಲರಿಗೂ ಗೊತ್ತಿರುವಂಥದ್ದೆ. ಆದರೆ ಮತ್ತೋರ್ವ ಪ್ರಾಮಾಣಿಕ ಅರಣ್ಯಾಧಿಕಾರಿ ಡಾ. ಯು.ವಿ. ಸಿಂಗ್ ಅವರು ಇತ್ತೀಚೆಗೆ ಹಲವು ಇತರೆ ವಿಷಯಗಳನ್ನು ಬಹಿರಂಗಪಡಿಸಿದ್ದಾರೆ. ಒಂದು ಲೇಖನದಲ್ಲಿ "ಒಮ್ಮೆ ನಾನು ತನಿಖೆ ನಡೆಸಲು ಬಳ್ಳಾರಿಗೆ ಹೊರಟಿದ್ದೆ. ಅಲ್ಲಿ ನನಗೆ ದೈಹಿಕ ಅಪಾಯ ಎದುರಾಗಬಹುದಿತ್ತು. ಆಗ ಹೊರಡುವ ಮುನ್ನ ತಮ್ಮ ಮನೆಗೆ ಬರಲು ಲೋಕಾಯುಕ್ತ ಹೆಗ್ಡೆ ಅವರು ನನಗೆ ಸೂಚಿಸಿದರು. ಅಲ್ಲಿಗೆ ಹೋದಾಗ ಗೊತ್ತಾಗಿದ್ದೇನೆಂದರೆ ಹೆಗ್ಡೆ ಅವರು ತಮ್ಮ ರಕ್ಷಣೆಗೆ ನೀಡಿದ್ದವರನ್ನೇ ನನ್ನೊಂದಿಗೆ ಕಳುಹಿಸಿದರು. ನಮ್ಮ ಬಗ್ಗೆ ಅವರಲ್ಲಿ ಅಷ್ಟೊಂದು ಕಾಳಜಿ" ಎಂದಿದ್ದಾರೆ ಸಿಂಗ್.

ಹೆಗ್ಡೆ ಅವರಿಗಿಂತ ಮುನ್ನ ಲೋಕಾಯುಕ್ತರಾಗಿದ್ದ ನ್ಯಾ. ವೆಂಕಟಾಚಲ ಅವರು ತಮ್ಮೊಂದಿಗೆ ಮಾಧ್ಯಮಗಳನ್ನು ಕರೆದುಕೊಂಡು ಹೋಗಿ ದಾಳಿಗಳನ್ನು ನಡೆಸುತ್ತಿದ್ದರು. ಆದರೆ ಹೆಗ್ಡೆ ಅವರು ಎಂದೂ ಅಂತಹ ಪ್ರಚಾರ ಕಾರ್ಯಗಳಲ್ಲಿ ತೊಡಗಲಿಲ್ಲ. ಬದಲಾಗಿ ತಮ್ಮ ತಂಡ ದಾಳಿಗೆ ಹೊರಟಾಗಿನಿಂದಲೂ ಅದರ ಕೆಲಸ ಮುಗಿಯುವವರೆಗೂ ಏನೇನು ನಡೆಯುತ್ತಿದೆ ಎಂದು ದೂರದಿಂದಲೇ ನೋಡಿಕೊಳ್ಳುತ್ತಿದ್ದರು. ಅಂತಹ ಒಂದು ಪ್ರಸಂಗದ ಬಗ್ಗೆ ಸಿಂಗ್ ಅವರು ಹೀಗೆ ವಿವರಿಸಿದ್ದಾರೆ: "ಒಮ್ಮೆ ನಮ್ಮ ತಂಡ ಚಿತ್ರದುರ್ಗದ ಹೊಳಲ್ಕೆರೆಯಲ್ಲಿ ದಾಳಿ ಮಾಡುವುದಿತ್ತು. ಅದಕ್ಕೆಂದು ನಾವು ಬೆಂಗಳೂರಿನ ಲೋಕಾಯುಕ್ತ ಕಚೇರಿಯಿಂದ ರಾತ್ರಿ ಎಂಟು ಗಂಟೆಗೆ ಹೊರಟೆವು. ನಾವು ಹೊಳಲ್ಕೆರೆ ಯನ್ನು ಮುಟ್ಟಿದ್ದು ಮಧ್ಯ ರಾತ್ರಿ ಒಂದು ಗಂಟೆಗೆ. ಪ್ರತಿ ಹಂತದಲ್ಲೂ ನಮ್ಮ ಕೆಲಸದ ಮೇಲೆ ಲೋಕಾಯುಕ್ತರು ನಿಗಾ ಇಟ್ಟಿದ್ದರು. ತಂಡದಲ್ಲಿದ್ದವರಿಗೆ ಫೋನ್ ಮಾಡಿ ಏನಾಗುತ್ತಿದೆ ಎಂದು ತಿಳಿದು ಕೊಳ್ಳುತ್ತಿದ್ದರು. ಕೊನೆಗೆ ಎಲ್ಲವೂ ಮುಗಿದ ನಂತರವೇ 'ಒಳ್ಳೆ ಕೆಲಸ ಮಾಡಿದ್ದೀರಿ. ಈಗ ನಾನು ನಿದ್ದೆ ಮಾಡುವೆ' ಎಂದರು. ಆಗ ರಾತ್ರಿ ಎರಡೂವರೆ ಗಂಟೆ ಆಗಿತ್ತು."

ಇಂತಹ ಸಂತೋಷ್ ಹೆಗ್ಡೆ ಅವರೊಂದಿಗೆ ನಾನು ಒಂದೆರಡು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೆ ಹೊರತು ಅವರೊಂದಿಗೆ ಎಂದೂ ಕೂತು ಮಾತನಾಡಿರಲಿಲ್ಲ. ಕಳೆದ ಮಾರ್ಚ್ ತಿಂಗಳಲ್ಲಿ 'ಲಂಕೇಶ್ 76' ಕಾರ್ಯಕ್ರಮವನ್ನು ರೂಪಿಸುತ್ತಿದ್ದಾಗ ಅದಕ್ಕೆ ಹೆಗ್ಡೆ ಅವರನ್ನು ಕರೆಯಬೇಕು ಎಂದು ನಮ್ಮ ತಂಡ ನಿರ್ಧರಿಸಿತು. ಆಗ ಲೋಕಾಯುಕ್ತ ಆಫೀಸಿನಲ್ಲಿ ಹಿರಿಯ ಅಧಿಕಾರಿಯಾಗಿರುವ ಮಿತ್ರ ರಿಯಾಜ್ ಅವರಿಗೆ ಫೋನ್ ಮಾಡಿ ತಿಳಿಸಿದೆ. ರಿಯಾಜ್ ಅವರು ಹೆಗ್ಡೆ ಅವರಿಗೆ ಅಪ್ಪನ ಬಗ್ಗೆ ಮತ್ತು ನಮ್ಮ ತಂಡದ ಬಗ್ಗೆ ಹೇಳಿದ ನಂತರ ಹೆಗ್ಡೆ ಅವರಿಗೇ ಫೋನ್ ಮಾಡಿದೆ. ತಮ್ಮ ಡೈರಿಯನ್ನು ಚೆಕ್ ಮಾಡಿದ ನಂತರ ನಮ್ಮ ಕಾರ್ಯಕ್ರಮಕ್ಕೆ ಬರುವುದಾಗಿ ಹೆಗ್ಡೆ ಅವರು ಹೇಳಿದರು. ಆಗ ನಾನು "ಆಹ್ವಾನಪತ್ರ ಪ್ರಿಂಟ್ ಆದನಂತರ ತಮ್ಮನ್ನ ಭೇಟಿ ಆಗಿ ಆಹ್ವಾನಿಸುತ್ತೇನೆ" ಅಂದೆ. ಅದಕ್ಕೆ ಹೆಗ್ಡೆ ಅವರು "ಅಷ್ಟೆಲ್ಲ ತೊಂದರೆ ತೆಗೆದುಕೊಳ್ಳಬೇಡಿ. ನಾನು ಬರುತ್ತೇನೆ" ಎಂದು ಹೇಳಿದರು. ಅವರ ಸ್ಥಾನದಲ್ಲಿ ಬೇರೆಯಾರಾದರು ಇದ್ದರೆ ಅವರು ಪ್ರತಿಷ್ಠೆ ಮೇಲೆ ನಿಂತಿರುತ್ತಿದ್ದರು. ಆದರೆ ಹೆಗ್ಡೆ ಅವರು ಹಾಗಲ್ಲ ಎಂಬುದನ್ನು ಗಮನಿಸಿದರೆ ಅವರ ಸರಳತೆ ಅರ್ಥವಾಗುತ್ತದೆ. 'ಲಂಕೇಶ್ 76' ಕಾರ್ಯಕ್ರಮದ ಹೈಲೈಟ್ ಹೆಗ್ಡೆಯವರೇ ಆಗಿದ್ದರು.

ಅದಾದನಂತರ ನಾನು ಅವರನ್ನು ಮತ್ತೆ ಭೇಟಿ ಆಗಿದ್ದು ಅವರು ಲೋಕಾಯುಕ್ತ ಸ್ಥಾನದಿಂದ ನಿವೃತ್ತರಾಗುವ ಹಿಂದಿನ ದಿನ. ಅಂದು ಸುವರ್ಣ ಟಿವಿ 'ಇಂತಿ ನಿಮ್ಮ ಸಂತೋಷ್ ಹೆಗ್ಡೆ' ಎಂಬ ಚರ್ಚೆಗೆ ನನ್ನನ್ನೂ ಕರೆದಿದ್ದರು. ಆಗಿನ್ನೂ ಯಡ್ಡಿಯ ರಾಜೀನಾಮೆ ನಾಟಕ ಮುಂದುವರೆದಿತ್ತಾದ್ದರಿಂದ ಚರ್ಚೆಯ ಮಧ್ಯೆ 'ಬ್ರೇಕಿಂಗ್ ನ್ಯೂಸ್'ಗಾಗಿ ನಮಗೆ ಹಲವಾರು ನಿಮಿಷಗಳ ಬ್ರೇಕ್ ಸಿಗುತ್ತಿತ್ತು. ಅಂತಹ ಒಂದು ಬ್ರೇಕ್ ಸಂದರ್ಭದಲ್ಲಿ ನಾನು ಹೆಗ್ಡೆ ಅವರಿಗೆ "ಇವತ್ತು ಒಂದು ರಾಜ್ಯದ ಮುಖ್ಯಮಂತ್ರಿಯ ರಾಜೀನಾಮೆಗೆ ನಿಮ್ಮ ಶ್ರಮವೇ ಕಾರಣವಾಗಿದೆ. ಆದರೆ ನಿಮ್ಮ ಆಗಮನಕ್ಕೂ

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಮುನ್ನ ಇದ್ದ ಲೋಕಾಯುಕ್ತರಾದ ವೆಂಕಟಾಚಲ ಅವರು ಕೇವಲ ಮಾಧ್ಯಮಗಳ ಮುಂದೆ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸಿದ್ದರೆ ವಿನಃ ಹೆಚ್ಚಿನದ್ದನ್ನು ಸಾಧಿಸಿರಲಿಲ್ಲ" ಎಂದೆ. ಬೇರೆಯವರು ನನ್ನ ಈ ಶ್ಲಾಘನೆಯಿಂದ ಸಂತೋಷ ಪಡುತ್ತಿದ್ದರು. ಆದರೆ ಹೆಗ್ಡೆ ಅವರು ಎಂತಹ ಸಜ್ಜನ ಅಂದರೆ ಅವರು "ಇಲ್ಲ, ನ್ಯಾಯಮೂರ್ತಿ ವೆಂಕಟಾಚಲ ಅವರು ಲೋಕಾಯುಕ್ತ ಎಂಬ ಶಕ್ತಿಶಾಲಿ ಸಂಸ್ಥೆ ಇದೆ ಎಂಬುದರ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸಿದರು. ಅದೂ ಒಂದು ದೊಡ್ಡ ಸಾಧನೆಯೇ" ಎಂದಾಗ ಅವರ ಬಗೆಗಿನ ಅಭಿಮಾನ ಹೆಚ್ಚಿತು!

ನಿಮಗೆಲ್ಲರಿಗೂ ಗೊತ್ತಿರುವಂತೆ ಲೋಕಾಯುಕ್ತ ಹೆಗ್ಡೆ ಅವರು ಅಕ್ರಮ ಗಣಿಗಾರಿಕೆ ಕುರಿತು ಸಲ್ಲಿಸಿರುವ ವರದಿಯನ್ನು ನಾವು ಪ್ರಕಟಮಾಡಿ ಕಡಿಮೆ ದರದಲ್ಲಿ ಮಾರುತ್ತಿದ್ದೇವೆ (ಇನ್ನ ಹತ್ತು ದಿನಗಳಲ್ಲಿ ಆ ವರದಿಯ ಸಂಕ್ಷಿಪ್ತ ಕನ್ನಡ ಅನುವಾದವೂ ಹೊರಬರಲಿದೆ. ಅದನ್ನು ವೆಂಕಟೇಶ್ ಎಂಬ ವಕೀಲರು ಅನುವಾದಿಸುತ್ತಿದ್ದಾರೆ). ಮೊನ್ನೆ ಎಐಎಸ್ ಎಫ್ ಎಂಬ ವಿದ್ಯಾರ್ಥಿ ಸಂಘಟನೆ ಭ್ರಷ್ಟಾಚಾರದ ವಿರುದ್ಧ ರಾಜ್ಯದಾದ್ಯಂತ ಒಂದು ಜಾಥಾ ಹೊರಡಿಸಿತು. ಅದರ ಉದ್ಘಾಟನೆಗೆ ಹೆಗ್ಡೆ ಅವರಿಂದಲೇ ಆಯಿತು. ಆವತ್ತು ಹೆಗ್ಡೆ ಅವರಿಗೆ ಅವರ ವರದಿಯ ಪ್ರತಿಯೊಂದನ್ನು ನೀಡಿದೆ. ಅವರು ಮುಗುಳ್ನಗುತ್ತಾ ಅದನ್ನು ಸ್ವೀಕರಿಸಿ "ಥ್ಯಾಂಕ್ಸ್" ಅಂದರು.


ಈಗ ರಾಜ್ಯಕ್ಕೆ ಹೊಸ ಲೋಕಾಯುಕ್ತರಾಗಿ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಅವರು ಬಂದಿದ್ದಾರೆ. ಅವರು ತಮ್ಮ ಅವಧಿಯನ್ನು ಯಡ್ಡಿಯ ವಿರುದ್ಧ ಎಫ್‌ಐಆರ್ ಅನ್ನು ದಾಖಲಿಸುವ ಮೂಲಕ ಪ್ರಾರಂಭಿಸಿರುವುದನ್ನು ನೋಡಿದರೆ ರಾಮ ಭಕ್ತ ಯಡ್ಡಿ ಸದ್ಯದಲ್ಲೇ ಕೃಷ್ಣನ ಜನ್ಮಸ್ಥಾನ ಸೇರುವ ಸಾಧ್ಯತೆಗಳು ಗೋಚರಿಸುತ್ತಿವೆ.


ಅದೇನೇ ಇರಲಿ, ಹೆಗ್ಡೆ ಅವರು ಈಗ ನಿವೃತ್ತಿ ಹೊಂದಿದ್ದಾರೆ. ತಮ್ಮ ಮಡದಿಯೊಂದಿಗೆ ಒಂದು ಟೂರ್, ಅಮೆರಿಕದಲ್ಲಿರುವ ತಂಗಿ ಮನೆಗೆ ಭೇಟಿ, ಇತ್ಯಾದಿ ಯೋಜನೆಗಳನ್ನು ಅವರು ಹಾಕಿಕೊಂಡಿದ್ದಾರೆ. ಆದರೂ ಅವರು ಭ್ರಷ್ಟಾಚಾರದ ವಿರುದ್ಧ 'ಸ್ವತಂತ್ರ ಸ್ಪೀಕರ್' ಆಗಿ ಮುಂದುವರೆಯುವುದಾಗಿ ಭರವಸೆ ನೀಡಿದ್ದಾರೆ.

ನಮ್ಮ ಲಂಕೇಶ್ ಬಳಗದ ಪರವಾಗಿ ಲೋಕಾಯುಕ್ತ ಹೆಗ್ಡೆ ಅವರಿಗೆ ನೆಮ್ಮದಿಯ ಬೀಳ್ಕೊಡುಗೆ ಮತ್ತು ಹೀರೋ ಹೆಗ್ಡೆಗೆ ಪ್ರೀತಿಯ ಸ್ವಾಗತ....

ಖತರ್‌ನಾಕ್ ನಿರಾಣಿಯ ಲಿಂಗಾಯತ ಕ್ಯಾಕಸ್!

ಈತ ಗೆಲ್ಲಿಸಿದ ಜನರಿಗೆ ನಿಷ್ಠನಾಗಿರಬೇಕಿತ್ತು. ಆದರೆ ತನ್ನ ಸಕಲ ನಿಯತ್ತುಗಳನ್ನೂ ಕಳ್ಳರ ಗುರು ಯಡಿಯೂರಪ್ಪನ ಪದತಲಕ್ಕೆ ಬಿಸಿದುಕೊಂಡ. ತಾನೇ ಬಡ ರೈತನ ಮಗನಾಗಿದ್ದರೂ ಬಡಜನರ ಆರ್ತನಾದಕ್ಕೆ ಶಾಶ್ವತ ವಾಗಿ ಕಿವುಡಾದ. ತನ್ನದೇ ಕ್ಷೇತ್ರದ ಜನರ ದಾರುಣ ಬದುಕಿನೆಡೆಗೆ ಕುರುಡುತನ ಕವುಚಿಕೊಂಡ. ಆದರೂ ಕೂಡಾ ಯಡಿ ಯೂರಪ್ಪನೆದುರು ಹಿಡಿದ ಬಕೀಟು ಕೈ ಬಿಡಲಿಲ್ಲ. ಅದರ ಪರಿಣಾಮ ವಾಗಿ ಕರ್ನಾಟಕದ ಬೃಹತ್ ಕೈಗಾರಿಕಾ ಸಚಿವ ಗಿರಿ ಮುಡಿಗೇರಿತು. ಅದು ಎರಡನೆ ಯ ಬಾರಿಯೂ ಕೈತಪ್ಪಲಿಲ್ಲ. ಹಾಗಂತ ಈತನ ಕಡೆಯಿಂದ ಒಂದೇ ಒಂದು ಜನಪರ ಕೆಲಸಗಳಾಗಿಲ್ಲ; ಆಗುವ ಲಕ್ಷಣಗಳೂ ಇಲ್ಲ!







ಇದು ಯಡಿಯೂರಪ್ಪನ ನೆಂಟ ಮುರುಗೇಶ್ ನಿರಾಣಿ 'ಯಶೋಗಾಥೆ'ಯ ಸಂಕ್ಷಿಪ್ತ ವೃತ್ತಾಂತ.

ಯಡ್ಡಿ ಮತ್ತು ನಿರಾಣಿ ಪರಸ್ಪರ ನೆರಳು ಗಳಂತೆ ಅನುಸರಿಸಿಕೊಂಡು ಹೋಗುತ್ತಿರು ವುದರ ಹಿಂದೆ ದೊಡ್ಡಮಟ್ಟದ ವಂಚನೆ ಯಿದೆ. ಇವರಿಬ್ಬರ ನಡುವೆ ಅಪ್ಪಟ ಕೊಡು ಕೊಳ್ಳುವಿಕೆಯ ವ್ಯವಹಾರವೂ ಚಾಲ್ತಿ ಯಲ್ಲಿದೆ. ದುರಂತವೆಂದರೆ, ಇವರಿಬ್ಬರ ಅಪ್ರತಿಮ ಸ್ನೇಹಕ್ಕೆ ಸರ್ಕಾರಿ ಭೂಮಿ, ಫಲವತ್ತಾದ ಕೃಷಿ ಉಂಬಳಿಗಳು ಎಗ್ಗಿಲ್ಲದೆ ಬಲಿಬೀಳುತ್ತಿವೆ.

ಕಳ್ಳ ಯಡಿಯೂರಪ್ಪ ವಿಶ್ವ ಬಂಡವಾಳ ಹೂಡಿಕೆದ್ದಾರರ ಸಮಾವೇಶ ಮಾಡಿ ಕ್ರಾಂತಿಯ ಭ್ರಮೆ ಬಿತ್ತಿದನಲ್ಲಾ? ಇದರ ಹಿಂದಿದ್ದದ್ದು ಕೂಡಾ ನಿರಾಣಿ-ಯಡ್ಡಿಗಳ ಜಂಟಿ ಲೂಟಿಯ ಸಂಚು. ಸದರಿ ನಾಟಕ ಫ್ಲಾಪ್ ಆದಂತೆ ಕಂಡರೂ ಈ ಜೋಡಿಯ ಜೋಳಿಗೆ ತುಂಬಿರುವುದು ಸತ್ಯ. ಕೈಗಾರಿಕಾ ಕ್ರಾಂತಿ, ಸಾವಿರಗಟ್ಟಲೆ ಉದ್ಯೋಗ ಸೃಷ್ಟಿಸಿ ನಿರುದ್ಯೋಗವನ್ನು ಹೊಡೆದಟ್ಟುವ ಬಡಬಡಿಕೆಗಳೆಲ್ಲ ತೋರಿಕೆಯಷ್ಟೆ. ಆದರ ಹಿಂದಿದ್ದದ್ದು ವಿಶ್ವಮಟ್ಟದ ಬಂಡವಾಳಿಗರೊಂದಿಗೆ ಕಾಂಟ್ರ್ಯಾಕ್ಟು ಬೆಳೆಸುವ ಹುನ್ನಾರ. ಕರ್ನಾಟಕದಲ್ಲಿ ಯಾವ್ಯಾವ ಉದ್ಯಮಿಗಳು ಬಂಡವಾಳ ಹೂಡಿದರೋ ಗೊತ್ತಿಲ್ಲ, ಆದರೆ ಯಡ್ಡಿ-ನಿರಾಣಿ ಸೇರಿದಂತೆ ಹಲವರು ವಿದೇಶೀ ಕಂಪೆನಿಗಳಲ್ಲಿ ಹಣ ಹೂಡಿರುವುದಂತೂ ಖರೇ!

ಸೂಕ್ಷ್ಮವಾಗಿ ಗಮನಿಸಿದರೆ ಈ ಅಕ್ರಮ ಗಳ ವೃಕ್ಷ ಯಡ್ಡಿ ದೇಖಾರೇಖಿಯಲ್ಲಿ ನಿರಾಣಿ ಯ ಮೂಲಕ ತರಹೇವಾರಿ ರೀತಿಯಲ್ಲಿ ಟಿಸಿಲೊಡೆದಿರುವ ಅಂಶ ಮನದಟ್ಟಾಗುತ್ತದೆ. ಯಡ್ಡಿ-ನಿರಾಣಿ ನೇತೃತ್ವದಲ್ಲೇ ಲಿಂಗಾಯತ ಕ್ಯಾಕಸ್ಸೊಂದನ್ನು ನಿರ್ಮಿಸಿಕೊಂಡಿದ್ದಾನೆ. ಇದರಡಿಯಲ್ಲೇ ತರಹೇವಾರಿ ಕೆಲಸಗಳು ನಡೆಯುತ್ತಿವೆ. ಇಲ್ಲಿ ಹುಟ್ಟುವ ರೂಪಾಯಿ ರೂಪಾಯಿಗೂ ಸಕಲರೂ ಪಿತೃಗಳೇ! ಈ ತಂಡ ನಡೆಸುತ್ತಿರುವ ಹಣ ಬಾಚುವ ಜಾಲ ನಿಜಕ್ಕೂ ಕುತೂಹಲಕಾರಿ ಯಾಗಿದೆ.


ಈ ತಂಡದಲ್ಲಿ ಚಂದ್ರಕಾಂತ ಬೆಲ್ಲದ್, ಪಿಡಬ್ಲ್ಯೂಡಿ ಸಚಿವ ಸಿ.ಎಂ. ಉದಾಸಿ, ಶಾಸಕ ಶಿವಕುಮಾರ್ ಉದಾಸಿ, ನೀರಾವರಿ ಸಚಿವ ಬಸವರಾಜ ಬೊಮ್ಮಾಯಿಗಳು ಪ್ರಮುಖರು. ಇವರೆಲ್ಲರೂ ಕಬಳಿಸುವ ವಿಚಾರದಲ್ಲಿ ಯಡ್ಡಿಯ ಖಾಸಾ ನೆಂಟರು. ಗಮನೀಯ ಸಂಗತಿಯೆಂದರೆ, ಕಳ್ಳ ಗಣಿ ಕಂಪೆನಿಯಿಂದ ಯಡಿಯೂರಪ್ಪನ ಪ್ರೇರಣಾ ಟ್ರಸ್ಟ್‌ಗೆ ಕೋಟಿಕೋಟಿ ಬಂದು ಬಿದ್ದಿದೆಯಲ್ಲಾ? ಅದೇರೀತಿ ಚಂದ್ರಕಾಂತ ಬೆಲ್ಲದ್‌ನ ಬೆಲ್ಲದ್ ಅಂಡ್ ಕಂಪೆನಿಗೂ 50 ಲಕ್ಷ ರೂಪಾಯಿ ತಲುಪಿದೆ. ಇದೂ ಕೂಡ ದಂಧೆಯೊಂದರ ಬಾಬತ್ತು. ಈ ಹಣಕ್ಕೆ ಸದರಿ ಪಟಾಲಂನ ಸಕಲ ಸದಸ್ಯರೂ ಪಾಲುದಾರರೇ!

ಇವರೆಲ್ಲರ ಬಳಿಯೂ ಪರಸ್ಪರ ಅನುಸರಿಸಿಕೊಂಡು ಒಳ ಒಪ್ಪಂದಗಳೊಂದಿಗೆ ಕಾರ್ಯಾಚರಿಸಬಹುದಾದಂಥ ಖಾತೆಗಳೇ ಇವೆ. ಉದಾಸಿಯ ಪಿಡಬ್ಲ್ಯೂಡಿ ಖಾತೆಯಡಿಯಲ್ಲಿ ಕೋಟಿಗಳ ಲೆಕ್ಕದಲ್ಲಿ ಕಾಮಗಾರಿಗಳು ನಡೆಯುವುದರಿಂದ ಸಿಮೆಂಟಿನ ಅವಶ್ಯಕತೆ ಇದ್ದೇ ಇರುತ್ತದೆ. ಆ ಅವಶ್ಯಕತೆಯನ್ನು ನಿರಾಣಿ ಮಾಲೀಕತ್ವದ ಸಿಮೆಂಟ್ ಫ್ಯಾಕ್ಟರಿಗಳು ಪೂರೈಸುತ್ತವೆ. ಇನ್ನು ಬಸವರಾಜ ಬೊಮ್ಮಾಯಿಯದ್ದು ಬೃಹತ್ ಜಲ ಸಂಪನ್ಮೂಲ ಖಾತೆ. ಇದೂ ಕೂಡ ಈ ಪಟಾಲಂಗೆ ಸಂಪದ್ಭರಿತ ಖಾತೆಯಾಗಿ ಬದಲಾಗಿದೆ. ಹೊಸಾ ನಾಲೆ,



ಹಳೆಯದಕ್ಕೆ ತೇಪೆ ಅಂತೆಲ್ಲ ಸಿಮೆಂಟು ಬೇಕೇಬೇಕು. ಇದಕ್ಕೂ ಕೂಡಾ ನಿರಾಣಿ ಫ್ಯಾಕ್ಟರಿಯಿಂದಲೇ ಸಿಮೆಂಟ್ ಪೂರೈಕೆಯಾಗುತ್ತದೆ. ಉದಾಸಿಯ ಪುತ್ರರತ್ನ ಶಿವಕುಮಾರ ನದ್ದು ಕಾಂಟ್ರಾಕ್ಟರುಗಳಿಂದ ಹಣ ಪೀಕುವ ಕೆಲಸ. ಇದೂ ಕೂಡಾ ಈ ಪಟಾಲಂನ ಪ್ರಮುಖ ಆದಾಯ ಮೂಲವಾಗಿದೆ.

ಈ ಪಡೆಯನ್ನು ಕೇವಲ ಇಂಥ ದಂಧೆ ಗಳಿಗಷ್ಟೇ ಸೀಮಿತವಾಗಿಸುವಂತಿಲ್ಲ, ಇದರ ಅಂತರಾಳದ ಪದರುಗಳ ಅನೇಕರು, ಅದರಲ್ಲಿ ಲಿಂಗಾಯತ ಸಮುದಾಯವನ್ನು ಸೆಳೆಯುವ ಸಂಚೂ ಒಂದು. ಈ ತಂಡದ ಸದಸ್ಯರೆಲ್ಲಾ ದಂಧೆಯ ಒಗ್ಗಟ್ಟನ್ನೇ ಲಿಂಗಾ ಯತರ ಬಲದಂತೆ ಬಿಂಬಿಸಲು ಶತಪ್ರಯತ್ನ ನಡೆಸಿ ಯಶಸ್ವಿ ಯಾಗಿದೆ. ನಿರಾಣಿಯಂತೂ ಇದೇ ಸಂಚಿನೊಂದಿಗೆ ಅಡ್ಡಾಡುತ್ತಾ ಲಿಂಗಾಯತ ಸಮುದಾಯ ಯಡ್ಡಿ ಪರವಿರಲು ಶತಪ್ರಯತ್ನ ನಡೆಸಿದ್ದಾನೆ. ಆದರಿದು ಅಕ್ಷರಶಃ ವಾಮಮಾರ್ಗ.



ದುರಂತವೆಂದರೆ ಜನ್ಮತಃ ಜಡ ಮನುಷ್ಯ ಜಗದೀಶ್ ಶೆಟ್ಟರ್‌ಗಿದು ಅರ್ಥವಾಗಲೇ ಇಲ್ಲ. ನಿರಾಣಿ ಪಟಾಲಂಗೆ ಹೋಲಿಸಿದರೆ ಈತ ವಾಸಿ. ಆದರೆ ಪಕ್ಕದಲ್ಲೇ ಪ್ರಳಯವಾದರೂ ಸಮಾಧಾನದಿಂದ ಪ್ರತಿಕ್ರಿಯಿಸುವಂಥ ಧಾಡಸೀ ಮನುಷ್ಯ. ಈತನಿಗೆ ಯಡ್ಡಿ ಟೀಮು ತನ್ನದೇ ನೆಲದ ತನ್ನ ಸಮುದಾಯದವರನ್ನೇ ಒಲಿಸಿಕೊಳ್ಳಲು ಮಾಡು ತ್ತಿರುವ ಕಸರತ್ತುಗಳು ಗೊತ್ತಾಗಲೇ ಇಲ್ಲ. ತನ್ನ ಪಕ್ಷದ ಲಿಂಗಾಯತ ಶಾಸಕ, ಸಚಿವರೇ ಗುಂಪಾಗಿ ಬಲಾಢ್ಯ ರಾಗುತ್ತಿರುವುದನ್ನು ತಡೆಯಲು ಮನಸ್ಸು ಮಾಡಲೂ ಇಲ್ಲ. ಇದ[...] ಪರಿಣಾಮವೆಂಬಂತೆ ಶೆಟ್ಟರ್ ಮುಖ್ಯಮಂತ್ರಿ ಕುರ್ಚಿ[...] ಹತ್ತಿರಕ್ಕೆ ಹೋಗಿ ಎಗರಿಬಿದ್ದಿದ್ದಾರೆ.

ಶೆಟ್ಟರ್ ಬಿದ್ದಲ್ಲೇ ಮಂಪರಿಗೆ ಜಾರಿದರೆ ಮತ್ತೊಂದ[...] ರಾಜಕೀಯವಾಗಿ ಮೇಲೇಳಲಾರದಂಥ ಅಪಾಯಗ[...] ಹೆಚ್ಚಿವೆ. ಯಾಕೆಂದರೆ ಇನ್ನೊಂದು ಸುತ್ತು ಲಿಂಗಾಯತರ[...] ಒಗ್ಗೂಡಿಸಿ ಯಡ್ಡಿಯನ್ನು ಕಳ್ಳನ ಇಮೇಜ್‌ನಿಂದ ಪಾ[...] ಮಾಡಲು ನಿರಾಣಿ ಅಂಡ್ ಟೀಂ ಟೊಂಕಕಟ್ಟಿ ಫೀಲ್ಡಿ[...] ದಿದೆ. ಖುದ್ದು ನಿರಾಣಿಯೇ ದುಬಾರಿ ಬೆಂಜ್ ಕಾರ[...] ಯಡ್ಡಿಗೆ ಗಿಫ್ಟ್ ಕೊಟ್ಟಿದ್ದಾನೆ. ಯಡ್ಡಿ ಹೊಸಾ ಕಾರ[...] ಸಿದ್ಧಗಂಗಾ ಶ್ರೀಗಳನ್ನು ಒಂದು ರೌಂಡ್ ಹೊಡಿಸಿ ಹೊ[...] ನಾಟಕವೊಂದಕ್ಕೆ ಸಜ್ಜಾಗಿದ್ದಾನೆ.

ಇನ್ನು ನಿರಾಣಿಯ ಖತರ್‌ನಾಕ್ ಬುದ್ಧಿಯ ವಿಚಾ[...] ಯಡ್ಡಿಗೆ ಆಪ್ತನಾಗಿ ಬದಲಾಗಿರುವ ಈತ ತರಹೇವಾ[...] ದಂಧೆಗಳಲ್ಲಿ ಎಲ್ಲರಿಗಿಂತ ಹೆಚ್ಚಿನ ಲಾಭ ಪಡೆಯುತ್ತಿದ್ದಾ[...] ಮುಧೋಳ ತಾಲ್ಲೂಕಿನಲ್ಲಿ ವಿಜಯಲಕ್ಷ್ಮಿ ಬ್ರ್ಯಾಂಡ್ ಸಿಮೆಂ[...] ಕಾರ್ಖಾನೆಗೆ ನಿರಾಣಿಯೇ ಮಾಲೀಕ. ಇದರಲ್ಲಿ ಕೋಟಿಗಟ್ಟ[...] ಕರೆಂಟ್ ಬಿಲ್ ವಂಚಿಸಿದ ಪ್ರಕರಣದಲ್ಲೇ ಈತ ಎಂದೋ[...] ಜೈಲು ಪಾಲಾಗಬೇಕಿತ್ತು. ಯಡ್ಡಿ ಕಟಾಕ್ಷ ದಿಂದ ಹೇಗೋ[...] ಪಾರಾಗಿದ್ದ. ಆದರೀಗ ಅದೇ ತಾಲ್ಲೂಕಿನ ಯಾರವಾಡ[...] ರತ್ನಾ ಸಿಮೆಂಟ್ ಕಾರ್ಖಾನೆಯನ್ನು ಖರೀದಿಸಿದ್ದಾನೆ. ಇ[...] ಅಪ್ಪಟ ವಂಚನೆ. ಈ ಕಾರ್ಖಾನೆ ನಷ್ಟದಿಂದ ಲಾಕ್‌ಔ[...] ಆಗಿತ್ತು. ಇದನ್ನು ವಶ ಪಡಿಸಿಕೊಂಡ ಸರ್ಕಾರ ಅದ[...] ಪುಡಿ ಗಾಸಿಗೆ ನಿರಾಣಿಗೆ ಮಾರಿದೆ. ಇದರ[...] ಇದೀಗಲೇ ಜೈಲುಪಾಲಾಗಿರುವ ಕಟ್ಟಾ ವ[...] ಜಗದೀಶ ಹಾಗೂ ಯಡ್ಡಿ ಮಗನ ಪಾಲ[...] ಯೆಂಬ ಗುಮಾನಿಗಳೂ ಇವೆ. ಅದರಿ[...] ನಿರಾಣಿ ಭರಪೂರ ಫಸಲು ತೆಗೆಯುವು[...] ಖಚಿತ. ಯಾಕೆಂದರೆ ಪಿಡಬ್ಲ್ಯೂ[...] ಜಲಸಂಪನ್ಮೂಲ ಖಾತೆಗಳು ಈತನ ತಂಡ[...] ಸದಸ್ಯರ ಕೈಯಲ್ಲಿರು ವುದರಿಂದ ಅವು[...] ಕಾಮಗಾರಿಗಳಿಗೆ ಇಲ್ಲಿಂದಲೇ ಸಿಮೆಂ[...] ಪೂರೈಕೆಯಾಗುವುದು ಖಚಿತ.

ನಿರಾಣಿ ಬಡವರ ಕೃಷಿ ಭೂಮಿ[...] ಮೇಲೆ ಕಾರ್ಖಾನೆ ವಿಸ್ತರಿಸಿದ ಪ್ರಕರಣವೊಂದ[...] ತನಿಖೆಯಾದರೂ ಜೈಲು ಸೇರುವುದು ಖಂಡಿತ. ಈತ[...] ಪಟಾಲಂನ ಪ್ರತಿಯೊಬ್ಬರೂ ಜೈಲು ಸೇರಲು ಅರ್ಹ[...] ಯಿರುವವರೆ. ಇವರ ಖದೀಮ ವೃತ್ತಾಂತವನ್ನು ಇನ್ನಾದರೂ[...] ಈ ಭಾಗದ ಲಿಂಗಾಯತರು ಅರ್ಥೈಸಿಕೊಂಡು ದೂರವಿ[...] ಬೇಕಿದೆ. ಅದಾಗದಿದ್ದರೆ ಮುಂದೊಂದು ದಿನ ಪಶ್ಚಾತ್ತಾ[...] ಪಡಬೇಕಾಗುವುದು ನಿಶ್ಚಿತ.


-ಮಹಾಲಿಂಗಪ್ಪ ಆಲಬಾ[...]

ಕಾಗೇರಿ ಕ್ಯಾಂಪಸ್‌ನಲ್ಲಿ ಹಗರಣದ ವಾಸನೆ

ಭಂಡ ಬಿಜೆಪಿ ಸರ್ಕಾರ ಗಣಿಯಿಂದ ಹಿಡಿದು ಶಿಕ್ಷಣ ದವರೆಗೆ ಎಲ್ಲವನ್ನೂ ನುಂಗಲೆಂದೇ ಬಾಯ್ತೆರೆದು ಕೂತಿದೆ. ಕೆಲಸವಿಲ್ಲದವರಿಗೆ ನಿರುದ್ಯೋಗ ಭತ್ಯೆ ಕೊಡ್ತೀವಿ ಅಂತ ಯುವಜನತೆಯ ಬಾಯಿಗೆ ಸುಣ್ಣದ ಹಾಲನ್ನು ಸುರಿದೇ ಗದ್ದುಗೆಗೆ ಬಂದ ಚಡ್ಡಿ ಸರ್ಕಾರ ಭತ್ಯೆಯ ಮಾತಿರಲಿ, ಸಿಗಬೇಕಾದ ಉದ್ಯೋಗವನ್ನು ಮುಂದಿಟ್ಟುಕೊಂಡು 'ಕಮೀಷನ್' ದಂಧೆಗಿಳಿದಿರುವುದು ಮಾತ್ರ ಕರ್ನಾಟಕದ ಮೆಗಾ ದುರ್ದೈವ!

ಮೊನ್ನೆ ಮೊನ್ನೆಯಷ್ಟೇ ಆದರ್ಶ ವಿದ್ಯಾಲಯಗಳ ಪ್ರೌಢ ಶಾಲಾ ಶಿಕ್ಷಕರ ನೇಮಕಾತಿ ನಡೆದೇ ಹೋಯ್ತು, ಕ್ಷಮಿಸಿ ಮುಗಿದೇಹೋಯ್ತು ಯಾರೊಬ್ಬರ ಗಮನಕ್ಕೂ ಬರದಂತೆ! ಹಾಗೊಮ್ಮೆ ಬಂದಿದ್ದರೂ ತರಾತುರಿಯ ನೇಮಕಾತಿಯ ಆಘಾತವನ್ನು ಜೀರ್ಣಿಸಿಕೊಳ್ಳುವ ಮುನ್ನವೆ ಕೊನೆಯ ದಿನಾಂಕ ಖಾಲಿಯಾಗಿತ್ತು, ಒಂದಲ್ಲ, ಎರಡಲ್ಲ ಬರೋಬ್ಬರಿ 2268 ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಅನುಮಾನಾಸ್ಪದವಾಗಿ ಎರಡೆರಡೇ ದಿನದ ಅಂತರದಲ್ಲಿ ಮುಗಿದಿರುವುದು ನೋಡಿದರೆ ವಿಧಾನಸೌಧದ ಕಾಗೇರಿ ಕ್ಯಾಂಪಸ್‌ನಲ್ಲಿ ಹಗರಣವೊಂದು ಅಭಿವೃದ್ಧಿಯಾಗುತ್ತಿರುವುದು ಸ್ಪಷ್ಟವಾಗುತ್ತದೆ.

ನೇಮಕಾತಿಯ ಡ್ರಾಮಾ ಮೂಲಕ ಬಿ.ಎಡ್. ಆಕಾಂಕ್ಷಿಗಳ ಹಣೆಗೆ ವರ್ಟಿಕಲ್ ಗೆರೆ ಎಳೆಯುವ ಕೆಲಸ ಗಣೆ ಅವ್ಯವಹಾರಕ್ಕಿಂತ ವ್ಯವಸ್ಥಿತವಾಗಿ ನಡೆದಿದೆ ಎಂಬುದಂತೂ ಸುಳ್ಳಲ್ಲ. ಆರಂಭದಿಂದ ಅಂತ್ಯದವರೆಗೆ ಕಗ್ಗಂಟುಗಳೇ ಕಗ್ಗಂಟು. ಅಸಲಿಗೆ ಈ ನೇಮಕಾತಿ ಸರ್ಕಾರಿ ಶಾಲೆಗಳಿಗೋ ಅಥವಾ ಖಾಸಗಿ ಶಾಲೆಗಳಿಗೋ ಎಂಬ ಗೊಂದಲವೇ ಜನರ ತಲೆಯಲ್ಲಿ ಗಿರಕಿ ಹೊಡೆಯುತ್ತಿದೆ. ಸಾಮಾನ್ಯ ಜನರಿರಲಿ 'ಉದ್ಯೋಗ' ದುನಿಯಾದ ಪತ್ರಿಕೆ ಯೊಂದು ತನ್ನ ಮುಖಪುಟದಲ್ಲಿ ಇದೇ ಜಾಹೀರಾತಿನ ಕುರಿತಾಗಿ 'ಖಾಸಗಿ ವಿದ್ಯಾ ಸಂಸ್ಥೆಗಳಲ್ಲಿ ಶಿಕ್ಷಕರ ಹುದ್ದೆಗೆ ಅರ್ಜಿ' ಅಂತ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಅಚ್ಚಾಕಿಸಿತ್ತು, ನೆನಪಿರಲಿ, ಈ ಆದರ್ಶ ಶಾಲಾ ಯೋಜನೆಯ ಕಲ್ಪನೆ ಖುದ್ದು ನಮ್ಮ ಪ್ರಧಾನಿ ಮನಮೋಹನ ಸಿಂಗ್‌ರದ್ದು ಅರ್ಥಾತ್ ಕೇಂದ್ರ



ಅಸ್ಟ್ರಿಕ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
ವಿಜಯನಗರ, ಬೆಂಗಳೂರು 40
ASTRIX TECHNOLOGIES PVT. LTD.
ಉದ್ಯೋಗಾವಕಾಶ 2268 (ಟ್ರೈನ್ಡ್ ಗ್ರಾಜುಯೇಟ್ ಟೀಚರ್ಸ್) ಶಿಕ್ಷಕರು
[illegible]
14, 000/ 12,000 [illegible] 7,000/- [illegible] 74 [illegible] 6000/-
[illegible] PF & ESI [illegible]
SSLC, PUC, Degree, B.Ed. [illegible] 65 [illegible]
[illegible] www.astrix.co.in [illegible] 08-08-2011 [illegible] 5:30
[illegible] 09/08/2011 [illegible] 11/8/11 [illegible]
080- 41306328 / 41306329 / 41306330 / 41306331
[illegible] www.astrix.co.in [illegible]

ಆಗಸ್ಟ್ 1ರಂದು ಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತು


ASTRIX TECHNOLOGIES PVT. LTD.

ಸರ್ಕಾರದ್ದು. ಇನ್ನು ಅಲ್ಲಿಯ ದುಡ್ಡಲ್ಲಿ ಅನುಷ್ಠಾನದ ಶಾಸ್ತ್ರ ಮಾಡಿ ಮುಗಿಸುವ ಕರ್ತವ್ಯ ರಾಜ್ಯ ಸರ್ಕಾರದ್ದು. ಅಲ್ಲಿಗೆ ಇದು ಸಂಪೂರ್ಣವಾಗಿ ಸರ್ಕಾರದ ಯೋಜನೆಯ ಶಾಲೆಗಳ ನೇಮಕಾತಿ ಎಂಬುದಂತೂ ಖಾತರಿ ಯಾಯಿತು. ಪತ್ರಿಕೆಯವರಿಗೇ ಈ ಬಗ್ಗೆ ಸರಿಯಾಗಿ ಮಾಹಿತಿ ಇಲ್ಲದಷ್ಟು 'ಗುಪ್-ಗುಪ್' ವ್ಯವಹಾರ ನಡೆದಿದೆಯೆಂದ ಮೇಲೆ ಸಾಮಾನ್ಯರಿಗೆ ತಲುಪಿರುವ ಬಗ್ಗೆ ಕಾಗೇರಿ ಸಾಹೇಬರೇ ಭಗವದ್ಗೀತೆ ಮೇಲೆ ಪ್ರಮಾಣ ಮಾಡಬೇಕಷ್ಟೆ.

ಒಂದು ನೇಮಕಾತಿ ಅಂತ ಶುರುವಾದ ಮೇಲೆ ಕೆಲವಾದರೂ ಪ್ರಮುಖ ಪತ್ರಿಕೆಗಳಲ್ಲಿ ಜಾಹೀರಾತು ನೀಡಿ ಮಾಹಿತಿ ಮುಟ್ಟಿಸಬೇಕು. ನಂತರ ಅರ್ಜಿ ಗೀಚಲು ಒಂದಷ್ಟು ಕನಿಷ್ಠ ಸಮಯಾವಕಾಶವನ್ನಾದರೂ ಕೊಡಬೇಕು. ತದ ನಂತರದಲ್ಲಿ ಅಧಿಕಾರಿಗಳು, ಮಂತ್ರಿ ಮಹಾಶಯರುಗಳು ತಮ್ಮ ಪ್ರಭಾವವನ್ನು ಹಾಕ್ತಿದುವುದು ನಮ್ಮ ರಾಜ್ಯದ ವಾಡಿಕೆ. ಇದೆಲ್ಲವನ್ನು ಕಿಂಗೇರಿ ಮೋರಿಗೆ ಅರ್ಪಿಸಿದ ಶಿಕ್ಷಣ ಇಲಾಖೆ ನೇಮಕಾತಿಯನ್ನು ಒಂದು ಖಾಸಗಿ ಕಂಪನಿಗೆ ವಹಿಸಿಬಿಡುತ್ತೆ. ಆ ಏಜೆನ್ಸಿ ಕಂಪೆನಿಯಾದರೂ ಆರ್ಡರ್ ಸಿಕ್ಕ ತಕ್ಷಣ ತನ್ನ ಬಿಜಿನೆಸ್ ಪ್ರಾರಂಭಿಸುತ್ತೆ. ನೆಪಕ್ಕೆಂಬಂತೆ ಒಂದು ಪತ್ರಿಕೆಯಲ್ಲಿ ಜಾಹೀರಾತು ನೀಡಲಾಗುತ್ತೆ. ಜಾಹೀರಾತು ಪ್ರಕಟವಾದ ಸರಿಯಾಗಿ ಒಂದು ವಾರದ ಅವಧಿಯವರೆಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ ಎಂಬ ಆಘಾತವನ್ನೂ ಅದು ಪ್ರಚುರಪಡಿಸುತ್ತದೆ.

ಕೊನೆಯ ದಿನಾಂಕ ಮುಗಿದ ಕೂಡಲೇ ಅಂದರೆ 09-08-2011ಕ್ಕೆ ಮೆರಿಟ್ ಲಿಸ್ಟ್ ಪ್ರಕಟಿಸಲಾಗುತ್ತೆ, ಎರಡು ದಿನ ಬಿಟ್ಟು 11ರಂದು ದಾಖಲಾತಿ ಪರಿಶೀಲನೆ ನಡೆಸಲಾಗುತ್ತೆ, ಅದಕ್ಕೆ ಐದು ದಿನಕ್ಕೆ ಸರಿಯಾಗಿ ಅಪಾಯಿಂಟ್‌ಮೆಂಟ್ ಲೆಟರ್ ಕೂಡ ಅಭ್ಯರ್ಥಿಯ ಕೈಸೇರುತ್ತೆ. ಅಲ್ಲಿಗೆ ಆಯ್ಕೆ ಫಟಾಫಟ್ ಅಂತ ಮುಗಿದೇಹೋಗುತ್ತೆ, ಯಾರಾದರು ಈ ಪರಿಯ ವೇಗವನ್ನು ನಂಬಲು ಸಾಧ್ಯವಾ? ಎಷ್ಟೋ ಅಭ್ಯರ್ಥಿಗಳಿಗೆ ವಿಷಯ ಬಡಿಯುವ ವೇಳೆಗಾಗಲೇ ಕೊನೆಯ ದಿನಾಂಕ ಮುಗಿದೇಹೋಗಿತ್ತು.

ತಮಾಷೆ ವಿಷಯವೆಂದರೆ ಆ ಏಜೆನ್ಸಿ ಪತ್ರಿಕೆಯಲ್ಲಿ ಜಾಹೀರಾತು ನೀಡಿದ ದಿನ ಅದು ಹೇಳಿದ ವೆಬ್‌ಸೈಟ್ ತೆರೆದರೆ 'ಅರ್ಜಿಯನ್ನು ಶೀಘ್ರದಲ್ಲೇ ಅಪ್‌ಲೋಡ್ ಮಾಡಲಾಗುವುದು' ಎಂಬ ಕುಂಟುನೆಪ ಸ್ವಾಗತಿಸುತ್ತಿತ್ತು, ಇರುವುದೇ ಅತ್ಯಲ್ಪ ಸಮಯ ಅದರಲ್ಲೂ ಈ ವಿಳಂಬದ ಟೆಕ್ನಿಕ್ ಒಮ್ಮೆಲೇ ಎಲ್ಲವನ್ನು ಚಿತ್ತಲು ಮಾಡಿತ್ತು, ಅದೆಷ್ಟೋ 'ಮಿಂಚಿನ ಓಟ'ದಲ್ಲಿ ಕಾರ್ಯಾಚರಣೆ ನಡೆದಿರಬಹುದು.



ಆದರೆ ಈ ವರ್ಷ 'ಗ್ರಹಗತಿ' ಚೆನ್ನಾಗಿರುವ ಕೆಲವರಿಗಾದ[...] ಇದರ ಮಾಹಿತಿ ಸಿಕ್ಕು ಅರ್ಜಿಯ ಬಟನ್ ಒತ್ತಿರುತ[...] ಅವರಿಗಾದರೂ ನೀಟಾಗಿ ಕೆಲಸ ಸಿಗುವ ನಿರೀಕ್ಷೆಯ[...] ಬಹುದು ಎಂದುಕೊಂಡರೆ ಅದು ನಮ್ಮೆಲ್ಲರ ಮುತ್ಠಾಳತ[...] ಮೌಂಟ್ ಎವರೆಸ್ಟ್ ಅಷ್ಟೇ!


ಉದ್ಯೋಗವನ್ನು ಹೊರಗುತ್ತಿಗೆ ನೀಡುವ ಮೂ[...] ಖಾಸಗೀಕರಣಕ್ಕೆ ಮುಂದಾಗಿರುವ ಸರ್ಕಾರದ ಈ ಕ್ರ[...] ನಿಜಕ್ಕೂ ಆತಂಕಕಾರಿ. ಅಧಿಕಾರಕ್ಕೆ ಬಂದ ಸರ್ಕಾ[...] ಏನಿಲ್ಲವೆಂದರೂ ತನ್ನ ಜನತೆಗೆ ಭದ್ರತೆ ಒದಗಿಸುವು[...] ಅದರ ಕರ್ತವ್ಯ. ಈ ನಿಟ್ಟಿನಲ್ಲಿ ಉದ್ಯೋಗ ಸ[...] ಪ್ರಮುಖವಾದ ಅಂಶ. ಆದರೆ ಆ ಉದ್ಯೋಗಗಳ[...] ಖಾಸಗಿ ಕಂಪೆನಿಗಳಿಗೆ ಮಾರಿಕೊಂಡು ದಲ್ಲಾಳಿಗಳ ದಬ್ಬಾ[...] ಯನ್ನು ಪ್ರೋತ್ಸಾಹಿಸುವುದಾದರೆ ನಮಗೆ ಆಡಳಿತ ನಡೆಸ[...] ಸರ್ಕಾರ ಅಂತಾದರೂ ಏಕೆ ಬೇಕು? ಈ ಸಚಿವರುಗ[...] ಮಾಡುವ ಕೆಲಸವನ್ನೂ ಹೊರಗುತ್ತಿಗೆ ಕೊಟ್ಟು ನೆಮ[...] ಯಾಗಿರಬಹುದಲ್ಲವಾ? ಹೋಗಲಿ, ಶಿಕ್ಷಕನಿಗೆ ಪ್ರೊಫೆಷ[...] ಸೆಕ್ಯುರಿಟಿ ಇಲ್ಲವೆಂದ ಮೇಲೆ ಆತ ಪರಿಣಾಮಕಾರಿಯ[...] ಕಾರ್ಯನಿರ್ವಹಿಸಬಲ್ಲನೇ? ಶಿಕ್ಷಣದ ಗುಣಮ[...] ಸುಧಾರಿಸುವುದೇ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸಬೇಕ[...] ಶಿಕ್ಷಣ ಸಚಿವ ಕಾಗೇರಿ ಈ ದೇಶದಿಂದ ಹೊರಹೋ[...] ಬೇಕಾದ ಜನರ ಲಿಸ್ಟ್ ತಯಾರಿಸುವಲ್ಲಿ ಕಳೆದುಹೋಗಿದ[...]

ಶಿಕ್ಷಣದ ಗುಣಮಟ್ಟವನ್ನು ಸುಧಾರಿಸ[...] ಮಾತುಗಳನ್ನಾಡುತ್ತಾ ಟಿವಿ ಕ್ಯಾಮೆರಾಗಳನ್ನು ಆಕರ್ಷಿಸ[...] ಸಚಿವರಿಗೆ ಶೈಕ್ಷಣಿಕ ಸಂಶೋಧನೆಗಳ ಗಂಧವೂ ತಿಳಿದಂ[...] ಖ್ಯಾತ ಶಿಕ್ಷಣ ತಜ್ಞ ನಿರಂಜನ ಆರಾಧ್ಯರವರು ಹೇಳುವ[...]



ಲಾಡೆನ್ ಕೊಂದವರು ಖತಂ!

ತಾಲಿಬಾನಿಗಳು ಸೇಡು ತೀರಿಸಿಕೊಂಡಿದ್ದಾರೆ...!



ಉಗ್ರಗಾಮಿ ಒಸಾಮಾ ಬಿನ್‌ಲಾಡೆನ್‌ನನ್ನು ಕೊಂದಿದ್ದ ...ರಿಕನ್ ನೇವಿ ಸೀಲ್ ಕಮಾಂಡೊ ಪಡೆಯ ಕೆಲ ...ೋಧರ ಹತ್ಯೆಯಾಗಿದೆ.

ಕಳೆದ ಆಗಸ್ಟ್ 5 ರ ಶುಕ್ರವಾರ ರಾತ್ರಿ ಅಫಘಾನಿಸ್ತಾನ ...ೈಯದ್ ಅಬಿದ್ ಜಿಲ್ಲೆಯ ವಾರ್ಡರ್ ಪ್ರಾಂತ್ಯದಲ್ಲಿ ...ವತ್ತೊಂದು ಮಂದಿ ಅಮೆರಿಕನ್ ಸೇನಾ ಯೋಧರು ...ಲ್ಲಲ್ಪಟ್ಟರು. **Twin Rotor** ನ ಚಿನೋಕ್ ಹೆಲಿ...ಪ್ಟರ್ ಈ ಕಮಾಂಡೊಗಳನ್ನು ಕೂರಿಸಿಕೊಂಡು ಮೇಲ...ಹಾರಿದ ಕೆಲಕ್ಷಣಗಳಲ್ಲೇ ಮುರಿದು ಬಿತ್ತು. ಅಕ್ಕಪಕ್ಕದ ...ರ್ವತದ ಕೊರಕಲುಗಳಲ್ಲಿ ಕಾದಿದ್ದ ಅಫ್ಘಾನ್ ಗೆರಿಲ್ಲಾಗಳು ...ಕೆಟ್ ಪ್ರೊಪೆಲ್ಡ್ ಗ್ರೆನೇಡ್ ಚಲಾಯಿಸಿ ಅಮೆರಿಕದ ಮಿಲಿಟರಿ ಹೆಲಿಕಾಪ್ಟರ್ ಅನ್ನು ಕೆಡವಿದ್ದರು.

ಅದರಲ್ಲೇ ಲಾಡೆನ್‌ನನ್ನು ಮುಗಿಸಿದ ಸೀಲ್ ಟೀಂ 6 ...ಬ ಗುಂಪಿನ 25 ಕಮಾಂಡೋಗಳಿದ್ದರು. ಜೊತೆಗೊಬ್ಬ ...ಭಾಷಿ ಹಾಗೂ ಏಳು ಮಂದಿ ಅಫಘಾನಿ ಮುಗ್ಧ ...ಾ ಸಿಬ್ಬಂದಿಯೂ ಇತ್ತು. ಲಾಡೆನ್ ಹತ್ಯೆಯಾಗಿ ನೂರು ದಿನ ತುಂಬುವ ಮೊದಲೇ ಹತ್ಯೆ ಮಾಡಿದವರ ಹತ್ಯೆಯೂ ಆಗಿಹೋಗಿದೆ.

ಅಫಘಾನಿಸ್ತಾನ ಈಗ ಇರುವುದೇ ಹೀಗೆ

ಮೊನ್ನೆ ಸತ್ತ 31 ಅಮೆರಿಕನ್ ಸೈನಿಕರ ಲೆಕ್ಕವನ್ನು ಸೇರಿಸಿ ಹೇಳಬೇಕೆಂದರೆ ಅಫಘಾನಿಸ್ತಾನದಲ್ಲಿ ಸತ್ತ ಅಮೆರಿಕನ್ ಸೈನಿಕರ ಸಂಖ್ಯೆ 2583 ಕ್ಕೇರಿದೆ. ಜೊತೆಗೆ ಬ್ರಿಟನ್ನಿನ 378, ಕೆನಡಾದ 156, ಫ್ರಾನ್ಸ್‌ನ 72, ಜರ್ಮನಿಯ 53.... ಹೀಗೆ ಇನ್ನು ಒಂದು ಸಾವಿರದಷ್ಟು ವಿದೇಶಿ ಸೈನಿಕರು ಅಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ.

ಈ ಯುದ್ಧ ಅದೆಷ್ಟು ಘೋರವಾಗಿದೆಯೆಂದರೆ ಕಳೆದ ನಾಲ್ಕು ವರ್ಷಗಳಲ್ಲಿ ಬರೀ ಬಾಂಬ್ ಸ್ಫೋಟಗಳಲ್ಲೇ ಎಂಟು ಸಾವಿರ ನಾಗರಿಕರು ಸತ್ತಿದ್ದಾರೆ. ಕನಿಷ್ಠ 2 ಲಕ್ಷ ಜನ ಯಾರ ಗಮನಕ್ಕೂ ಬಾರದಂತೆ ಸತ್ತು ಹೋಗಿದ್ದಾರೆ. ಇವರ ಪೈಕಿ ಊಟ, ವಸತಿ, ಔಷಧ, ನೀರು ಎಂತದ್ದೂ ಸಿಗದೆ ಸತ್ತ ಮಹಿಳೆಯರು, ಮಕ್ಕಳು, ವೃದ್ಧರ ಸಂಖ್ಯೆ ಜಾಸ್ತಿಯಿದೆ.

ಜಗತ್ತಿನ ನಾನಾ ದೇಶಗಳಲ್ಲಿ ಇವರು ಅಮೆರಿಕನ್ ವಿರೋಧಿಗಳನ್ನು ಕೊಲ್ಲುತ್ತಾ ಶಹಭಾಷ್ ಎನಿಸಿಕೊಳ್ಳುತ್ತಿರುತ್ತಾರೆ. ಬಹಳ ಮುಖ್ಯವಾಗಿ ಅಮೆರಿಕನ್ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳನ್ನು ರಕ್ಷಿಸುವ, ವಿರೋಧಿಗಳನ್ನು ಮುಗಿಸುವ ಕೆಲಸ ಇವರದ್ದು. ಅಂದರೆ ಸಾರಾಂಶದಲ್ಲಿ ಈ ಜಗತ್ತಿನ ಎಲ್ಲಾ ಬಡ ದೇಶಗಳ ಶತ್ರುಗಳಿವರು.

ಉಳಿದಂತೆ ಆರೋಗ್ಯವಂತ ಅಫಘಾನಿ ಯುವಕ, ಮಧ್ಯವಯಸ್ಕರನ್ನು ಅಮೆರಿಕನ್ ಸೈನಿಕರೇ ಆಗಾಗ್ಗೆ ಗುಂಡಿಟ್ಟು ಕೊಲ್ಲುತ್ತಿರುತ್ತಾರೆ. ಮರುದಿನದ ವಾರ್ತೆಗಳಲ್ಲಿ 'ತಾಲಿಬಾನ್ ಟೆರರಿಸ್ಟರ ಸಾವು' ಎಂಬ ಹೆಡ್ಡಿಂಗ್‌ನಲ್ಲಿ ಇವರ ಕೊಲೆಗಳಿಗೆ ಸಮರ್ಥನೆ ಒದಗಿಸಲಾಗಿರುತ್ತದೆ.

ಜನ ಇನ್ನಷ್ಟು ಹತಕ್ಕೆ ಬೀಳುವುದು, ರೊಚ್ಚಿಗೇಳುವುದು ಆವಾಗಲೇನೆ.


ಲಾಡೆನ್ ಕೊಂದ ಸೀಲ್‌ಗಳು

SEALS ಅಂದರೆ **Sea, Air, Land** ಈ ಮೂರೂ ಕಡೆ ಕಾರ್ಯಾಚರಣೆ ನಡೆಸಬಲ್ಲ ತರಬೇತಾದ ಯೋಧರೆಂದು ಅರ್ಥ. ಅಮೆರಿಕಾ ಈ ತರದ ಅಂದಾಜು ಆರೇಳು ಸಾವಿರ ಸೀಲ್ ಕಮಾಂಡೊಗಳನ್ನು ತಯಾರಿಸಿಟ್ಟುಕೊಂಡಿದೆ. ಜಗತ್ತಿನ ನಾನಾ ದೇಶಗಳಲ್ಲಿ ಇವರು ಅಮೆರಿಕನ್ ವಿರೋಧಿಗಳನ್ನು ಕೊಲ್ಲುತ್ತಾ ಶಭಾಷ್ ಎನಿಸಿಕೊಳ್ಳುತ್ತಿರುತ್ತಾರೆ. ಬಹಳ ಮುಖ್ಯವಾಗಿ ಅಮೆರಿಕನ್ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳನ್ನು ರಕ್ಷಿಸುವ, ವಿರೋಧಿಗಳನ್ನು ಮುಗಿಸುವ ಕೆಲಸ ಇವರದ್ದು. ಅಂದರೆ ಸಾರಾಂಶದಲ್ಲಿ ಈ ಜಗತ್ತಿನ ಎಲ್ಲಾ ಬಡ ದೇಶಗಳ ಶತ್ರುಗಳಿವರು. ಆದರೆ ಬಹಳ ತಮಾಷೆ ಅನಿಸುವುದೇನೆಂದರೆ ಸಿಲ್ವೆಸ್ಟರ್ ಸ್ಟಾಲೋನ್‌ನ ಫಸ್ಟ್ ಬ್ಲಡ್, ರ್‍ಯಾಂಬೋ ತರದ ಸಿನಿಮಾಗಳು, ಆರ್ನಾಲ್ಡ್ ಸ್ವಾಜ್ ನೆಗರ್‌ನ ಪ್ರಿಡೇಟರ್, ಟ್ರೂ ಲೈಸ್ ಮುಂತಾದ ಸಿನಿಮಾಗಳೆಲ್ಲಾ ಈ ಸೀಲ್ ಯೋಧರ ತರದ ಕತೆಗಳೇ ಆಗಿವೆ. ನಮ್ಮಂತ ದೇಶಗಳ ದಡ್ಡ ಯುವಜನತೆ ಇವರು ನಡೆಸುವ ದೌರ್ಜನ್ಯ ಕೊಲೆಗಳನ್ನೇ ಸಾಹಸವೆಂದು ಭ್ರಮಿಸಿ ಸಿನಿಮಾ ನೋಡಿ ಆನಂದಿಸುತ್ತಿರುತ್ತಾರೆ. ಕಳೆದ ಹತ್ತು ವರ್ಷಗಳಿಂದ ಲಾಡೆನ್‌ಗಾಗಿ ಹುಡುಕಾಡುತ್ತಿದ್ದ ಅಮೆರಿಕಾ ಕೊನೆಗೆ ಕಳೆದ ಮೇ 2 ರಂದು ಪಾಕಿಸ್ತಾನದ ಅಬೋಟಾಬಾದ್‌ನಲ್ಲಿ ಪತ್ತೆಹಚ್ಚಿ ಮುಗಿಸಿತು. ಆ ಕಾರ್ಯಾಚರಣೆ ನಡೆಸಿದವರು ಸೀಲ್ ಪಡೆಯ 'ಟೀಂ 6' ಗೆ ಸೇರಿದ ಕಮಾಂಡೊಗಳು. ಆದಾದನಂತರ ರೊಚ್ಚಿಗೆದ್ದ ಅಲ್ ಕೈದಾ ಹಾಗೂ ತಾಲಿಬಾನಿ ಉಗ್ರರು ಅಫಘಾನಿಸ್ತಾನದಲ್ಲಿ ದೊಡ್ಡ ದಾಂಧಲೆಯನ್ನೇ ನಡೆಸುತ್ತಿದ್ದಾರೆ. ಅಫಘಾನ್ ಅಧ್ಯಕ್ಷ ಹಮೀದ್ ಕರ್ಜೈನ ಖಾಸಾ ತಮ್ಮನನ್ನೇ ಉಡಾಯಿಸಿದ್ದಾರೆ. ಪಾಕಿಸ್ತಾನದ ಮೂಲಕ ಅಫಘಾನಿಸ್ತಾನ ದಲ್ಲಿರುವ ಅಮೆರಿಕನ್ನರಿಗೆ ಆಹಾರ, ಪೆಟ್ರೋಲ್ ಪೂರೈಸುವ ಬೃಹತ್ ಲಾರಿಗಳಿಗೆ ದಿನಂಪ್ರತಿ ಬೆಂಕಿ ಹಾಕಿ ಭಸ್ಮ ಮಾಡುತ್ತಿದ್ದಾರೆ. ಇದಕ್ಕೆ ಸೇಡು ತೀರಿಸುವಂತೆ ಅಮೆರಿಕನ್ನರೂ ಕೊಲ್ಲುವ ಕೆಲಸ ಮಾಡುತ್ತಿದ್ದಾರೆ. ಅಫಘಾನಿಸ್ತಾನದ ಯಾವುದೇ ಮೂಲೆಯಲ್ಲಾಗಲಿ ಹತ್ತಿಪ್ಪತ್ತು ಜನ ಒಂದೆಡೆ ಗುಂಪು ಸೇರಿದರೆ, ನಾಲ್ಕಾರು ಟಯೋಟಾ ವ್ಯಾನ್‌ಗಳು ಸಾಲಾಗಿ ಹೋಗುತ್ತಿದ್ದರೆ ಯಾರು ಏನಂತಲೂ ವಿಚಾರಿಸದೆ ದಾಳಿ ನಡೆಸಿ ಕೊಂದು ಬಿಸಾಡುತ್ತಿದ್ದಾರೆ.

ಅಮೆರಿಕಾದ ವರ್ಜಿನಿಯಾದಲ್ಲಿ ನ್ಯಾಷನಲ್ ಕೌಂಟರ್ ಟೆರರಿಸಂ ಸೆಂಟರ್ **(NCTC)** ಎಂಬ ಅರೆ ಮಿಲಿಟರಿ ತರದ ಕೇಂದ್ರವೊಂದಿದೆ. ಅಲ್ಲಿ ಕುಳಿತು ಉಪಗ್ರಹಗಳ ಮೂಲಕ ಅಫಘಾನಿಸ್ತಾನದ ಮೂಲೆಮೂಲೆಗಳ ಮೇಲೂ ನಿಗಾ ಇಡುವ ಕಂಪ್ಯೂಟರ್ ಆಪರೇಟರ್‌ಗಳಿಗೆ ಯಾರದೋ ಓಡಾಟ, ಗುಂಪಿನ ಬಗ್ಗೆ ಅನುಮಾನ ಬಂತೆಂದಿಟ್ಟುಕೊಳ್ಳಿ, ಅವರು ತಕ್ಷಣ ಆ ಸ್ಥಳ, ಊರು, ಬೀದಿ ಅಥವಾ ಕಟ್ಟಡದ ವಿವರ ಕೊಟ್ಟು **`Engage The Enemy'** ಎಂದು ಸಂದೇಶ ಕೊಟ್ಟುಬಿಡುತ್ತಾರೆ. ಹಾಗೆ ಹೇಳಿ ಇವರು ಪಾಪ ಕಾರ್ನ್ ಅನ್ನೋ ಪಿಜ್ಜಾವನ್ನೋ ತಿನ್ನುವಷ್ಟರಲ್ಲಿ ಟಾರ್ಗೆಟ್ ಮೇಲೆ ದಾಳಿಯಾಗಿರುತ್ತದೆ. ಯಾರ ಅಂಕೆಗೂ ಸಿಗದ ಡ್ರೋನ್ ಚಾಲಕರಹಿತ ಯುದ್ಧ ವಿಮಾನ ಒಂದು ಮಿಸೈಲ್ ಹಾರಿಸಿ ಆ ಗುಂಪನ್ನೇ ಕೊಂದು ಹಾಕಿರುತ್ತದೆ. ಅಥವಾ ಕಮಾಂಡೊಗಳು ಆ ಸ್ಥಳಕ್ಕೆ ನುಗ್ಗಿ ಹೋಗುತ್ತಾರೆ.

ಅಂತಲ್ಲಿ ನಡೆಯುವ ಘರ್ಷಣೆಗಳಲ್ಲಿ ಮುಕ್ಕಾಲು ವಾಸಿ ಮೃತರು ಶಾಲಾಮಕ್ಕಳು, ಮದುವೆ ದಿಬ್ಬಣ, ಸಂತೆಯಲ್ಲಿ ಸೇರಿದ್ದ ಗುಂಪು, ಸಾವಿನ ಮೆರವಣಿಗೆಯಲ್ಲಿದ್ದವರೂ ಸೇರಿರುತ್ತಾರೆ.

ಆದರೆ ಅಮೆರಿಕಾ ಇಂತಾ ಮಿಸ್ಟೇಕ್‌ಗಳನ್ನು ಕೇರ್ ಮಾಡುವುದಿಲ್ಲ. ಅಧ್ಯಕ್ಷ ಕರ್ಜೈ ಕೂಡಾ 'ಮುಗ್ಧರನ್ನು ಯಾಕೆ ಕೊಲ್ಲುತ್ತೀರಿ?' ಅಂತಾ ಎಂದೂ ಪ್ರಶ್ನಿಸುವುದಿಲ್ಲ. ಮೊನ್ನೆ ತಾಲಿಬಾನಿಗಳು ಅಮೆರಿಕಾದವರ ಈ ರಣೋತ್ಸಾಹವನ್ನೇ ಒಂದು ಟ್ರಾಪ್ ರೀತಿ ಬಳಸಿದ್ದಾರೆ.



ಕಳೆದ ಆಗಸ್ಟ್ 5 ರ ಶುಕ್ರವಾರ 'ತಾಲಿಬಾನಿಗಳ ಒಂದು ಗುಂಪು ಇಂತಲ್ಲಿ ರಹಸ್ಯ ಸಭೆ ನಡೆಸುತ್ತಿದ್ದಾರೆ' ಎಂಬ ಸುಳ್ಳು ಸುಳ್ಳೇ ಮಾಹಿತಿ ಅಮೆರಿಕನ್ನರಿಗೆ ತಲುಪುವಂತೆ ಮಾಡಿದ್ದಾರೆ. ಕಾಬೂಲ್‌ನಿಂದ ತಕ್ಷಣ ಚಿನೋಕ್ ಹೆಲಿಕಾಪ್ಟರ್ ಹತ್ತಿ ಹೊರಟ ಅಮೆರಿಕನ್ ಸೈನಿಕರಲ್ಲಿ ಸೀಲ್ ಟೀಂ 6 ನ 25 ಕಮಾಂಡೋಗಳೂ ಇದ್ದರು. ಈ ಹೆಲಿಕಾಪ್ಟರ್ 80 ಕಿಲೋಮೀಟರ್ ಹಾರಿ ತಂಗಿ ವ್ಯಾಲಿ ಎನ್ನುವ ಪ್ರದೇಶಕ್ಕೆ ಬಂದಿಳಿಯಿತು. ಅಲ್ಲೇನು ಗಿಟ್ಟದ ಕಾರಣ ಕತ್ತಲಲ್ಲೇ ವಾಪಸ್ ಹಾರಲು ಶುರು ಮಾಡಿದ ಕೆಲವೇ ಕ್ಷಣಗಳಲ್ಲಿ ತಾಲಿಬಾನಿಗಳ ಗ್ರೆನೇಡ್ ದಾಳಿ ಬಂದಿದೆ. ಆ ಕಿರಿದಾದ ಪರ್ವತ ಕಣಿವೆಯ ಆಯಕಟ್ಟಿನ ಸ್ಥಳಗಳಲ್ಲಿ ಕಾದು ಕುಳಿತಿದ್ದ ಗೆರಿಲ್ಲಾಗಳು ಅನೇಕರ ಕೈಲಿ **Rocket Profilled Grenade** ಗಳಿದ್ದವು. ಆಗಸಕ್ಕೆ ಚಿಮ್ಮಿದ ನೂರಾರು ಗ್ರೆನೇಡ್‌ಗಳ ಪೈಕಿ ಅದ್ಯಾವುದು ಬಂದು ಬಡಿಯಿತೋ ಚಿನೋಕ್ ಹೆಲಿಕಾಪ್ಟರ್ ಸಿಡಿದು ಬಿತ್ತು. ಒಳಗಿದ್ದ ಎಲ್ಲರನ್ನು ಸಾವು ಸೆಳೆದುಕೊಂಡಿತು.

ಇದಾದನಂತರವೇ ಸತ್ತವರ ಪೈಕಿ ಲಾಡೆನ್‌ನನ್ನು ಕೊಂದಿದ್ದ ಸೀಲ್ ಟೀಂ 6 ನವರು ಕೆಲವರು ಇದ್ದರೆಂಬುದು ಗೊತ್ತಾಗಿದ್ದು.

ಒಂದು ದೇಶವನ್ನು ಆಕ್ರಮಿಸಿಕೊಂಡು ಅಲ್ಲಿನ ಜನರನ್ನೇ 'ಎನಿಮಿ' ಎಂದು ಬಿಂಬಿಸಿ ಕೊಲ್ಲುವ ಅಮೆರಿಕನ್ ಸೈನಿಕರ ಸಾವು 'ಮಾಡಿದ್ದುಣ್ಣೊ ಮಹಾರಾಯ' ಅನ್ನುವಂತಿದೆ.

ಲಾಡೆನ್ ಸತ್ತರೂ ಲಾಡೆನ್ ಸೃಷ್ಟಿಸಿರುವ ಭೂತ ಅಮೆರಿಕನ್ ಪೆಡಂಭೂತವನ್ನು ಬಿಡುವಂತೆ ಕಾಣುತ್ತಿಲ್ಲ.

-ಪಾರ್ವತೀಶ

...ಸದ ಭದ್ರತೆ, ಸಂಬಳ, ಔದ್ಯೋಗಿಕ ವಾತಾವರಣ ...ಂತಾದವುಗಳು ನೌಕರನ ಕಾರ್ಯಕ್ಷಮತೆಯ ಮೇಲೆ ...ೆ ಪರಿಣಾಮ ಬೀರಬಲ್ಲವು. ಹೊಟ್ಟೆ ತುಂಬಿದ ವ್ಯಕ್ತಿ ... ಕೆಲಸದತ್ತ ಗಮನಹರಿಸಬಲ್ಲ. ಆದೇ ಹಸಿದ ...ಟ್ಟೆಯವನಿಗೆ ಕೆಲಸಕ್ಕಿಂತ ತನ್ನ ಹಸಿವನ್ನು ಹಿಂಗಿಸಿ...ಳ್ಳುವುದೇ ದೊಡ್ಡ ಚಿಂತೆಯಾಗಿರುತ್ತೆ. ಅಂತವ ಹೇಗೆ ...ೇ ಮನಸ್ಸಿಡಬಲ್ಲ. ಆದರಲ್ಲೂ ಶಿಕ್ಷಣ ಕ್ಷೇತ್ರ ಬಲು ...ಾಬ್ದಾರಿಯುತ ಕ್ಷೇತ್ರ. ಅಲ್ಲಿ ಕನಿಷ್ಠ ಭದ್ರತೆ ಗಳನ್ನಾದರೂ ...ಗಿಸಿದರೆ ಮಾತ್ರ ಶಿಕ್ಷಣದ ಗುಣಮಟ್ಟ ಸುಧಾರಿಸುವುದು, ...ತ್ತಮ ನಾಗರಿಕ ಸಮಾಜ ಹೊರ ಬರುವುದು. ಇದಿಷ್ಟು ...ಕ್ಷ ಸಚಿವರಿಗ್ಯಾಕೆ ಅರ್ಥವಾಗಿ ಲ್ಲವೋ ತಿಳಿದಿಲ್ಲ. ...ರ್ವಾಂಗೀಣ ಅಭಿವೃದ್ಧಿಯ ಮಾತ ನಾಡುವ ಕಾಗೇರಿ ...ವರು ಶಿಕ್ಷಣದ ಖಾಸಗೀಕರಣ ಮತ್ತು ಪಾರ್ಟ್‌ಟೈಮ್ ...ಕರಂತಹ ಕಲ್ಪನೆಗೆ ಮುಂದಾಗಿರುವುದು ಅಚ್ಚರಿ" ಶಿಕ್ಷಣ ...ಜ್ಞರೊಬ್ಬರ ಇಂತಹ ಸಿಂಪಲ್ ಪ್ರಶ್ನೆಗಳಿಗೆ ಉತ್ತರ ...ಡುಕೊಳ್ಳುವ ಪ್ರಯತ್ನ ಮಾಡಿದರೂ ಶಿಕ್ಷಣ ಇಲಾಖೆ ...ಂಚ ಸುಶಿಕ್ಷಿತವಾಗಬಹುದು.

... ಗುತ್ತಿಗೆಯ ವಿಷಯಕ್ಕೆ ಬಂದರೆ ನೇಮಕಾತಿಯ ...ಟ್ಟ್ಯಾಕ್ಟು ಪಡೆದಿರುವ ಅಸ್ಟ್ರಿಕ್ಸ್ ಟೆಕ್ನಾಲಜೀಸ್ ಮೂಲತಃ ...ದು ಮಾನವ ಸಂಪನ್ಮೂಲ ಸರಬರಾಜು ಕಂಪೆನಿ. ...ಮತ್ತು ಅಷ್ಟು ಹುದ್ದೆಗಳ ಗುತ್ತಿಗೆಯನ್ನು ಟೆಂಡರ್ ...ಜರಾಯಿಸಿ ಪಡೆದಿದೆಯೆಂದರೆ ಸಚಿವರ ಕಾರ್ಯಾಲ...ವನ್ನು ಇದು ಭರ್ಜರಿಯಾಗೇ ಇಂಪ್ರೆಸ್ ಮಾಡಿರುವುದು ...ರಂಟಿ. ಈ ಟೆಂಡರ್ ಅನುಮೋದನೆಯಲ್ಲಿ ಯಾರೆಲ್ಲ ...ದ್ಧ ಹಸ್ತರು' ಎಷ್ಟೆಲ್ಲ ಶುದ್ಧ ಹಸ್ತರು ಎಂಬುದು ಇನ್ಮುಂದೆ ...ಕಿಗೆ ಬರಬೇಕಿದೆಯಷ್ಟೇ. ಆಯಾ ಜಿಲ್ಲಾ ಮಟ್ಟದಲ್ಲಿ ...ಲಿಯಿರುವ ಹುದ್ದೆಗಳನ್ನು ಡಿವೈಡ್ ಮಾಡಿ ಆನ್‌ಲೈನ್ ...ರ್ಜಿ ಸಲ್ಲಿಸಲು ಅಭ್ಯರ್ಥಿಗಳಿಗೆ ಚಾಲೆಂಜ್ ಮಾಡಲಾಗಿತ್ತು, ...ಟರ್‌ನೆಟ್ ಸೌಲಭ್ಯವೇ ಇಲ್ಲದ ಗ್ರಾಮೀಣ ಅಭ್ಯರ್ಥಿ, ...ಲಭ್ಯವಿದ್ದರೂ ಬಳಸಲು ಬಾರದ ಅಭ್ಯರ್ಥಿ, ಎಲ್ಲಾ ಇದ್ದು ...ರ್ವರ್ ಡೌನ್‌ನಂತಹ ಸಮಸ್ಯೆಗಳಿಂದ ಕಂಗಾಲಾದ ...ಭ್ಯರ್ಥಿಗಳ ಓದಿಶಾಹಿ ಸರ್ಕಾರದ ಬ್ಯಾಲೆನ್ಸ್ ಶೀಟ್‌ನಲ್ಲಿ ...ಮೆಯಾಗಿ ಕೂತಿದೆ.

... ಅವ್ಯವಸ್ಥೆಗಳೆಲ್ಲ ನೇರವಾಗಿ ಗೋಚರಿಸುತ್ತಿದ್ದರೂ ...ಕಾರಿಗಳ ಉಪಾಚಿಕೆ ಬೇರೆ. ಪ್ರಸಕ್ತ ಶೈಕ್ಷಣಿಕ ವರ್ಷ ಪ್ರಾರಂಭವಾಗಿದ್ದರಿಂದ ಶಿಕ್ಷಣಕ್ಕೆ ತೊಂದರೆಯಾಗಬಾರದೆಂದು ಹೀಗೆ ಖಾಸಗಿ ಕಂಪೆನಿ ಮೂಲಕ ಹೊರಗುತ್ತಿಗೆಯಲ್ಲಿ ಶಿಕ್ಷಕರ ಸೇವೆ ಪಡೆಯಲಾಗುತ್ತದೆ ಎಂಬಂತಹ ನಾಲ್ಕು ಚುಕ್ಕಿಯ ರಂಗೋಲಿ ಬಿಡಲು ಮುಂದಾಗಿದ್ದಾರೆ. ಶೈಕ್ಷಣಿಕ ವರ್ಷ ಇವರ್‍ಯಾರಿಗೂ ಸುಳಿವೇ ಕೊಡದೆ ಧುತ್ತನೇ ಬಂದೆರಗಿದೆ. ಅಪಘಾತವಲ್ಲ, ಮೊದಲೇ ಗೊತ್ತಿದ್ದ ಮೇಲೆ ಹೀಗೆ ಉದ್ದೇಶಪೂರ್ವಕವಾಗಿ ವಿಳಂಬ ಮಾಡಿ, ತರಾತುರಿಯಲ್ಲಿ ಖಾಸಗೀಕರಣಕ್ಕೆ ಮುಂದಾಗಿರುವುದರ ಹಿಂದೆ ಭಾರೀ ಒಪ್ಪಂದ ನಡೆದಂತಿವೆ.

ಈ ಶಾಲೆಗಳು ಸರ್ಕಾರಿ ಯೋಜನೆಗಳಾದ್ದರಿಂದ ಅಲ್ಲಿನ ಶಿಕ್ಷಕ ಸೇವೆಗೆ ಸರ್ಕಾರವೇ ಸಂಬಳ ಕೊಡುತ್ತದೆ. ಆದರೆ ಇಲ್ಲಿ ಹಾಗಾಗುವುದಿಲ್ಲ, ಟೆಂಡರ್‌ನ ಒಪ್ಪಂದದಂತೆ ಅಷ್ಟೂ ಜನರ ಶಿಕ್ಷಕರ ಸಂಬಳ ಸರ್ಕಾರದಿಂದ ಆಸ್ಟ್ರಿಕ್ಸ್ ಕಂಪೆನಿಗೆ ಹೋಗುತ್ತೆ, ಅಲ್ಲಿ ಅವರು ತಮ್ಮ ಸರ್ವೀಸ್ ಚಾರ್ಜ್ ಅದೂ ಇದು ಅಂತೆಲ್ಲ ಕತ್ತರಿಯಾಡಿಸಿ ಆಯ್ಕೆಯಾದವರಿಗೆ ಕೊಡುವ ಸಂಬಳದ ಮೊತ್ತ ಅವರಲ್ಲಿ ಉತ್ಸಾಹ ಉಳಿಸುವಷ್ಟೇನು ಇರುವುದಿಲ್ಲ, ಇದರಲ್ಲೂ ಅಭ್ಯರ್ಥಿಗಳನ್ನು ಸತಾಯಿಸುವ, ಗೋಳಾಡಿಸುವ ಎಲ್ಲಾ ಅಧಿಕಾರ ಆ ಖಾಸಗಿ ಹೊರಗುತ್ತಿಗೆಯ ಕಂಪೆನಿಗಿರುತ್ತದೆ.

ನೇಮಕಾತಿ ಆಯಾ ಜಿಲ್ಲಾ ಮಟ್ಟದಲ್ಲಿ ಆಗಿರುವುದರಿಂದ ಅಲ್ಲಿನ ಸ್ಥಳೀಯ ಶಿಕ್ಷಣಾಧಿಕಾರಿಗಳ ದುಡಿಮೆಯನ್ನೂ ನಿರ್ಲಕ್ಷಿಸುವಂತಿಲ್ಲ, ನಾವೇ ಆರಿಸಿದ ಸರ್ಕಾರವಿದ್ದೂ ಯಾವುದೋ ಮೂರನೇ ಖಾಸಗಿ ಕಂಪೆನಿ ಹತ್ತಿರ ಸರ್ಕಾರಿ ಕೆಲಸವನ್ನು ಬೇಡುವಂತಾದದ್ದು ಮಾತ್ರ ಹೀನಪರಿಸ್ಥಿತಿ. ವರ್ಷವರ್ಷವೂ ಹೊಸ ಹೊಸ ಡಿಎಡ್, ಬಿಎಡ್ ಕಾಲೇಜು ತೆರೆಯುವ ಅನುಮತಿಗಳಿಗೆ ಸಹಿ ಹಾಕುವ ಕೆಂಪು ಗೂಟದ ಖಾದಿ ಮಂದಿಗಳಿಗೆ ಅವರಿಗೆಲ್ಲ ಉದ್ಯೋಗವನ್ನು ಸೃಷ್ಟಿಸುವ ಯೋಗ್ಯತೆ ಇಲ್ಲವೆಂದಾದಲ್ಲಿ ಈ ರೀತಿ ಖಾಸಗಿ ಕಂಪೆನಿಗೆ ಹುದ್ದೆಗಳನ್ನು ಮಾರಿಕೊಳ್ಳುವ ನೈತಿಕತೆಯಾದರೂ ಭಗವದ್ಗೀತೆಯ ಯಾವ ಘಟದಿಂದ ಬಂತೋ ಗೊತ್ತಿಲ್ಲ. ಒಟ್ಟಿನಲ್ಲಿ ನಿರುದ್ಯೋಗಿಗಳ ಅಸಹಾಯಕತೆಯನ್ನು ದಲ್ಲಾಳಿಗಳಿಗೆ ಅಡವಿಟ್ಟು ವಿಶ್ವೇಶ್ವರ ಹೆಗಡೆ ಕಾಗೇರಿಯ ಬ್ಯಾಂಕ್ ಅಕೌಂಟ್ ಬೆಚ್ಚಗಾಗಿರಬಹುದೇನೋ?

-ಗಿರೀಶ್ ತಾಳೀಕಟ್ಟೆ



ಅಪರಾಧ ಜಗತ್ತಿಗೆ ಹೊಸ ಎಂಟ್ರಿ: ನಿಗೂಢ ಇಂಡಿಕಾ

ಅದೊಂದು ವಿಲಕ್ಷಣ ದರೋಡೆ ಗ್ಯಾಂಗ್. ರಾತ್ರಿ ಹನ್ನೊಂದು ಮೀರುತ್ತಿದ್ದಂತೆ ಬಿಳಿ ಇಂಡಿಕಾ ಕಾರೊಂದು ಬೆಂಗಳೂರು ಹೊರವಲಯದ ನಿರ್ಜನ ರಸ್ತೆಗಿಳಿಯುತ್ತದೆ. ಹೊರ ಊರುಗಳಿಂದ ಬಂದು ತಮ್ಮ ಮನೆ ಸೇರಲು ಬಸ್ಸಿಗಾಗೋ ಆಟೋಗಳಿಗೆಂದೋ ಕಾಯುತ್ತಾ ನಿಂತವರನ್ನು ಡ್ರಾಪ್ ಕೊಡುತ್ತೇವೆಂದು ಬಿಳಿ ಇಂಡಿಕಾ ಗಾಡಿಗೆ ಹತ್ತಿಸಿಕೊಳ್ಳುತ್ತಾರೆ. ಗಂಡಹೆಂಡತಿ ಅಥವಾ ಗೆಳೆಯರಿಬ್ಬರು ನಿಂತು ರಾತ್ರಿ ಬಸ್ಸಿಗಾಗಿ ಕಾಯುವುದನ್ನೇ ಹೊಂಚಿ ಇಂಡಿಕಾ ಸಮೀಪಿಸುತ್ತದೆ. ಎಲ್ಲವೂ ಅಸ್ಪಷ್ಟ ಮತ್ತು ನಿಗೂಢ. ಇನ್ನು ಮುಂದೆ ರಾತ್ರಿ ಬಸ್ಸಿಗೆ ಕಾಯುವ ಯಾರೇ ಆದರೂ ಹುಷಾರಾಗಿರಬೇಕು. ಅದರಲ್ಲೂ ಬಿಳಿ ಇಂಡಿಕಾದಲ್ಲಿ ಡ್ರೈವರ್ ಜೊತೆ ಇನ್ನೂ ಇಬ್ಬರಿದ್ದಾರೆಂದರೆ, ಅವರು ಪಡ್ಡೆ ಹುಡುಗರಾಗಿದ್ದರೆ ಅಪಾಯ ನಿಮ್ಮನ್ನು ಅರಸಿ ಬಂದಿದೆ ಎಂದೇ ಅರ್ಥ.

ಬೆಂಗಳೂರು ಪೊಲೀಸರಿಗೊಂದು ಹೊಸ ತಲೆನೋವು ಶುರುವಾಗಿದೆ.

ರಾತ್ರಿಯಾಗುತ್ತಿದ್ದಂತೆ ರಸ್ತೆಗಿಳಿಯುವ ಬಿಳಿಬಣ್ಣದ ಯಾವುದೇ ಇಂಡಿಕಾ ಕ್ಯಾಬ್ ಕಂಡರೂ ಪೊಲೀಸರ ಕಣ್ಣು ಕಿವಿ ನೆಟ್ಟಗಾಗುತ್ತದೆ. ಸಿಕ್ಕಸಿಕ್ಕ ಬಿಳಿ ಇಂಡಿಕಾಗೆ ಅಡ್ಡಹಾಕಿ ತಲೆಬುಡ ವಿಚಾರಿಸಿದ ನಂತರವೇ ಪೊಲೀಸರು ಗಾಡಿ ಬಿಡುವುದು. ಕಳೆದ ಎರಡು ತಿಂಗಳ ಅವಧಿಯಲ್ಲಿ ನಡೆದ ಹತ್ತಕ್ಕೂ ಅಧಿಕ ಅನಾಹುತಕಾರಿ ದರೋಡೆಗಳ ಹಿಂದೆ ನಿಗೂಢ ಬಿಳಿ ಬಣ್ಣದ ಇಂಡಿಕಾ ಕ್ಯಾಬ್ ಒಂದರ ಕರಿನೆರಳಿಗಾಗಿ ಪೊಲೀಸರು ನಿದ್ದೆಬಿಟ್ಟು ಬಲೇ ಬೀಸಿದ್ದಾರೆ.

ಅದೊಂದು ವಿಲಕ್ಷಣ ದರೋಡೆ ಗ್ಯಾಂಗ್. ರಾತ್ರಿ ಹನ್ನೊಂದು ಮೀರುತ್ತಿದ್ದಂತೆ ಬಿಳಿ ಇಂಡಿಕಾ ಕಾರೊಂದು ಬೆಂಗಳೂರು ಹೊರವಲಯದ ನಿರ್ಜನ ರಸ್ತೆಗಿಳಿಯುತ್ತದೆ. ಹೊರ ಊರುಗಳಿಂದ ಬಂದು ತಮ್ಮ ಮನೆ ಸೇರಲು ಬಸ್ಸಿಗಾಗೋ ಆಟೋಗಳಿಗೆಂದೋ ಕಾಯುತ್ತಾ ನಿಂತವರನ್ನು ಡ್ರಾಪ್ ಕೊಡುತ್ತೇವೆಂದು ಬಿಳಿ ಇಂಡಿಕಾ ಗಾಡಿಗೆ ಹತ್ತಿಸಿಕೊಳ್ಳುತ್ತಾರೆ. ಗಂಡಹೆಂಡತಿ, ಅಥವಾ ಗೆಳೆಯರಿಬ್ಬರು ನಿಂತು ರಾತ್ರಿ ಬಸ್ಸಿಗಾಗಿ ಕಾಯುವುದನ್ನೇ ಹೊಂಚಿ ಇಂಡಿಕಾ ಸಮೀಪಿಸುತ್ತದೆ. ಅವರಾಗೇ ಒಂದು ಗಾಡಿ ನಿಲ್ಲಿಸಿ ಎಲ್ಲಿಗೆ ಹೋಗ್ಬೇಕು ಎಂದು ಪ್ರಶ್ನಿಸುತ್ತಾರೆ. ಕಾಯುತ್ತಿದ್ದವರು ಇಂಥಾ ಬಡಾವಣೆಯೆಂದರೆ ನಾವೂ ಅಲ್ಲಿಗೇ ಹೋಗ್ತಾ ಇದ್ದೀವಿ ಎನ್ನುತ್ತಾರೆ.

ಒಮ್ಮೆ ಗಾಡಿ ಹತ್ತಿ ಕೂತರೆಂದರೆ ಕತೆ ಮುಗಿದಂತೆಯೇ. ಕೊಂಚ ದೂರ ಸಾಗುತ್ತಿದ್ದಂತೆಯೇ ಲೈಟಿಲ್ಲದ ನಿರ್ಜನ ಪ್ರದೇಶದಲ್ಲಿ ಇದ್ದಕ್ಕಿದ್ದಂತೆ ಗಾಡಿ ನಿಲ್ಲುತ್ತದೆ. ಮೊದಲೇ ಬಂದ ಗಾಡಿಯಲ್ಲಿ ಮೂವರು ಹುಡುಗರಿರುತ್ತಾರೆ. ಮುಂದೆ ಇಬ್ಬರು ಹಿಂದೆ ಒಬ್ಬ ಕೂತಿದ್ದು ಗಾಡಿ ನಿಂತಿದ್ದೇ ತಡ, ಹಿಂದೆ ಕೂತಿದ್ದವನೊಬ್ಬ ತನ್ನ ಸೊಂಟದಿಂದ ಚಾಕೊಂದನ್ನು ತೆಗೆದಿದ್ದೇ ಪಕ್ಕ ಕೂತಿದ್ದವರ ಕತ್ತಿಗೆ ಹಿಡಿದು 'ತೆ.... ಮುಚ್ಕೊಂಡು ಏನೇನಿದೆಯೋ ಎಲ್ಲಾ ಕೊಡ್ಬೇಕು. ಇಲ್ಲಾ ಅಂದ್ರೆ ಮುಖಾಮೂತಿ ನೋಡ್ದೇ ಕುಯ್ದು ಹಾಕ್ತೀನಿ.....' ಎಂದು ಉಲ್ಟಾ ಹೊಡೆಯುತ್ತಾನೆ. ಮಿಸುಕಾಡಿದರೆ ಮುಂದೆ ಡ್ರೈವರ್ ಸೀಟಿನಲ್ಲಿ ಕೂತಿದ್ದ ದಾಂಡಿಗನೊಬ್ಬ ಬಲವಾಗಿ ಮುಖಕ್ಕೆ ಗುದ್ದುತ್ತಾನೆ.

ಕೆಲವೇ ಕ್ಷಣದಲ್ಲಿ ಡ್ರಾಪ್ ಶಿಕಾರಿಗಳ ವಾಚು, ಚೈನು, ಮೊಬೈಲು, ಕ್ರೆಡಿಟ್ ಕಾರ್ಡ್, ದುಡ್ಡು ಎಲ್ಲವನ್ನೂ ಕಿತ್ತುಕೊಂಡು ಕತ್ತಲಲ್ಲಿ ಇಂಡಿಕಾ ಮಾಯವಾಗುತ್ತದೆ. ದರೋಡೆಗೀಡಾದವರಿಗೆ ನಡೆದದ್ದು ಕನಸೋ ವಾಸ್ತವವೋ ಎಂದು



ಗೊತ್ತಾಗುವ ಹೊತ್ತಿಗೆ ಕಾರೂ ನಾಪತ್ತೆ ಮೈಮೇಲಿದ್ದ ಒಡವೆ, ಕಾಸೂ ಮಂಗಮಾಯ!


ಇದು ಕಳೆದೆರಡು ತಿಂಗಳುಗಳಿಂದ ಬೆಂಗಳೂರು ಪೊಲೀಸರನ್ನು ಇನ್ನಿಲ್ಲದಂತೆ ಕಾಡುತ್ತಿರುವ ಪ್ರಶ್ನೆ. ಮೊನ್ನೆ ಅಂದರೆ ಆಗಸ್ಟ್ 8 ರ ಬೆಳಗಿನ ಜಾವ ಎರಡೂವರೆಯ ನಸುಕಿನಲ್ಲಿ ಎಚ್‌ಎಎಲ್ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದ ಕಿಡ್ನಾಪ್ ಮತ್ತು ದರೋಡೆ ಈ ಸಾಲಿನ ಲೇಟೆಸ್ಟ್ ಕೃತ್ಯ. ಆಗಸ್ಟ್ 7 ರ ಭಾನುವಾರ ರಾತ್ರಿ ತಮಿಳುನಾಡಿನ ವೇಲೂರಿನಿಂದ ಬಸ್ ಹತ್ತಿದ್ದು ಮಾರತಹಳ್ಳಿ ಬಾಬುಸಾಬ್‌ಪಾಳ್ಯದ ಗಜೇಂದ್ರ, ಆತನ ಪತ್ನಿ ಕುಪ್ಪಮ್ಮ ಮತ್ತು ಮಗಳು ಮಮತಾ. ಬೆಂಗಳೂರಿನಲ್ಲಿ ಬಸ್ಸಿಳಿದವರು ರಾತ್ರಿ ಎರಡೂವರೆ ಹೊತ್ತಿಗೆ ಮಾರತಹಳ್ಳಿ ಸೇತುವೆ ಬಳಿ ಬಸ್ಸಿಗಾಗಿ ಕಾಯುತ್ತಾ ನಿಂತಿದ್ದಾರೆ. ಕೆಲವೇ ಕ್ಷಣಕ್ಕೆ ಅಲ್ಲಿಗೊಂದು ಗುಲಾಬಿ ಬಣ್ಣದ ಟಾಟಾಸುಮೋ ಬಂದಿದೆ. ಅದರೊಳಗೆ ಆರು ಮಂದಿ ಹುಡುಗರಿದ್ದರು.

ಬಹುಶಃ ಸುಮೋದಲ್ಲಿದ್ದವರು ಕೂಡ ಡ್ರಾಪ್ ಗಿರಾಕಿಗಳೇ ಇರಬೇಕೆಂದು ನಂಬಿದ ಗಜೇಂದ್ರ ಪತ್ನಿ ಮಗಳ ಜೊತೆ ಗಾಡಿ ಹತ್ತಿದ್ದಾರೆ. ಇನ್ನೇನು ರಿಂಗ್‌ರಸ್ತೆ ಸಮೀಪಿಸಬೇಕೆನ್ನುವಷ್ಟರಲ್ಲಿ ನಿರ್ಜನ ಕತ್ತಲಲ್ಲಿ ಸುಮೋ ನಿಂತಿದೆ. ಏಕೆಂದು ಗಜೇಂದ್ರ ಪ್ರಶ್ನಿಸುವ ಮೊದಲೇ ಮುಂದೆ ಕೂತಿದ್ದವನೊಬ್ಬ ಲಾಂಗ್ ತೆಗೆದದ್ದೇ ಗಜೇಂದ್ರನ ಕತ್ತಿಗೆ ಇಟ್ಟಿದ್ದಾನೆ. ಮಿಸುಕಾಡಿದರೂ ಪತ್ನಿ ಮಗಳಿಗೆ ಅಪಾಯ ಕಟ್ಟಿಟ್ಟ ಬುತ್ತಿ, ಮರುಮಾತಾಡದೇ ತನ್ನ ಚೈನು ಉಂಗುರ ಪತ್ನಿಯ ತಾಳಿ, ಮಗಳ ಕೊರಳಲ್ಲಿದ್ದ ಸರ, ಮೊಬೈಲು, ಎಲ್ಲವನ್ನೂ ಬಿಚ್ಚಿ ಕೊಟ್ಟಿದ್ದಾರೆ. ಜೇಬಲ್ಲಿದ್ದ ಅಷ್ಟಿಷ್ಟು ಕಾಸನ್ನೂ ಕಿತ್ತುಕೊಂಡಿದ್ದಾರೆ.

ಇನ್ನೇನೂ ಇಲ್ಲ ಎಂದು ಗೊತ್ತಾಗಿದ್ದೇ ಮೂವರನ್ನೂ ಗಾಡಿಯಿಂದ ಹೊರದಬ್ಬಿದ ಸುಮೋ ನಿರ್ಜನ ಕತ್ತಲಲ್ಲಿ ಮಾಯವಾಗಿದೆ. ಸುಮೋದಲ್ಲಿ ಡ್ರೈವರ್ ಸೇರಿದಂತೆ ಒಟ್ಟು ಆರು ಮಂದಿಯಿದ್ದರು. ಕತ್ತಲಲ್ಲಿ ಗಜೇಂದ್ರ ನಂಬರನ್ನು ನೋಡಿಕೊಂಡಿಲ್ಲ, ಎಚ್‌ಎಎಲ್ ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟರೆ ಪೊಲೀಸರೇ ಕಕ್ಕಾಬಿಕ್ಕಿ!


ಇದು ಆಗಸ್ಟ್ 7 ರ ಭಾನುವಾರ ರಾತ್ರಿ ಎಚ್‌ಎಎಲ್ ಪೊಲೀಸ್ ಲಿಮಿಟ್ಟಿನ ಘಟನೆಯಾದರೆ ಅದರ ಹಿಂದಿನ ರಾತ್ರಿ ಅಂದರೆ ಆಗಸ್ಟ್ 6 ರ ಶನಿವಾರ ರಾತ್ರಿ ಹೆಣ್ಣೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದದ್ದು ಇಂಥದ್ದೇ ಮತ್ತೊಂದು ದರೋಡೆ. ಕೆ.ಆರ್. ಪುರದ ಲವಕುಮಾರ್ ಮತ್ತು ಆತನ ಗೆಳೆಯ ಆರೋಗ್ಯ ಕುಮಾರ್ ಯಾವುದೋ ಕೆಲಸಕ್ಕೆಂದು ಬಾಣಸವಾಡಿಗೆ ಬಂದವರು ರಾತ್ರಿ 11 ರ ಸುಮಾರಿಗೆ ಹೆಣ್ಣೂರು ಜಂಕ್ಷನ್‌ನಲ್ಲಿ ಬಸ್ಸಿಗಾಗಿ ಕಾಯುತ್ತಿದ್ದರು. ಅದೇ ಹೊತ್ತಿಗೊಂದು ಬಿಳಿ ಬಣ್ಣದ ಇಂಡಿಕಾ ಬಂದಿದೆ.

ಡ್ರೈವರ್ ಸೇರಿದಂತೆ ಮುಂದೆ ಇಬ್ಬರು ಹಿಂದೆ ಒಬ್ಬ ಕುಳಿತಿದ್ದ. ಹಿಂದೆ ಮತ್ತು ಡ್ರೈವರ್ ಪಕ್ಕ ಕೂತಿದ್ದ ಹುಡುಗರು ಪರಸ್ಪರ ಪರಿಚಯವೇ ಇಲ್ಲದಂತಿದ್ದರು. ಬಂದ ಇಂಡಿಕಾದ ಡ್ರೈವರ್ ಬಸ್ಸಿಗೆ ಕಾಯುತ್ತಿದ್ದವರನ್ನು ಎಲ್ಲಿಗೆ ಹೋಗ್ಬೇಕು ಎಂದಿದ್ದಾನೆ. ಲವಕುಮಾರ್ ಕೆ.ಆರ್. ಪುರಕ್ಕೆ ಎಂದಿದ್ದೇ ತಡ, ಗಾಡಿ ಅಲ್ಲಿಗೇ ಹೋಗ್ತಿದೆ ಬನ್ನಿ ಎಂದಿದ್ದಾನೆ ಡ್ರೈವರ್. ಸ್ನೇಹಿತರಿಬ್ಬರೂ ಖುಷಿಯಿಂದ ಗಾಡಿ ಹತ್ತಿದ್ದಾರೆ. ಕೆಲವೇ ಕ್ಷಣಕ್ಕೆ ಡ್ರೈವರ್ ಜೊತೆಗಿದ್ದವರು ಆತನ ಸ್ನೇಹಿತರೆಂದು ಗೊತ್ತಾಗಿದೆ. ಸೀದಾ ಬಾಬುಸಾಬ್‌ಪಾಳ್ಯದ ಫ್ಲವರ್ ಗಾರ್ಡನ್ ರಸ್ತೆಯ ನಿರ್ಜನ ಕತ್ತಲಲ್ಲಿ ಬಂದು ಗಾಡಿ ನಿಂತಿದೆ.



ಅಲೋಕ್ ಕುಮಾರ್

ಇಲ್ಲೂ ಅದೇ ಕತೆ. ಗಾಡಿ ನಿಂತಿದ್ದೇ ತಡ ಹಿಂದೆ ಕೂತಿದ್ದವನು ಚಾಕು ತೆಗೆದದ್ದೇ ಲವಕುಮಾರ್ ಕತ್ತಿಗೆ ಹಿಡಿದು ಉಸಿರೆತ್ತಿದೆ ಅಂದ್ರೆ ಕುಯ್ದು ಹಾಕ್ತೀನಿ. ಮುಚ್ಕೊಂಡು ಎಲ್ಲಾ ತೆಗಿ ಅಂದಿದ್ದೇ 96 ಸಾವಿರ ರೂಪಾಯಿ ಬೆಲೆಬಾಳುವ ಒಡವೆ, 13 ಸಾವಿರ ರೂಪಾಯಿ ಕ್ಯಾಷು ಮತ್ತು ಮೊಬೈಲ್ ಫೋನ್ ಕಿತ್ತುಕೊಂಡಿದ್ದಾರೆ. ಅಷ್ಟೇ ಶೀಘ್ರವಾಗಿ ಅವರಿಬ್ಬರನ್ನೂ ಗಾಡಿಯಿಂದ



ದೋಚಿದ ನಿರ್ಜನ ಪ್ರದೇಶ



ಹೊರದಬ್ಬಿ ಇಂಡಿಕಾ ಕತ್ತಲಲ್ಲಿ ಮಾಯವಾಗಿದೆ. ಹೆಣ್ಣೂರು ಪೊಲೀಸರು ತಡಬಡಾಯಿಸಿ ತಡಕಾಡುವ ಹೊತ್ತಿಗೆ ಬಿಳಿ ಇಂಡಿಕಾ ಯಾವ ಬಿಲ ಹೊಕ್ಕಿ ಕಣ್ಮರೆಯಾಯಿತ್ತೋ?

ಈ ಎರಡೂ ಪ್ರಕರಣಗಳಲ್ಲಿ ಕಾರ್ ಮಾತ್ರ ಬೇರೆಬೇರೆ ಎಂಬುದನ್ನು ಬಿಟ್ಟರೆ ದರೋಡೆಯ ಶೈಲಿ ಮ[...] ಒಂದೇ. ಆದರೆ ಪೊಲೀಸರು ಬಿಳಿ ಇಂಡಿಕಾ ಗಾಡಿಯ[...] ವಿಶೇಷವಾಗಿ ಅಡ್ಡಗಟ್ಟುತ್ತಿರುವುದಕ್ಕೆ ಕಾರಣವಾದ[...] ಜುಲೈ 24 ರ ದರೋಡೆ. ಲೆಕ್ಚರರ್ ವೆಂಕಟೇ[...] ಮತ್ತು ಬಿಎಂಟಿಸಿ ಕಂಡಕ್ಟರ್ ಮೋಹನ್ ಅ[...] ರಾತ್ರಿ 11.30 ರ ಹೊತ್ತಿಗೆ ನಾಯಿಂಡಹಳ್ಳಿಯ[...] ಬಸ್ಸಿಗಾಗಿ ಕಾಯುತ್ತಿದ್ದರು. ಇದ್ದಕ್ಕಿದ್ದಂತೆ ಬಿಳಿ ಇಂಡಿ[...] ಬಂದು ನಿಂತಿದೆ. ತಾವು ಪದ್ಮನಾಭನಗರಕ್ಕೆ ಹೋಗಬೇ[...] ಎಂದಿದ್ದಾರೆ ವೆಂಕಟೇಶ್. ಇಂಡಿಕಾ ಹತ್ತಿಸಿಕೊಂಡಿ[...] ಮೈಸೂರು ರಸ್ತೆಯಿಂದ ಬಲಕ್ಕೆ ಹೊಸಕೆರೆಹ[...] ರಿಂಗ್‌ರಸ್ತೆಗೆ ಹೊರಳಿದೆ.

ಪಿಇಎಸ್ ಕಾಲೇಜನ್ನು ದಾಟಿ ದೇವೇಗೌ[...] ಪೆಟ್ರೋಲ್ ಬಂಕ್‌ಗೆ ಬರುತ್ತಿದ್ದಂತೆ ಮುಂದೆ ಪೊಲೀಸ[...] ಗಾಡಿಯನ್ನು ತಪಾಸಣೆ ಮಾಡುತ್ತಿದ್ದದ್ದು ಕಣ್ಣಿಗೆ ಬಿದ್ದಿ[...] ಇದ್ದಕ್ಕಿದ್ದಂತೆ ಗಾಡಿ ಹೊಸಕೆರೆಹಳ್ಳಿಯ ಕಿರುದಾರಿಯ[...] ಹೊರಳಿದೆ. ವೆಂಕಟೇಶ್ ಯಾಕೆ ಎಂದು ರೇಗಿ[...] ಡ್ರೈವರ್ 'ಬ್ಯಾಡ ಗುರೂ ಪೊಲೀಸ್ರು ಗಾಡಿ ಅ[...] ಹಾಕ್ತಾರೆ.....!' ಎಂದು ಹೊಸಕೆರೆಹಳ್ಳಿಯ ನಿರ್ಜನ ಖಾ[...] ಪ್ರದೇಶಕ್ಕೆ ಗಾಡಿ ತಂದು ನಿಲ್ಲಿಸಿದ್ದಾನೆ. ಕಾರಿನ ಎ[...] ಲೈಟುಗಳೂ ಆಫ್ ಆಗಿದ್ದನ್ನು ಗಮನಿಸಿದ ವೆಂಕಟೇ[...] ಏನು? ಯಾಕೆ? ಎಂದು ಪ್ರಶ್ನಿಸುವ ಮೊದಲೇ [...] ಕೂತಿದ್ದ ಪೋರನೊಬ್ಬ ಚಾಕು ತೆಗೆದಿದ್ದೇ ಕ[...] ಇಟ್ಟುಬಿಟ್ಟ. ನಿನ್ನಕ್ಕನ್... ಕಣ್ಣುಕಿತ್ತು ಬಿಡ್ತೀನಿ. ನಾ[...] ಆಡ್ತೀಯಾ? ತೆಗಿ.... ಏನೇನಿದೆಯೋ ಎಲ್ಲಾ [...] ಎಂದಿದ್ದೇ 38 ಗ್ರಾಮಿನ ಚೈನು, ಜೇಬಲ್ಲಿದ್ದ 21[...] ರೂಪಾಯಿ ಮತ್ತು ಡೈರಿ ಕಿತ್ತುಕೊಂಡು ಬಿಟ್ಟ. ಇಬ್ಬರಿಗ[...] ಎರಡೆರಡು ಏಟು ಹಾಕಿದ್ದೇ ಅವರಿಬ್ಬರನ್ನೂ ಗಾಡಿಯಿಂ[...] ನೂಕಿ ಅರೆಕ್ಷಣದಲ್ಲಿ ಬಿಳಿ ಇಂಡಿಕಾ ಮಾಯವಾಗಿತ್ತು.

ವೆಂಕಟೇಶ್ ಮತ್ತು ಮೋಹನ್ ಇಬ್ಬರ[...] ತಡಬಡಾಯಿಸಿ ಗಿರಿನಗರ ಪೊಲೀಸ್ ಠಾಣೆಗೆ ಬಂದಿದ್ದಾ[...] ಪೊಲೀಸರು ಬೆಂಗಳೂರಿನ ಎಲ್ಲಾ ಪೊಲೀಸ್ ಠಾಣೆಗ[...] ವೈರ್‌ಲೆಸ್ ಮೆಸೇಜು ಕಳಿಸಿದ್ದಾರೆ. ಏನು ಪ್ರಯೋಜ[...]

ಇಂಥದ್ದೇ ಮತ್ತೊಂದು ಪ್ರಕರಣ ಇಲ್ಲಿಗೆ ಎರ[...] ತಿಂಗಳ ಹಿಂದೆ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯ[...] ದಾಖಲಾಗಿತ್ತು. ಸುಂಕದಕಟ್ಟೆ ಬಳಿ ರಾತ್ರಿ ಬಸ್ಸಿಗಾ[...] ಕಾಯುತ್ತಿದ್ದ ಇಬ್ಬರನ್ನು ಬಿಳಿ ಇಂಡಿಕಾ ಗಾಡಿ[...] ಹತ್ತಿಸಿಕೊಂಡು ಡ್ರಾಪ್ ಕೊಡುವ ನೆಪದಲ್ಲಿ ದರೋ[...] ಮಾಡಲಾಗಿತ್ತು. ಈ ಎಲ್ಲಾ ಪ್ರಕರಣ[...] ಸಂತ್ರಸ್ತರ ಅನುಭವ ಮತ್ತು ಯಾತನೆ[...] ಸಾರಾಂಶ ಒಂದೇ ಆಗಿದ್ದುದ್ದೇ ಜ[...] ಪೊಲೀಸ್ ಕಮಿಷನರ್ ಅಲೋ[...] ಕುಮಾರ್ ನಿರ್ಧಾರವೊಂದಕ್ಕೆ ಬರ[...] ಕಾರಣವಾಯ್ತು.

ಆ ಪ್ರಕಾರವೇ ಹೇಳುವುದಾದರೆ ಈತನಕ ಬೆಂಗಳೂರಿಗೆ ಅಪರಿಚಿತವಾಗಿದ್ದ, ಹಿಂದೆಂದೂ ದರೋಡೆಯಲ್ಲಿಲ್ಲದ ವಿಲಕ್ಷಣ ತಂಡವೊಂದು ಬೆಂಗಳೂರಿನಲ್ಲಿ ತಲೆ ಎತ್ತಿತ್ತು. ಬೇರೆಲ್ಲ ದಕಾಯಿತಿ ಗ್ಯಾಂಗ್‌ಗಳ ರೀತಿಗೂ ಈ ಬಿಳಿ ಇಂಡಿಕಾ ಶೈಲಿಗೂ ವ್ಯತ್ಯಾಸವಿತ್ತು. ಇದು ಒಂದೇ ತಂಡದ ಕೃತ್ಯವಾ ಅಥವಾ ವಿವಿಧ ಗ್ಯಾಂಗ್‌ಗಳು ಈ ಥರದ ಕಸುಬುದಾರಿಕೆಗಿಳಿದಿರಬಹುದಾ ಎಂಬುದೂ ಅಸ್ಪಷ್ಟ. ಸಂಭವಿಸಿದ್ದು ಬೆಂಗಳೂರಿನ ಬೇರೆಬೇರೆ ಭಾಗಗಳಲ್ಲಾದರೂ ಬಲಿಯಾದವರ ಹೇಳಿಕೆ ಮತ್ತು ಕೃತ್ಯದ ವಿವರಗಳಲ್ಲಿ ಸೌಮ್ಯತೆಯಿತ್ತು.

ಈ ಎಲ್ಲಾ ಘಟನೆಗಳು ರಾತ್ರಿ 11 ರ ನಂತರ[...] ಸಂಭವಿಸಿತ್ತು. ಒಂದೆರಡು ಪ್ರಕರಣಗಳ ಹೊರತಾಗಿ ಬೇ[...] ಘಟನೆಗಳಲ್ಲಿ ಬಿಳಿ ಬಣ್ಣದ ಇಂಡಿಕಾ ಕ್ಯಾಬ್ ಬಳಸಲಾಗಿ[...] ದರೋಡೆಗೈದವರು ಪಡ್ಡೆಹುಡುಗರು. ಹೆಚ್ಚೆಂದರೆ [...]ರಿಂದ 25 ರ ಒಳಗಿನ ವಯಸ್ಸಿನವರು. ಕನ[...] ಮಾತಾಡುತ್ತಾರೆ. ಅದೂ ಬೆಂಗಳೂರಿನ ಗಲ್ಲೀ ಕನ್ನಡದ[...] ಮಾತಾಡುತ್ತಾರೆ. ಅವರಿಗೆ ಹಿಂದಿ, ಇಂಗ್ಲಿಷ್, ತಮಿ[...] ತೆಲುಗು ಬರುವುದಿಲ್ಲ. ಬಂದಿದ್ದರೆ ಪೊಲೀಸರ[...] ಯಾಮಾರಿಸುವುದಕ್ಕಾದರೂ ಬೇರೆ ಭಾಷೆ ಬಳಸಬೇಕಿತ್ತು.

ಸಾಮಾನ್ಯವಾಗಿ ಮೂವರಿರುತ್ತಾರೆ. ಈ ಪೈಕಿ ಯಾರ[...] ಒಬ್ಬ ಕಾಲ್‌ಸೆಂಟರ್ ಗಾಡಿಗಳ ಡ್ರೈವರಾಗಿರಬೇಕು ಅಥ[...] ಕದ್ದ ಬಿಳಿ ಇಂಡಿಕಾ ಗಾಡಿಯನ್ನೇ ತನ್ನ ಕೃತ್[...] ಬಳಸುತ್ತಿರಬೇಕು. ಎಲ್ಲರೂ ಲೋಕಲ್ ಹುಡುಗರು. ಡ್ರೈ[...] ಮಾತ್ರ ದಾಂಡಿಗ. ಮಿಕ್ಕ ಹುಡುಗರು ಇನ್ನೂ ಮೀ[...] ಮೊಳೆಯದ ಪೀಚಲು ಪಡ್ಡೆಗಳು. ಹಿಂದೆ ಕೂತು ಕ[...] ಚಾಕು ಹಿಡಿಯುವವನೊಬ್ಬ ಕುರುಚಲು ಗಡ್ಡ ಬಿಟ್ಟಿದ[...] ಇಂಡಿಕಾ ಗಾಡಿಗೆ ಹಳದಿ ನಂಬರ್ ಪ್ಲೇಟಿದೆ. ಅ[...] ರಿಜಿಸ್ಟ್ರೇಷನ್ ನಂಬರ್ ಬಹುಶಃ 9385 ಎಂ[...] ಕೊನೆಯಾಗುತ್ತದೆ. ಕೃತ್ಯದ ವೇಳೆ ಅವರ್ಯಾ[...] ಕುಡಿದಿರುವುದಿಲ್ಲ. ಈ ಪೈಕಿ ಒಬ್ಬ ಅಗ್ಗದ ವಿಲ್ಸ್ ಫ್ಲೇ[...] ಸಿಗರೇಟು ಸೇದುತ್ತಾನೆ. ಅವರಿಗೆ ಬೆಂಗಳೂರಿನ [...]

ಮೂಗಳೂ ಸುಪರಿಚಿತ. ದರೋಡೆಯ ಹೊರತಾಗಿ ಾರೂ ಕರೆತಂದವರ ಮೇಲೆ ಹಿಂಸೆ ನಡೆಸುವುದಿಲ್ಲ. ಳೆಯರೊಂದಿಗೆ ಅನುಚಿತವಾಗಿ ವರ್ತಿಸುವುದಿಲ್ಲ. ಒಳಗೇ ಲಾಕ್ ಮಾಡಿಕೊಂಡು ದರೋಡೆ ುತ್ತಾರೆ. ಆನಂತರ ನಿರ್ಜನ ಕತ್ತಲಲ್ಲಿ ಕಾರಿನಿಂದ ದಬ್ಬುತ್ತಾರೆ. ಮರೆಯಾಗುವತನಕ ಕಾರಿನ ಯಾವುದೇ ಹಾಕುವುದಿಲ್ಲ.

ಈ ಎಲ್ಲ ಸಂಗತಿಗಳನ್ನು ಕ್ರೋಢೀಕರಿಸಿದ ಜಂಟಿ ೀಸ್ ಕಮೀಷನರ್ ಅಲೋಕ್‌ಕುಮಾರ್ ಇಲ್ಲಿ ್ಯವೊಂದನ್ನು ಗಮನಿಸಿದ್ದರು. ದರೋಡೆಕೋರರು ುಟ್ಟದ ಕ್ರೂರಿಗಳಲ್ಲ. ಏಕೆಂದರೆ ಗಿರಿನಗರದ ವ್ಯಾಪ್ತಿಯ ೀಡೆಯಲ್ಲಿ ಲೆಕ್ಚರರ್ ವೆಂಕಟೇಶ್‌ರನ್ನು ಪಕ್ಕ ಕೂತಿದ್ದ ಾಗ ಮೊಂಡು ಚಾಕು ಹಿಡಿದು ಹೆದರಿಸಿದ್ದ. ಅದು ುವ ಮಟ್ಟದ ಚಾಕುವಲ್ಲ. ದೋಚಲ್ಪಟ್ಟವರ ಜೊತೆ ತಮಾಷೆ ಮಾಡುತ್ತದೆ. ಕೆಲವೊಮ್ಮೆ ತಾವೇ ಸಿಗರೇಟು ುತ್ತಾರೆ. ಎಲ್ಲಾ ದೋಚಿದ ಮೇಲೂ ತೀರ ಾಗದಿರಲಿ ಎಂದು ಹೊರದಬ್ಬುವ ಮುನ್ನ ಬಸ್ ಗೆಂದು ಪುಡಿಗಾಸು ಕೊಡುತ್ತಾರೆ!

ಮೈಸೂರು ರಸ್ತೆಯಲ್ಲಿ ಇಂಡಿಕಾ ಶಿಕಾರಿಗೆ ಬಿದ್ದಿದ್ದ ರ್ ವೆಂಕಟೇಶ್ ಮತ್ತು ಕಂಡಕ್ಟರ್ ಮೋಹನ್‌ಗೆ ಯಿಂದ ಹೊರದಬ್ಬುವ ಮುನ್ನ ಒಬ್ಬನಿಗೆ ಹತ್ತು ೊಬ್ಬನಿಗೆ 20 ರೂಪಾಯಿಯ ನೋಟು ಕೊಟ್ಟು ದ್ದರು. ಕತ್ತಲಾದ್ದರಿಂದ ಮುಖ ಅಸ್ಪಷ್ಟವಾಗಿರುತ್ತದೆ. ಮತ್ತು ಹಿಡಿದ ಚಾಕು ಬಿಟ್ಟರೆ ಬೇರೇನೂ ಚರಿಸುವುದಿಲ್ಲ ಮತ್ತು ಕೃತ್ಯದಿಂದ ಕೃತ್ಯಕ್ಕೆ ಗ್ಯಾಂಗ್ ಇಂಡಿಕಾ ಗಾಡಿಯ ನಂಬರ್ ಪ್ಲೇಟುಗಳನ್ನು ಲಿಸುತ್ತದೆ. ಬಹುಶಃ ಗಾಡಿಯಲ್ಲೇ ವಿವಿಧ ನಂಬರ್ ುಗಳನ್ನು ತಂದಿರುತ್ತಾರೆ.

ಇದಿಷ್ಟೂ ಜಂಟಿ ಕಮಿಷನರ್ ಅಲೋಕ್‌ಕುಮಾರ್ ಢೀಕರಿಸಿದ ಮಾಹಿತಿಯಾದರೆ ಇದಕ್ಕೆ ತಾಳೆಯಾಗುವ ್ನ ಕೆಲ ಪ್ರಕರಣಗಳಿದ್ದವು. ಮೈಸೂರು ರಸ್ತೆಯ ೀಡೆಗೂ ಎರಡು ದಿನದ ಮುನ್ನ ಅಂದರೆ ಜುಲೈ ರಂದು ವಿಜಯನಗರದ ಸ್ನೇಹ ಟ್ರಾವಲ್ಸ್‌ಗೆ ತಿಯೊಬ್ಬರು ಕರೆ ಮಾಡುತ್ತಾರೆ. ತಾವು ಮಡಿಕೇರಿಗೆ ಹೋಗಬೇಕೆಂದೂ ತಮಗೊಂದು ಇನ್ನೋವಾ ಬಾಡಿಗೆಗೆ ಬೇಕೆಂದೂ ಗಿರಾಕಿ ಫೋನ್ ಮಾಡಿದ್ದಕ್ಕೆ ವಲ್ಸ್‌ನವರು ಕೆಎ 41-8107 ನಂಬರಿನ ಇನ್ನೋವಾ ನ ಜೊತೆ ಶಿವಕುಮಾರ್ ಎಂಬ ಡ್ರೈವರ್‌ನನ್ನು ಕೊಡುತ್ತಾರೆ.

ಮೊದಲು ಆವಲಹಳ್ಳಿಯ ವೆಂಕಟೇಶ್ವರ ಥೇಟರ್ ಬರಹೇಳಿ ಅಲ್ಲಿ ಮೂವರು ಪಡ್ಡೆ ಹುಡುಗರು ಗೆ ಹತ್ತಿ ಕೊಳ್ಳುತ್ತಾರೆ. ಡ್ರೈವರ್‌ಗೆ ಅನುಮಾನ ಬಂದು ುಲಿ ಅಂತ ಹೇಳಿದ್ರಲ್ಲ...' ಎಂದು ಪ್ರಶ್ನಿಸಿದರೆ ಕೊಂಡ ಹುಡುಗರು ಸುಂಕದಕಟ್ಟೆಯಲ್ಲಿ ಅಮ್ಮ ಮತ್ತು ಮ್ಮ ಕಾಯ್ತಾ ಇದ್ದಾರೆ ಎಂದು ಇನ್ನೋವಾ ಸಮೇತ ದಕಟ್ಟೆಗೆ ಬರುತ್ತಾರೆ. ಅಲ್ಲಿ ಯಾವುದೋ ಬಾರ್ ಗಾಡಿ ನಿಲ್ಲಿಸಲು ಹೇಳಿ ಅಲ್ಲಿ ಇನ್ನೂ ಇಬ್ಬರು ುಗರು ಗಾಡಿ ಹತ್ತಿದ್ದಾರೆ. ಆಗಲೇ ಡ್ರೈವರ್‌ಗೆ ಅನುಮಾನ ವಾಗಿದೆ. 'ಅಲ್ರೀ ಫ್ಯಾಮಿಲಿಯವ್ರು ಅಂದ್ರಿ, ಅಮ್ಮ, ಮ್ಮ ಕಾಯ್ತಾ ಇದ್ದಾರೆ ಎಂದು ಹುಡುಗ್ರನ್ನ ಕೊಂಡಿದ್ದಿರಲ್ಲ.... ' ಎಂದು ಎಲ್ಲರನ್ನೂ ಇಳಿಸಲು ್ನಿಸಿದರೆ ಹಿಂದೆ ಕೂತಿದ್ದ ದಾಂಡಿಗನೊಬ್ಬ ಡ್ರೈವರ್ ರ್ ಹಿಡಿದದ್ದೇ ಎರಡು ಬಾರಿಸುತ್ತಾನೆ.


ನಂತರ ಡ್ರೈವರ್‌ನನ್ನು ಹಿಂದಕ್ಕೆಳೆದು ತಂಡದಲ್ಲೇ ಒಬ್ಬ ನ್ನೋವಾ ಓಡಿಸಿಕೊಂಡು ಮಾಗಡಿಯತ್ತ ಬರುತ್ತಾರೆ. ಗೊಂಡನಹಳ್ಳಿ ಸಮೀಪ ಕತ್ತಲಲ್ಲಿ ಡ್ರೈವರ್‌ನ ಚಿನ್ನದ ಉಂಗುರ, ಮೊಬೈಲು ಕಿತ್ತುಕೊಂಡು ಗಾಡಿಯಿಂದ ರತಳ್ಳುತ್ತಾರೆ. ಆನಂತರ ಗಾಡಿ ಮಾಗಡಿ ದಿಕ್ಕಿನಲ್ಲಿ ರೆಯಾಗುತ್ತದೆ. ಹಾಗೇ ಕೊಂಡೊಯ್ದ ಇನ್ನೋವಾ ಗಿ ಒಂದು ವಾರಕ್ಕೆ ಬಿಡದಿ ಬಳಿ ಅನಾಥವಾಗಿ ರುತ್ತದೆ. ಇದು ಬಿಳಿ ಇಂಡಿಕಾ ದರೋಡೆಗೂ ಭಿನ್ನವಾದ ನೆಯಾದರೂ ದುಷ್ಕರ್ಮಿಗಳ ವಿವರಕ್ಕೂ ಕೃತ್ಯದ ಗೂ ಹೋಲಿಕೆಯಿದೆ.

ಇಂಡಿಕಾ ಕೇಡಿಗಳೇ ಈ ಕೃತ್ಯ ಎಸಗಿರಬಹುದಾ ಬುದಕ್ಕೆ ಪಕ್ಕಾ ಸಾಕ್ಷಾಧಾರಗಳಿಲ್ಲ. ಆದರೂ ಪೊಲೀಸರು ಡಿಕಾ ಗ್ಯಾಂಗೇ ಈ ಕೃತ್ಯವೆಸಗಿರಬಹುದೆಂಬ ಅನುಮಾನಕ್ಕೆ ಬಿದ್ದಾರೆ. ಕೆಲವೊಮ್ಮೆ ದರೋಡೆಗೆ ಬೇರೆ ಬೇರೆ ಡಿಗಳನ್ನು ಬಳಸುತ್ತಿರಬಹುದೆ? ಎಲ್ಲೋ ಕದ್ದ ಗಾಡಿಯನ್ನು ಲ್ಲೋ ದರೋಡೆಗೆ ಬಳಸಿ ಮತ್ತೆಲ್ಲೋ ನಿಲ್ಲಿಸಿ ರಿಯಾಗುತ್ತಾರಾ?

ಎಲ್ಲವೂ ಅಸ್ಪಷ್ಟ ಮತ್ತು ನಿಗೂಢ. ಇನ್ನು ಮುಂದೆ ಬಸ್ಸಿಗೆ ಕಾಯುವ ಯಾರೇ ಆದರೂ ಹುಷಾರಾಗಿ ೇಕು. ಅದರಲ್ಲೂ ಬಿಳಿ ಇಂಡಿಕಾದಲ್ಲಿ ಡ್ರೈವರ್ ಜೊತೆ ್ಲಿ ಇಬ್ಬರಿದ್ದಾರೆಂದರೆ, ಅವರು ಪಡ್ಡೆ ಹುಡುಗರಾಗಿದ್ದರೆ ಾವು ನಿಮ್ಮನ್ನು ಅರಸಿ ಬಂದಿದೆ ಎಂದೇ ಅರ್ಥ.

-ರಾ. ಸೋಮನಾಥ್

ಭದ್ರಾ ಮೇಲ್ದಂಡೆ ಹಗರಣ ಲಂಚದ ಬೆಳೆ



ಬಿಜೆಪಿಗಳ ಚಾಂಪಿಯನ್ ಖದೀಮ ಯಡಿಯೂರಪ್ಪ ಪರಪ್ಪನ ಆಗ್ರಹಾರ ಸೇರುವ ದಿನಗಳು ದೂರವಿದ್ದಂತಿಲ್ಲ. ಅಕ್ರಮ ಗಣಿಗಾರಿಕೆ ಹಗರಣದಲ್ಲಿ ಹಣ ದೋಚಿ ಲೋಕಾಯುಕ್ತರ ಕೈಗೆ ಸಿಕ್ಕಿಬಿದ್ದಿರುವ ಯಡ್ಡಿ ಈಗ ಲೇಟೆಸ್ಟಾಗಿ ಇನ್ನೊಂದು ಕಳ್ಳತನದಲ್ಲೂ ರೆಡ್ ಹ್ಯಾಂಡಾಗಿ ತಗುಲಿಕೊಂಡಿದ್ದಾನೆ.

ಭದ್ರಾ ಮೇಲ್ದಂಡೆ ಯೋಜನೆಯ ಡೀಲ್ ಇದು. ಜೆಡಿಎಸ್ ಶಾಸಕ ವೈಎಸ್‌ವಿ ದತ್ತ ನೀಡಿರುವ ಖಾಸಗಿ ದೂರು ಈಗ ಲೋಕಾಯುಕ್ತರ ತನಿಖೆಗೆ ದಾರಿ ಮಾಡಿಕೊಟ್ಟಿದೆ.

ಗಣಿ ಡೀಲ್‌ಗಳಲ್ಲಿ ಜಿಂದಾಲ್ ಗ್ರೂಪ್‌ನ ಸೌತ್‌ವೆಸ್ಟ್ ಮೈನಿಂಗ್ ಕಂಪನಿಯಿಂದ ತನ್ನ ಕುಟುಂಬದವರ ಪ್ರೇರಣಾ ಟ್ರಸ್ಟ್‌ಗೆ ಅಕ್ರಮವಾಗಿ ಹತ್ತಾರು ಕೋಟಿ ರೂಪಾಯಿ ಪಡೆದು ಸಿಕ್ಕಿಬಿದ್ದ ಯಡ್ಡಿ ಕೊನೆಗೆ ಸಿಎಂಗಿರಿಗೆ ರಾಜೀನಾಮೆ ಕೊಡಬೇಕಾಗಿ ಬಂತು. ಅದರ ಮುಂದುವರೆದ ಭಾಗದಂತಿರುವ ಈಗಿನ ಭದ್ರಾ ಮೇಲ್ದಂಡೆ ಯೋಜನೆಯ ಹಗರಣವೂ ಯಡ್ಡಿ ಫ್ಯಾಮಿಲಿಯ ಉದ್ಯಮಗಳೊಂದಿಗೆ ತಳಕು ಹಾಕಿಕೊಂಡಿದೆ.

13 ಕೋಟಿ ರೂಪಾಯಿ ಕಿಕ್ ಬ್ಯಾಕ್ ಡೀಲ್ ಇದು.

ಯಡ್ಡಿ ಮಕ್ಕಳ ಕಂಪನಿಗಳಾದ ದವಳಗಿರಿ ಪ್ರಾಪರ್ಟಿ ಹಾಗೂ ಸಹ್ಯಾದ್ರಿ ಹೆಲ್ತ್ ಕೇರ್ ಕಂಪನಿಗೆ ಬಿಡ್ಡಿ ಮಕ್ಕಳಾದ RNS ಉದ್ಯಮ ಸಂಸ್ಥೆಯವರು ಕೊಟ್ಟಿರುವ ಲಂಚದ ಹಣದ ಕತೆ ಇದು.

ಈ ಹಗರಣದ ದಾಖಲೆಗಳನ್ನು ಪರಿಶೀಲಿಸಿದರೆ ಯಡ್ಡಿ ಅಂಡ್ ಸನ್ಸ್‌ಗೆ ಈ ದೇಶದ ಕಾಯ್ದೆ ಕಾನೂನುಗಳ ಬಗ್ಗೆ ಕಿಂಚಿತ್ತೂ ಪರಿಜ್ಞಾನ ಇದೆ ಅನಿಸುವುದಿಲ್ಲ.

ಈ ಡೀಲ್‌ನಲ್ಲಿ ಇವರದ್ದು ಎಲ್ಲಾ ಖುಲ್ಲಂ ಖುಲ್ಲಾ!

ಡೀಲು ನೇರಾ ನೇರಾ! ಲಂಚವೂ ಸೀದಾ ಸಾದಾ!!

ಮತ್ತು ಇವೆಲ್ಲಕ್ಕೂ ದಾಖಲೆಗಳಿವೆ.

ಭದ್ರಾ ಮೇಲ್ದಂಡೆ ಯೋಜನೆ

ಶಿವಮೊಗ್ಗ ಬಳಿಯ ಲಕ್ಕವಳ್ಳಿಯ ಭದ್ರಾ ಜಲಾಶಯದಿಂದ 21.5 ಟಿ.ಎಂ.ಸಿ ಯಷ್ಟು ನೀರನ್ನು ಕಾಲುವೆ ಹಾಗೂ ಸುರಂಗ ಮಾರ್ಗದ ಮೂಲಕ ಚಿತ್ರದುರ್ಗ, ತುಮಕೂರು ಹಾಗೂ ಕೋಲಾರ ಜಿಲ್ಲೆಗಳಿಗೆ ತರುವ ಯೋಜನೆ ಇದಾಗಿದೆ. ಪ್ರಧಾನವಾಗಿ ಕುಡಿಯುವ ನೀರು ಹಾಗೂ ನೀರಾವರಿ ಉದ್ದೇಶದ ಯೋಜನೆ ಇದಾಗಿದೆ. ಕಳೆದ ಕೆಲ ದಶಕಗಳಿಂದಲೂ ಭದ್ರಾ ಮೇಲ್ದಂಡೆ ಯೋಜನೆಯ ಬಗ್ಗೆ ಚರ್ಚೆ, ಒತ್ತಾಯಗಳು ಕೇಳಿಬರುತ್ತಲೇ ಇದೆ. 2003ರ ಸುಮಾರಿಗೆ ರಾಜ್ಯ ನೀರಾವರಿ ನಿಗಮ ನಿಯಮಿತವು 550 ಕೋಟಿ ರೂಪಾಯಿಗಳ ಅಂದಾಜು ವೆಚ್ಚದ ಒಂದು ಕರಡು ಯೋಜನೆ ಸಿದ್ಧಪಡಿಸಿತ್ತು. ಆದರೆ ನಾನಾ ತರದ ಗೋಜಲುಗಳಿಗೆ ಸಿಲುಕಿ ಈ ಯೋಜನೆ ತಕ್ಷಣದಲ್ಲಿ ಟೇಕಾಫ್ ಆಗಿರಲಿಲ್ಲ. ಆದರೆ ಯಡ್ಡಿ ಉಪ ಮುಖ್ಯಮಂತ್ರಿಯಾಗಿದ್ದಾಗ ಈ ಯೋಜನೆಯತ್ತ ಕಾಕದೃಷ್ಟಿ ಹಾಕಿದ.


2007ರ ಜೂನ್‌ನಲ್ಲಿ ಈ ಯೋಜನೆಯ ಜಾರಿಗೆ ಅರ್ಹ ಗುತ್ತಿಗೆದಾರರಿಂದ ಬಿಡ್ ಕರೆಯುವ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು. ನಂತರ 2007 ಹಾಗೂ 2008ರ ಮೇ ತಿಂಗಳವರೆಗೂ ಬಿಡ್ ಸಲ್ಲಿಸುವಿಕೆ, ಪರಿಶೀಲನೆ, ಬಿಡ್‌ದಾರರ ತಾಂತ್ರಿಕ ಸಾಮರ್ಥ್ಯ, ಹಣಕಾಸು ಸ್ಥಿತಿಗತಿಗಳ ಪರಿಶೀಲನೆಯೆಂಬ ಪೂರ್ವಭಾವಿ ಕೆಲಸಗಳಾದವು. ಬಿಡ್ ಸಲ್ಲಿಸಿದ್ದ 16 ಕಂಪನಿಗಳ ಪೈಕಿ ಅಂತಿಮವಾಗಿ ಕೇವಲ ಐದನ್ನು ಶಾರ್ಟ್‌ಲಿಸ್ಟ್ ಮಾಡಿ ಉಳಿದವರನ್ನು ಹೊರಗಟ್ಟಲಾಯಿತು. ಅಂತಿಮ ಹಂತದ ಟೆಂಡರ್ ಪ್ರಕ್ರಿಯೆಯಲ್ಲಿ ಆ ಐವರ ಪೈಕಿ ಕೇವಲ ಎರಡು ಕಂಪನಿಗಳು ಮಾತ್ರ ಟೆಂಡರ್ ಸಲ್ಲಿಸುವಂತೆ ನೋಡಿಕೊಳ್ಳಲಾಯಿತು. ಆ ಕಂಪನಿಗಳೆಂದರೆ ಕಿರ್ಲೋಸ್ಕರ್ ಬ್ರದರ್ಸ್ ಕನ್ಸೋರ್ಟಿಯಮ್ ಹಾಗೂ ಮೇ. ಆರ್‌ಎನ್‌ಎಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್.

ಈ ನಡುವೆ ಎಸ್‌ಆರ್ ರೇಟ್ ಬೆಲೆ ಏರಿಕೆಗಳನ್ನು ನೆಪ ಮಾಡಿಕೊಂಡು 550 ಕೋಟಿ ರೂ ಇದ್ದ ಮೂಲ ಯೋಜನಾ ವೆಚ್ಚವನ್ನು ಯಡ್ಡಿ ಒಂದು ಸಾವಿರ ಕೋಟಿ ರೂಪಾಯಿಗಳಿಗೆ ಹೆಚ್ಚಿಸಿಬಿಟ್ಟಿದ್ದ. ಅಂತಿಮ ಬಿಡ್‌ದಾರರ ಪೈಕಿ ಕಿರ್ಲೋಸ್ಕರ್ ಬ್ರದರ್ಸ್ 1006 ಕೋಟಿ ರೂಪಾಯಿಗಳಿಗೆ ಟೆಂಡರ್ ಸಲ್ಲಿಸಿದ್ದರೆ RNS ಕಂಪನಿ 1032 ಕೋಟಿ ರೂಪಾಯಿ ನಮೂದಿಸಿತ್ತು. ಯಾವುದೇ ಟೆಂಡರ್ ಅಥವಾ ಕೊಟೇಶನ್ ಕರೆದಾಗ ಯಾರು ಅತೀ ಕಡಿಮೆ ಮೊತ್ತ ನಮೂದಿಸಿರುತ್ತಾರೋ ಅಂತ ಕಂಪನಿಗೇ ಗುತ್ತಿಗೆ ನೀಡ ಬೇಕೆಂಬುದು ಸರ್ಕಾರದ ನಿಯಮವಿದೆ. ಆದರೆ ಇಲ್ಲಿ ಯಡ್ಡಿ ಆರಿಸಿಕೊಂಡಿದ್ದು 1006 ಕೋಟಿ ರೂ. ಕೇಳಿದ್ದ ಕಿರ್ಲೋಸ್ಕರ್ ಬದಲಿಗೆ 1032 ಕೋಟಿ ನಮೂದಿಸಿದ್ದ RNS ಕಂಪನಿಯನ್ನು ಹುಬ್ಬಳ್ಳಿ ಮೂಲದ ಆರ್.ಎನ್. ಶೆಟ್ಟಿಗೆ ಸೇರಿರುವ RNS ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನೂರಾರು ಕೋಟಿ ರೂಪಾಯಿಗಳ ಗುತ್ತಿಗೆ ಪಡೆದುಕೊಳ್ಳವಲ್ಲಿ ಮೇಲುಗೈ ಸಾಧಿಸಲು ಶುರುಮಾಡಿತ್ತು. ಬಿಜೆಪಿ

Davalagiri Property Developers (P) Ltd – (2010-11)
26, Prerana Chambers
Nehrunagar Main Road
Kumarapark
Bangalore 560 020
Advance Received
Group Summary
1-Apr-2010 to 31-Mar-2011

Page

Particulars	Closing Balance	
	Debit	Credit
Murudeshwara Power		11,00,00,00.00
Grand Total		11,00,00,00.00



ನಾಯಕರೊಂದಿಗೆ ಶೆಟ್ಟಿಗಿರುವ ವ್ಯಾವಹಾರಿಕ ಸಂಬಂಧಗಳೇ ಇಂತಹ ಡೀಲ್‌ಗಳು ಕುದುರಲು ಕಾರಣವಾಗಿತ್ತು. ಆದೇ ರೀತಿ ಭದ್ರಾ ಮೇಲ್ದಂಡೆ ಯೋಜನೆಯ ಗುತ್ತಿಗೆಯೂ RNS ಗೆ ಸಿಕ್ಕಿತ್ತು.

ಇದಾಗಿದ್ದು 27.9.2008 ರಲ್ಲಿ, ಅಂದರೆ ಯಡಿಯೂರಪ್ಪ ರಾಜ್ಯದ ಮುಖ್ಯ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಕೇವಲ ಮೂರು ತಿಂಗಳಲ್ಲಿ!

2008 ರ ಮೇ 30 ರಂದು ಸಿಎಂ ಆದ ಯಡ್ಡಿ ಬೃಹತ್ ನೀರಾವರಿ ಇಲಾಖೆಯನ್ನು ಬಸವರಾಜ ಬೊಮ್ಮಾಯಿಗೆ ವಹಿಸಿದ್ದರಾದರೂ ಕರ್ನಾಟಕ ನೀರಾವರಿ ನಿಗಮ ನಿಯಮಿತವನ್ನು ತನ್ನ ಕೈಯಲ್ಲೇ ಇಟ್ಟುಕೊಂಡಿದ್ದರು, ಸಾವಿರಾರು ಕೋಟಿ ರೂಪಾಯಿ ಹರಿದಾಡುವ ನೀರಾವರಿ ನಿಗಮದ ಮೂಲಕ ನೂರಾರು ಕೋಟಿ ರೂಗಳ ಲಂಚದ ಬೆಳೆ ತೆಗೆಯಬಹು ದೆಂಬುದು ಯಡ್ಡಿಗೆ ಚೆನ್ನಾಗಿ ಗೊತ್ತಿತ್ತು, ಇದರ ನಂತರ 30.9.2008 ರಲ್ಲಿ ನೀರಾವರಿ ನಿಗಮದ 42ನೇ ಸಭೆ ಯಡ್ಡಿಯ ಅಧ್ಯಕ್ಷತೆಯಲ್ಲೇ ನಡೆದು 1032 ಕೋಟಿ ರೂಗಳ ಭದ್ರಾ ಮೇಲ್ದಂಡೆ ಯೋಜನೆಯ ಗುತ್ತಿಗೆ ಕಾಮಗಾರಿ ಯನ್ನು RNS ಕಂಪನಿಗೇ ವಹಿಸಲು ನಿರ್ಣಯಿಸಿತು.

ಇಲ್ಲಿ ಗಮನಿಸಬೇಕಾದ ಮುಖ್ಯ ವಿಚಾರ ಏನೆಂದರೆ RNSಗೆ ಈ ಗುತ್ತಿಗೆ ನೀಡುವ ಪ್ರಸ್ತಾವನೆಗೆ ಕರ್ನಾಟಕ ಪವರ್ ಕಾರ್ಪೊರೇಶನ್ ಹಾಗೂ ಆಗಿನ ಅಡ್ವೊಕೇಟ್ ಜನರಲ್ ಉದಯ ಹೊಳ್ಳ ಸ್ವತಂತ್ರವಾಗಿ, ಲಿಖಿತ ಆಕ್ಷೇಪಣೆ ದಾಖಲಿಸಿದ್ದಾಗಲೂ ಯಡ್ಡಿ ಅದನ್ನೆಲ್ಲಾ ನಿರ್ಲಕ್ಷಿಸಿ RNS ಪರವಾಗಿ ನಿರ್ಣಯ ಕೈಗೊಂಡರು.

ಇದೊಂದು ಕಾನೂನುಬಾಹಿರ ಕ್ರಮವಾಗಿತ್ತು, ಆದರೆ ಯಡ್ಡಿ RNSನವರೊಂದಿಗೆ ಮೊದಲೇ ಮಾಡಿಕೊಂಡಿದ್ದ ಲಂಚದ ಡೀಲ್‌ಗೆ ಪೂರಕವಾಗಿತ್ತು,

ಮಕ್ಕಳ ಕೈಗೆ ಲಂಚದ ದುಡ್ಡು!

ಯಡ್ಡಿ ಮಕ್ಕಳ ಪ್ರೇರಣಾ ಟ್ರಸ್ಟ್‌ನ ಹಲ್ಕಟ್‌ಗಿರಿಗಳು ಒಂದೆಡೆಯಾದರೆ ಈ ಲಂಚಕೋರರೇ ತೇಲಿಬಿಟ್ಟಿರುವ ಸಹ್ಯಾದ್ರಿ ಹೆಲ್ತ್ ಕೇರ್ ಅಂಡ್ ಡಯಾಗ್ನೋಸ್ಟಿಕ್ ಪ್ರೈವೇಟ್ ಲಿಮಿಟೆಡ್ ಎಂಬ ಸಂಸ್ಥೆಯು ಭದ್ರ ಮೇಲ್ದಂಡೆ ಯೋಜನೆಯ ಮೊದಲ ಫಲಾನುಭವಿಯಾಗಿತ್ತು, ಅಲ್ಲದೆ ಇದೇ ಯಡ್ಡಿ ಮಕ್ಕಳ ಮೆ. ದವಳಗಿರಿ ಪ್ರಾಪರ್ಟಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ಕೂಡ RNS ನವರಿಂದ ಕೋಟ್ಯಂತರ ರೂಪಾಯಿ ಹಣವನ್ನು ಕಿಕ್‌ಬ್ಯಾಕ್ ರೂಪದಲ್ಲಿ ಪಡೆದಿದೆ.

2006 ರ ಮಾರ್ಚ್ 27 ರಂದು ಅಸ್ತಿತ್ವಕ್ಕೆ ಬಂದ ದವಳಗಿರಿ ಪ್ರಾಪರ್ಟಿ ಡೆವಲಪರ್ಸ್ 5 ಕೋಟಿ ರೂಪಾಯಿ ಆರಂಭಿಕ ಬಂಡವಾಳ ಹೊಂದಿದ್ದ ಕಂಪನಿಯಾಗಿದೆ. ಇದರ ಪಾಲುದಾರರಾಗಿರುವ ವಿಜಯೇಂದ್ರ 1.30 ಲಕ್ಷ ಶೇರುಗಳನ್ನು, ಇನ್ನೊಬ್ಬ ಮಗ ರಾಘವೇಂದ್ರ ಕೂಡಾ 1.30 ಲಕ್ಷ ಶೇರುಗಳನ್ನು ಇದರಲ್ಲಿ ಹೊಂದಿದ್ದಾರೆ. ಜೊತೆಗೆ ಯಡ್ಡಿಯ ಅಳಿಯ ಸೋಹನ್ ಕುಮಾರ್‌ಗೂ ಅಷ್ಟೇ ಮೊತ್ತದ ಶೇರ್‌ಗಳಿವೆ. ಇವರಲ್ಲದೆ ಬಿ.ಎಸ್. ಅಶೋಕ್ ಕುಮಾರ್ ಎಂಬ ಬೆಸ್ಕೋ ಐಸ್‌ಕ್ರೀಮ್ ಮಾಲೀಕ ದವಳಗಿರಿಯಲ್ಲಿ 1.25 ಲಕ್ಷ ಶೇರ್ ಹೊಂದಿದ್ದಾನೆ. ಕೇವಲ 5 ಕೋಟಿ ರೂ. ಬಂಡವಾಳದ ದವಳಗಿರಿ ಕಂಪನಿಗೆ RNS ಶೆಟ್ಟಿಯ ಇನ್ನೊಂದು ಸಹೋದರ ಸಂಸ್ಥೆಯಾದ ಮುರು ಡೇಶ್ವರ ಪವರ್ ಕಾರ್ಪೊರೇಷನ್ ಲಿಮಿಟೆಡ್ ಕಂಪನಿಯು 2010-11 ನೇ ಸಾಲಿನಲ್ಲಿ ಒಂದೇ ಸಾರಿಗೆ ಹನ್ನೊಂದು ಕೋಟಿ ರೂಪಾಯಿಗಳನ್ನು ಅಡ್ವಾನ್ಸ್ ರೂಪದಲ್ಲಿ ಪಾವತಿಸಿದೆ.

ಅದೇರೀತಿ ಯಡ್ಡಿ ಮಕ್ಕಳ ಸಹ್ಯಾದ್ರಿ ಹೆಲ್ತ್ ಕೇರ್ ಕಂಪನಿಗೆ ಇದೇ RNS ಶೆಟ್ಟಿಯ ಮುರುಡೇಶ್ವರ ಪವರ್ ಕಾರ್ಪೊರೇಷನ್ ಕಂಪನಿ 2 ಕೋಟಿ ರೂ.ಗಳನ್ನು ಬಂಡವಾಳ ಹೂಡಿಕೆ ರೂಪದಲ್ಲಿ ನೀಡಿದೆ. ಇಲ್ಲಿನ ವಂಚನೆ ಎಷ್ಟಿದೆಯೆಂದರೆ ಸಹ್ಯಾದ್ರಿ ಹೆಲ್ತ್ ಕೇರ್‌ನ ಒಟ್ಟು ಬಂಡವಾಳವೇ 5 ಕೋಟಿ ರೂ.ಗಳಾಗಿದ್ದು ಆ ಹಣ ಪೂರ್ತಿಯಾಗಿ ಮೂಲ ಪಾಲುದಾರರಿಂದಲೇ ಹೂಡಿಕೆಯಾಗಿದೆ. ಹಾಗಿದ್ದಾಗಲೂ ಯಡ್ಡಿ ಮಕ್ಕಳು RNS ಕಂಪನಿಯಿಂದ ಲಂಚದ ಹಣವನ್ನು ಸಹ್ಯಾದ್ರಿ ಕಂಪನಿಗೆ ಬಂಡವಾಳ ಹೂಡಿದಂತೆ ಬಿಂಬಿಸಿ ಹಣ ಜೇಬಿಗಿಳಿಸಿದ್ದಾರೆ.

ಈ RNS ನವರಿಗೆ ಅದೆಷ್ಟು ಧೈರ್ಯವೆಂದರೆ ಯಡ್ಡಿ ಮಕ್ಕಳ ಖಾಸಗಿ ಕಂಪನಿಗಳಿಗೆ ಒಟ್ಟು 13 ಕೋಟಿ ರೂಪಾಯಿ ಪಾವತಿಸಿರುವ ಬಗ್ಗೆ ಮುಚ್ಚುಮರೆ ಮಾಡದೆ ತಮ್ಮ ಕಂಪನಿಯ ವಹಿವಾಟಿನ ದಾಖಲೆಗಳಲ್ಲೂ ತೋರಿಸಿಕೊಂಡಿದ್ದಾರೆ. ಮುಖ್ಯಮಂತ್ರಿಯಾಗಿದ್ದ ಯಡ್ಡಿ ಭದ್ರಾ ಮೇಲ್ದಂಡೆ ಯೋಜನೆಯ ಗುತ್ತಿಗೆ ಕಾಮಗಾರಿ ಯನ್ನು RNS ಇನ್‌ಫ್ರಾಸ್ಟ್ರಕ್ಚರ್ ಕಂಪನಿಗೆ ಕಾನೂನುಬಾಹಿರವಾಗಿ ಮಂಜೂರು ಮಾಡಿದ್ದಕ್ಕೂ ಅದರ ಬೆನ್ನಲ್ಲೇ ಅದೇ RNS ಗ್ರೂಪ್‌ನ ಇನ್ನೊಂದು ಕಂಪನಿಯಿಂದ ಯಡ್ಡಿ ಮಕ್ಕಳಿಗೆ 13 ಕೋಟಿ ರೂಪಾಯಿ ಪಾವತಿಯಾಗಿರು ವುದಕ್ಕೂ ಸಮಾ ಹೊಂದಿಕೆಯಾಗುತ್ತಿದೆ.

ಲೋಕಾಯುಕ್ತ ಪೊಲೀಸರೀಗ ಈ ಭ್ರಷ್ಟಾಚಾರದ ಹಗರಣದ ತನಿಖೆ ಚಾಲೂ ಮಾಡಿದ್ದಾರೆ.

ಈ ಪ್ರಕರಣದಲ್ಲಿ ಬರೀ ಯಡ್ಡಿ ಮಾತ್ರವಲ್ಲ, ವಿಜಯೇಂದ್ರ, ರಾಘವೇಂದ್ರ, ಸೋಹನ್ ಕುಮಾರ್ ಹಾಗೂ RNS ಶೆಟ್ಟಿಯೂ ಜೈಲಿಗೆ ಹೋಗುವಂತಾಗಬೇಕು.

-ಪಾರ್ವತೀಶ

ವೈಎಸ್‌ವಿ ದತ್ತಾರ ಶ್ರಮ ಮತ್ತು ಕಾಳಜಿ



ಈಗ ಯಡ್ಡಿಯ ಕುತ್ತಿಗೆಗೆ ಸುತ್ತಿಕೊಳ್ಳುತ್ತಿರುವ ಭದ್ರಾ ಮೇಲ್ದಂಡೆ ಯೋಜನೆಯ ಹಗರಣ ಬೆಳಕಿಗೆ ಬಂದಿದ್ದೇ ಜನತಾದಳದ ಶಾಸಕ ವೈಎಸ್‌ವಿ ದತ್ತಾರ ಶ್ರಮದಿಂದ. ಕಳೆದ ನಾಲ್ಕು ತಿಂಗಳಿಂದ ಈ ಪ್ರಕರಣದ ಬೆನ್ನು ಹತ್ತಿದ್ದ ದತ್ತಾ ಥೇಟ್ ಖಾಸಗಿ ಪತ್ತೇದಾರರಂತೆ ಓಡಾಡಿ, ಅನೇಕ ಮಾಹಿತಿ, ಅಧಿಕೃತ ದಾಖಲೆಗಳನ್ನು ಹುಡುಕಿ ಎಂತಹ ಕೇಸ್ ದಾಖಲಿಸಿದ್ದಾರೆಂದರೆ.....

ಲೋಕಾಯುಕ್ತ ನ್ಯಾಯಾಲಯವು ದತ್ತಾರ ದೂರಿನ ಸಾರಾಂಶ ನೋಡಿಯೇ ಈ ಪ್ರಕರಣದಲ್ಲಿ ಯಡ್ಡಿ ಅಪರಾಧವೆಸಗಿದ್ದಾನೆಂದು ಪರಿಗಣಿಸಬೇಕಾಯಿತು. ಅದರಂತೆ ಪ್ರಕರಣ ದಾಖಲಾಗಿ ತನಿಖೆ ಶುರುವಾಗಿ ಈಗ ಎಫ್‌ಐಆರ್ ಕೂಡಾ ಸಲ್ಲಿಕೆಯಾಗಿದೆ.

ಆರಂಭಿಕ ಹಂತದಲ್ಲೇ ಈ ಕೇಸ್‌ನಿಂದ ತಪ್ಪಿಸಿಕೊಳ್ಳಲು ಯಡ್ಡಿ ಯತ್ನಿಸಿದರಾದರೂ ಫಲ ಸಿಗಲಿಲ್ಲ. ಇಂಥದ್ದೊಂದು fool proof ಕೇಸ್ ದಾಖಲಿಸಿರುವ ದತ್ತಾರ ಶ್ರಮಕ್ಕೆ ಹಾಗೂ ಕಾಳಜಿಗೆ ಅಭಿನಂದನೆ ಹೇಳಲೇಬೇಕು.

ಕರಾವಳಿ ಮತ್ತದೇ ಶನಿಶಕೆ ಶುರುವಾಯ್ತು!

ಕರಾವಳಿಯ ಕೇಡುಗಾಲ ಸದ್ಯಕ್ಕಂತೂ ಕೊನೆಗೊಳ್ಳುವ ಹಾಗೆ ಕಾಣಿಸುತ್ತಿಲ್ಲ! ದುರಹಂಕಾರಿ ಯಡ್ಡಿ ಸಿಎಂ ಪೀಠದಿಂದ ತೊಲಗಿದ ನಂತರ ಮೋಕ್ಷ ಸಿಗಬಹುದೆಂದು ಜನತೆ ಕಾತರದಿಂದ ನಿರೀಕ್ಷಿಸಿತ್ತು. ಆದರೆ 'ಹೋದೆಯಾ ಪಿಶಾಚಿ ಅಂದರೆ ಬಂದೆ ಗವಾಕ್ಷೀಲಿ' ಎಂಬಂತಾಗಿದೆ....

● ನಹುಷ




ಕರಾವಳಿಯ ಕೇಡುಗಾಲ ಸದ್ಯಕ್ಕಂತೂ ಕೊನೆಗೊಳ್ಳುವ ಹಾಗೆ ಕಾಣಿಸುತ್ತಿಲ್ಲ! ದುರಹಂಕಾರಿ ಯಡ್ಡಿ ಸಿಎಂ ಪೀಠದಿಂದ ತೊಲಗಿದ ನಂತರ ಆತನ ಸಚಿವ ಸಂಪುಟದಲ್ಲಿದ್ದ ಕಳಂಕಿತ ವಿ.ಎಸ್. ಆಚಾರ್ಯ, ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ಕೃಷ್ಣ ಪಾಲೇಮಾರ್‌ರಿಂದ ಕರಾವಳಿಗೆ ಮೋಕ್ಷ ಸಿಗಬಹುದೆಂದು ಜನತೆ ಕಾತರದಿಂದ ನಿರೀಕ್ಷಿಸಿತ್ತು. ಆದರೆ 'ಹೋದೆಯಾ ಪಿಶಾಚಿ ಅಂದರೆ ಬಂದೆ ಗವಾಕ್ಷೀಲಿ' ಎಂಬಂತಾಡುತ್ತಿವೆ ಈ ಮೂರು ಅನಿಷ್ಟಗಳು. ಡಿವಿಎಸ್ ಗೌಡರ ಹೊಚ್ಚ ಹೊಸ ಅಚ್ಚ ಚೆಡ್ಡಿ ಸರ್ಕಾರದಲ್ಲಿ ನುಸುಳಿಕೊಂಡಿರುವ ಈ ಶನಿಗಳು ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡದ ಹೆಗಲೇರಿ ಕೂತುಬಿಟ್ಟವೆ!!

ಅಯ್ಯೋ! ಈ ಪಾಪಿಗಳು ಉಳಕೊಂಡು ಬಿಟ್ರಲ್ಲಾ ಎಂದು ಕರಾವಳಿಯ ಜನ ಬಾಯ್ಬಾಯಿ ಬಡಿದುಕೊಂಡು ಪರಿತಪಿಸು ತ್ತಿರುವುದು ಕರುಣಾಜನಕವಾಗಿದೆ! ತಮ್ಮನ್ನು ಮಂತ್ರಿ ಮಾಡಿದ ಹೆತ್ತ ಜಿಲ್ಲೆಯ ಋಣ ತೀರಿಸಬೇಕೆಂಬ ಸಣ್ಣ ಪ್ರಜ್ಞೆಯೂ ಇಲ್ಲದ ಈ ಹೊಟ್ಟೆಬಾಕ ಹರಾಮಿಗಳು ಸಿಕ್ಕಿದ್ದೆಲ್ಲ ಈ ಮೂರು ವರ್ಷ ನಿರಂತರವಾಗಿ ಮುಕ್ಕಿ ಮೆರೆದಿದ್ದಾರೆ. ಯಡ್ಡಿಯ ಕುರ್ಚಿ ಹಿಂದೂತ್ವ, ಕಿಸೆಗಳ್ಳತನ, ದರೋಡೆ ಗರಡಿಯಲ್ಲಿ ಪಳಗಿರುವ ದಗಾಕೋರ ಆಚಾರ್ಯ, ಕಾಗೇರಿ ಮತ್ತು ಪಾಲೇಮಾರ್ ತಂತಮ್ಮ ಜಿಲ್ಲೆಗೇನೂ ಒಳ್ಳೆ ಯದು ಮಾಡದಿದ್ದರೂ ಸ್ವಜೇಣೋದ್ಧಾರ ಮಾತ್ರ ಸಖತ್ತಾಗೇ ಮಾಡಿಕೊಂಡುಬಿಟ್ಟಿದ್ದಾರೆ! ಜನಪರ ಬದ್ಧತೆ-ನಿಯತ್ತು-ಪ್ರಾಮಾಣಿಕತೆ ಮತ್ತು ಪ್ರಜಾಪ್ರಭುತ್ವದ ಆಶಯದ ಕನಿಷ್ಠ ಅರಿವೂ ಇಲ್ಲದ ಮನೆಮುರುಕ ಮಂತ್ರಿ ಮೂವರಿಂದ ಮುಂದೆಯೂ ಅವರವರ ಜಿಲ್ಲೆಗೆ ಪೈಸೆ ಪ್ರಯೋಜನವಾಗುವ ವಿಶ್ವಾಸ ಯಾರಲ್ಲೂ ಇಲ್ಲ....

ಪಾಕಡಾ ಪಾಲೇಮಾರ್

ಮಂಗಳೂರು ಉತ್ತರ ಕ್ಷೇತ್ರದಲ್ಲಿ ಹಡಬೆ ಹಣ-ಹಿಂದೂತ್ವದ ಹರಾಮಿ ಹಿಕಮತ್ತಿನಿಂದ ಎಮ್ಮೆಲ್ಲೆಯಾದ ಮೊದಲ ಅಟೆಂಪ್ಟ್‌ನಲ್ಲೇ ಮಿನಿಸ್ಟರ್ ಆದ ಗೋಲ್‌ಮಾಲ್ ಗಿರಾಕಿ ಕೃಷ್ಣ ಪಾಲೇಮಾರ್‌ಗೆ ಕಪ್ಪು ಕಾಸೇ ಸಕಲ ಕ್ಯಾಲಿಬರ್! ಒಂದು ಕಾಲದಲ್ಲಿ ಟ್ಯಾಕ್ಸಿ ಡ್ರೈವರ್ ಆಗಿ, ತೊಗ ಲೋದ್ಯಮದ ಲಾಡ್ಜ್‌ಗೆ ಬಂದವರೆದುರು ಗಿರಾಕಿ ಕುದುರಿಸುವನಾಗಿ ಜಂಜಾಟದ ಜೀವನ ಸಾಗಿಸುತ್ತಿದ್ದ ಪಾಲೇಮಾರ್ ಆ ನಂತರ ಖತರ್‌ನಾಕ್ ರಿಯಲ್ ಎಸ್ಟೇಟ್ ಉದ್ಯಮಿಯಾಗಿ ರೂಪಾಂತರ ವಾದ ಕತೆ ರೋಚಕವಾಗಿದೆ. ಕ್ರಮೇಣ ಲೇಔಟರ್- ಬಿಲ್ಡರ್ ಆದ ಪಾಲೇಮಾರ್ ಸಂಘಪರಿವಾರದ ಹಿಂದೂತ್ವ ದ ಹಿಂಸೋತ್ಸವಕ್ಕೆಲ್ಲ ಫೈನಾನ್ಶಿಯರ್ ಆಗಿಬಿಟ್ಟಿದ್ದರು. ಬಿಜೆಪಿ ಅಖಿಲ ಭಾರತ ಮಟ್ಟದ ಮಾಂಡಲೀಕ ಅನಂತ ಕುಮಾರ್‌ನ ಹುಡ್ಕೊ ಸ್ಕ್ಯಾಂಡಲ್ಲಿನ ಫಲಾನುಭವಿ ಈ ಪಾಲೇಮಾರ್.

ಹುಡ್ಕೋದಲ್ಲಿ ಕೋಟ್ಯಾಂತರ ಹೊಡಕೊಂಡ ಪಾಲೇಮಾರ್‌ಗೆ ಸಕಲ ಪಕ್ಷದ ರಂಗೀಲಾ ರಾಜಕಾರಣಿಗಳ ಗೆಣೆಗಾರಿಕೆಯೂ ಕುದುರಿತು. ಕರಾವಳಿ ಬಿಜೆಪಿಯ ರಿಂಗ್‌ಮಾಸ್ಟರ್ ಡಾ. ಕಲ್ಲಡ್ಕ ಪ್ರಭಾಕರ ಭಟ್ಟರ ಹಣದ ಹಪಾಹಪಿಯ ಗ್ರಾಫ್ ಅರ್ಥಮಾಡಿಕೊಂಡು ಆಗಾಗ ಪಾಲೇಮಾರ್ ತನ್ನ ಕಳ್ಳ ದುಡ್ಡು ಹರಿಸತೊಡಗಿದ. ಇದು ಆತನನ್ನು ಬಿಜೆಪಿಯ "ಬೆಲೆಯುಳ್ಳವ" ಶಾಸಕ-ಮಂತ್ರಿಯನ್ನಾಗಿ ಮಾಡಿಬಿಟ್ಟಿತು. ಹಿಂದುಳಿದ ರಾಮ ಕ್ಷತ್ರಿಯ (ಶೇರುಗಾರ) ಜಾತಿಯ ಪಾಲೇಮಾರ್ ಪುರೋಹಿತಶಾಹಿ ಕಲ್ಲಡ್ಕ ಭಟ್ಟರ ಪಾದಪೂಜೆ ಮಾಡಿಯೇ ಎರಡೆರಡು ಬಾರಿ ಬಿಜೆಪಿ ಟಿಕೆಟ್ ಪಡೆದು ಶಾಸಕನಾಗಿರುವಾತ. ಇದೇ ಹೊತ್ತಲ್ಲಿ ಪಾಲೇಮಾರ್‌ಗೆ ಅಂದು ಮಂಗಳೂರು ಎಂಪಿಯಾಗಿದ್ದ -ದಿಲ್ಲಿ ದಣಿಗಳ ಲಿಂಕುಗಳಿದ್ದ ಡಿ.ವಿ.ಸದಾನಂದ ಗೌಡರೊಂದಿಗೆ ರಾಜಕೀಯವಾಗಷ್ಟೇ ಅಲ್ಲ, ವ್ಯಾವಹಾರಿಕವಾಗೂ ನಂಟಿತ್ತು.



ಕೃಷ್ಣ ಪಾಲೇಮಾರ್


ಮಂಗಳೂರಲ್ಲಿರುವ ಸದಾನಂದ ಗೌಡರ ಹಲವು ಬೇನಾಮಿ ಬಿಲ್ಡಿಂಗ್-ಕಾಂಪ್ಲೆಕ್ಸ್‌ಗಳ ಖರೀದಿ-ನಿರ್ಮಾಣದ ಹಿಂದೆ ಬಿಲ್ಡರ್ ಪಾಲೇಮಾರ್‌ನ 'ಪವಾಡ' ಇದೆಯೆಂಬುದು ಟಾಕ್ ಆಫ್ ದಿ ಟೌನ್ ಸಂಗತಿ! ದೀವಿಯ ಮಗನೂ ರಿಯಲ್ ಎಸ್ಟೇಟ್ ವ್ಯವಹಾರಸ್ಥ. ಹೀಗಾಗಿ 'ಹಿರಿಯ' ರಿಯಲ್ ಎಸ್ಟೇಟ್ ಡಾನ್ ಪಾಲೇಮಾರ್‌ನೊಂದಿಗೆ ಈ ಕಿರಿಯ ಭೂವ್ಯಾಪಾರಿಗೆ ಬಿಸಿನೆಸ್ ರಿಲೇಷನ್ ಸಹಜವಾಗೇ ಇದೆ! ದೀವಿ ಎಂಪಿಗಿರಿಗೆ ನಿಂತಾಗೆಲ್ಲ ಪಾಲೇಮಾರ್ ರಹಸ್ಯ ಫಂಡ್ ಕೊಡುವುದು ವಾಡಿಕೆ. ದಕ್ಷಿಣ ಕನ್ನಡದ ಬಿಜೆಪಿಗೆ-ಹಿಂದೂ ಸಂಘಟನೆಗಳಿಗೆ ಹಣದ ಅಡಚಣೆ ಇದ್ದಾಗ ಪಾಲೇಮಾರ್ ಹೇಗೆ ಫೈನಾನ್ಸ್ ಮಾಡುತ್ತಿದ್ದರೋ ಹಾಗೇ ದೀವಿಗೂ ಆರ್ಥಿಕ ಮುಗ್ಗಟ್ಟಿದ್ದಾಗೆಲ್ಲ ಧಾರಾಳತನ ತೋರಿಸುತ್ತ ಬಂದಿದ್ದಾರೆ. ಕರಾವಳಿಯ ಚೆಡ್ಡಿ ಶಾಸಕರು ಅಥವಾ ಮಾಜಿಗಳಲ್ಲಿ ದೀವಿ-ಪಾಲೇಮಾರ್‌ನಷ್ಟು ಗಳಸ್ಯಕಂಠಸ್ಯ ಮತ್ಯಾರೂ ಇಲ್ಲ!!

ಪಾಲೇಮಾರ್‌ನನ್ನು ಯಡ್ಡಿ ಕ್ಯಾಬಿನೆಟ್‌ಗೆ ಸೇರಿಸಿದ್ದೇ ದೀವಿಯ ಸ್ಟ್ರೆಟಜಿ! ಕಲ್ಲಡ್ಕದ ಚೆಡ್ಡಿ ಹೈಕಮಾಂಡ್ ಅನ್ನು ಅಂದು ಪಾಲೇಮಾರ್ ಪರ ಹದಗೊಳಿಸಿದ್ದು ದೀವಿಯಾಗಿತ್ತು. ಮೂರ್ಮೂರು ಬಾರಿ ಶಾಸಕರಾಗಿದ್ದ ಮಂಗಳೂರು ದಕ್ಷಿಣದ ಕೊಂಕಣಿ ಯೋಗೀಶ್ ಭಟ್ ಮತ್ತು ಸುಳ್ಯದ ದಲಿತ ಅಂಗಾರನಂಥ ಸೀನಿಯರ್ ಗಳಿಗೆಲ್ಲ ವಂಚಿಸಿ ಪೆದ್ದು ಪಾಲೇಮಾರ್‌ಗೆ ಮಂತ್ರಿ ಮಾಡಿದ ಯಡ್ಡಿಯ ನಿರ್ಧಾರದ ಹಿಂದೆ ಆಗ ರಾಜ್ಯ ಬಿಜೆಪಿ ಅಧ್ಯಕ್ಷನಾಗಿದ್ದ ದೀವಿಯ ಮಸಲತ್ತು ಅಡಗಿತ್ತು. ಮಂತ್ರಿಯಾಗುವ ಯಾವ ಅರ್ಹತೆ- ಯೋಗ್ಯತೆ ಇಲ್ಲದ ಪಾಲೇಮಾರ್‌ಗೆ ಆ ಯೋಗ ಬಂದಾಗ ದೀವಿ ಬಗ್ಗೆ ಕರಾವಳಿ ಯ ಬಿಜೆಪಿ ಪಾರ್ಟಿಯಲ್ಲಿ ಚಿತ್ರವಿಚಿತ್ರ ಚರ್ಚೆಗಳಾಗಿತ್ತು. ದೀವಿ-ಪಾಲೇಮಾರ್‌ರ ಜನ್ಮಜನ್ಮಾಂತ ರದ ಮೈತ್ರಿ ಕುರಿತು ರೋಚಕ ವ್ಯಾಖ್ಯಾನಗಳು ಹಾರಾಡ ಲಾರಂಭಿಸಿತ್ತು.


ನೆಲ-ಮುಗಿಲು ಒಂದು ಮಾಡಿ ಯಡ್ಡಿ ಸಂಪುಟಕ್ಕೆ ನಂಬಿಗಸ್ಥ-ಹಣವಂತ ಬಂಟನನ್ನು ಸೇರಿಸಿದ್ದ ದೀವಿ ಸ್ವತಃ ತಾನೇ ಸಿಎಂ ಆಗಿರುವಾಗ ಆತನ ಕೈಬಿಡಲು ಸಾಧ್ಯವೇ? ತವರೂರು ಸುಳ್ಯದ ಶಾಸಕ ಅಂಗಾರನನ್ನು ಮಂತ್ರಿ ಮಾಡಿ ದಲಿತರ ಕಣ್ಣಿಗೆ ಮಣ್ಣೆರಚುವ ದೂ(ದು) ರಾಲೋಚನೆ ಒಂದು ಹಂತದಲ್ಲಿ ದೀವಿ ಮಾಡಿದ್ದರಂತೆ. ಆದರೆ ಬಲಾಢ್ಯ ಬಿಲ್ಡರ್ ಮಿತ್ರನ ಸಖ್ಯ ಕಡಿದುಕೊಳ್ಳುವ ಧೈರ್ಯ ದೀವಿಗಿರಲಿಲ್ಲ, ಮಂತ್ರಿಗಿರಿ ಕೈಂಕರ್ಯದಲ್ಲಿ ಪಾಲೇಮಾರ್ ಸಂಕಷ್ಟಕ್ಕೆ ಸಿಲುಕಿದಾಗೆಲ್ಲ ದೀವಿ ಬಚಾಯಿ ಸುತ್ತಾ ಬಂದಿದ್ದರು. ಆರೆಸ್ಸೆಸ್ ದೊರೆಗಳು ರಾಂಗ್ ಆದಾಗ ಉಪಸ್ಪೀಕರ್ ಯೋಗೀಶ್ ಭಟ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಪದ್ಮನಾಭ ಕೊಟ್ಟಾರಿ, ಮಾಜಿ ಮಂತ್ರಿ ಗೋಣಿ ನಾಗನಂಥವರು ಮುನಿಸಿಕೊಂಡಾಗಲೆಲ್ಲ ದೀವಿಯೇ 'ರಾಜಿ' ಮಾಡಿಸುತ್ತಿದ್ದರು.

ದೀವಿ ಶಿಷ್ಯ ಪಾಲೇಮಾರ್‌ನ ಮಂತ್ರಿಗಿರಿ ದರ್ಬಾರಿ ನಲ್ಲಿ ದಕ್ಷಿಣ ಕನ್ನಡಕ್ಕೆ ದರಿದ್ರ ಹಿಡಿದಂತಾಗಿ ಹೋಗಿತ್ತು! ಪಬ್-ಚರ್ಚ್ ಮೇಲೆ ಮತಾಂಧರ ಪೈಶಾಚಿಕ ದಾಳಿ, ಕೋಮು ಕಿತಾಪತಿ ಒಂದೆಡೆಯಾದರೆ, ಅತ್ತ ಸರ್ಕಾರಿ ಕಚೇರಿಗಳಲ್ಲಿ ಲಂಚಾವತಾರ, ರೈತ -ಮೀನುಗಾರರ, ಅಡಿಕೆ ತೋಟಗರ ಬವಣೆ, ಎಸ್‌ಇಝೆಡ್ ರಗಳೆ, ಕೊಲೆ, ವಾಮಾಚಾರ, ಭಜರಂಗಿ-ಚೆಡ್ಡಿಗಳ (ಅ)ನೈತಿಕ ಪೊಲೀಸ್‌ಗಿರಿ, ನಮ್ಮ ಹುಡುಗಿ-ಅವರ ಹುಡುಗ ಪ್ರಕರಣಗಳು ಅಕ್ರಮ ಮರಳುಗಾರಿಕೆ.... ಒಂದೇ ಎರಡೇ? ಎಲ್ಲ ಮಂತ್ರಿ ಪಾಲೇಮಾರ್ ಸಾಹೇಬರ ಮೂಗಿನ ನೇರಕ್ಕೇ ನಡೆಯತೊಡಗಿತ್ತು. ಬಿಲ್ಡರ್ ಮಂತ್ರಿಯ ಸಾಮ್ರಾಜ್ಯದಲ್ಲಿ ಮೋಟ ಶ್ಯಾಮನಂಥ ಲಫಡಾ ಬಿಲ್ಡರ್‌ನೇ ಮಂಗಳೂರು ನಗರ ಪಾಲಿಕೆ, ನಗರಾಭಿವೃದ್ಧಿ ಪ್ರಾಧಿಕಾರವನ್ನೆಲ್ಲ ಆಳತೊಡಗಿದ್ದರು. ಅಕ್ರಮ ಬಿಲ್ಡರ್, ರಿಯಲ್ ಎಸ್ಟೇಟ್ ಖದೀಮರ ಹಾವಳಿ ಮಿತಿಮೀರಿ ಹೋಯ್ತು! 'ತಮ್ಮವನೇ' ಮಂತ್ರಿ ಮಾಂಡಲಿಕನಾಗಿ ರುವಾಗ ಈ ದೋ ನಂಬರ್ ದಂಧೆದಾರರು ಯಾರಿಗೆ ಕೇರ್ ಮಾಡ್ತಾರೆ?!

ಈ ಪಾಲೇಮಾರ್ ಮಂತ್ರಿಗಿರಿಯಲ್ಲಿ ಕೆಟ್ಟದ್ದೇ ಮಾಡಿದ್ದಾರೆ. ವಕೀಲ ಪ್ರೀತಮ್‌ನ ನಿಗೂಢ ಕಣ್ಮರೆಯಲ್ಲಿ ಮಂತ್ರಿ ಪಾಲೇಮಾರನ ಕೈವಾಡ-ಪ್ರಭಾವ ಇರುವ ಬಗ್ಗೆ ಇವತ್ತಿಗೂ ಗುಮಾನಿ ಇದೆ. ಈ ಪ್ರೀತಮ್ ಎಂಬ ಬಿಲ್ಲವರ ಹುಡುಗ ಮಂತ್ರಿ ಪಾಲೇಮಾರನ ಸಂಬಂಧಿ ಫಾರೆಸ್ಟ್ ಅಧಿಕಾರಿಯೊಬ್ಬಳ ಮಗಳನ್ನು ಪ್ರೇಮಿಸಿದ್ದೇ ದೊಡ್ಡ ಅಪರಾಧವಾಗಿತ್ತು. ಪೊಲೀಸರು ಪ್ರೀತಮ್ ಕಣ್ಮರೆ ಕೇಸ್‌ನ್ನು ಪಾಲೇಮಾರನ ನಿರ್ದೇಶನದಂತೆ ಹಳ್ಳಹಿಡಿಸಿದ್ದಾರೆಂಬುದು ಮಂಗಳೂರಿನಲ್ಲಿ ಜನಜನಿತ ಸಮಾಚಾರ. ಹಾಗೆಯೇ ಕೋಟ್ಯಂತರ ರೂಪಾಯಿ ವಹಿವಾಟಿನ ಅಕ್ರಮ ಮರಳುಗಾರಿಕೆಯಲ್ಲಿ ಮಂತ್ರಿ ಪಾಲೇಮಾರನೇ ಕಿಂಗ್‌ಪಿನ್ ಎಂಬುದಕ್ಕೆ ಆತನ ಸಂಶಯಾಸ್ಪದ ನಡವಳಿಕೆಯೇ ಸಾಕ್ಷಿಯಂತಿದೆ! ಒಟ್ಟಿನಲ್ಲಿ ಈ ಜೋಭದ್ರಗೇಡಿ ತನ್ನ ಸಚಿವಗಿರಿ ಪರ್ವದಲ್ಲಿ ಏನಾದರೂ ಜನಪರ ಕೆಲಸ ಮಾಡಿದ್ದಾನಾ ಎಂದು ದುರ್ಬೀನು ಹಿಡಿದು ನೋಡಿದರೂ ಸಣ್ಣ ಕುರುಹೂ ಕಾಣಿಸದು. ಇಂಥ ಕರ್ಮಗೇಡಿ ಮತ್ತೆ ದೀವಿ ಸರ್ಕಾರದಲ್ಲಿ ಸಚಿವನಾಗಿರುವುದು ದಕ್ಷಿಣ. ಕನ್ನಡದ ದುರಂತವೇ ಸರಿ!!



ಕಾಗೇರಿ



ವಿ.ಎಸ್. ಆಚಾರ್ಯ

ಅಸಡ್ಡಾಳ ಆಚಾರ್ಯ


ಉಚ್ಚಾಟಿತ ಸಿಎಂ ಯಡ್ಡಿಯ ಪಕ್ಕಾ ಏಜೆಂಟ್ ವಿ.ಎಸ್. ಆಚಾರ್ಯ ಮತ್ತೆ ಮಂತ್ರಿಯಾಗಿರುವುದು ಉಡುಪಿ ಜಿಲ್ಲೆಯ ದೊಡ್ಡ ದೌರ್ಭಾಗ್ಯವೇ ಸರಿ! ಕರಾವಳಿ ಯ ಹಿಂದೂತ್ವದ ಹರಾಮಿ ರಾಜಕಾರಣದ 'ಬೀಷ್ಮ' ತಾನೆಂದು ಬೀಗುವ ಈ 80 ವರ್ಷದ ವಯೋವೃದ್ಧನ ಪಂಚೇಂದ್ರೀಯ ಜನಪರವಾಗಿ ಅಧಿಕಾರ ಚಲಾಯಿಸ ಲಾಗದಷ್ಟು ಇಂಗಿಹೋಗಿದೆ. ಆದರೂ ಅಧಿಕಾರದ ಹಪಾಹಪಿ ಮಾತ್ರ ಕಡಿಮೆ ಆಗುತ್ತಿಲ್ಲ! ಹಾಗಂತ ಅಧಿಕಾರ ಬಲದಿಂದ ಹಿಂಬಾಗಿಲ ಫಿಕ್ಸಿಂಗ್, ಅವ್ಯವಹಾರ, ಅನಾ ಚಾರ, ಕಳ್ಳ ಕಾಸು-ಆಸ್ತಿ ಮಾಡುವ ಕುಕಲೆ ಈ ಅಜ್ಜಯ್ಯ ನಿಗೆ ಕರತಲಾಮಲಕವಾಗಿ ಹೋಗಿದೆ. ಈತನಿಗೆ ಮಂತ್ರಿ ಗಿರಿ ಕೊಡುವುದು ಬೊಕ್ಕಸಕ್ಕೊಂದು ಹೊರೆ; ಉಡುಪಿ ಜಿಲ್ಲೆ ಜನರಿಗೆ ಅನ್ಯಾಯ ಎಂಬ ಸರಳ ಸತ್ಯ ಗೊತ್ತಿದ್ದೂ ಸಿಎಂ ದೀವಿ 'ಅಡಚಣೆ'ಗೆ ಬೆಂಡಾಗಿದ್ದಾರೆ ಪಾಪ!!

ಉಡುಪಿ ಜಿಲ್ಲೆಗೆ ಮತಾಂಧ ಮಸಲತ್ತಿನ ಡಾ. ಆಚಾರ್ಯನೇ ಶಾಪ! ಈ ಹಿಂಬಾಗಿಲ ಪುಢಾರಿಯ ಮಂತ್ರಿ ಕಾರು-ಬಾರಿನಲ್ಲಿ ಜಿಲ್ಲೆಗೆ ಉಪಕಾರವಾಗಿದ್ದಕ್ಕಿಂತ ಉಪದ್ರವವಾಗಿದ್ದೇ ಹೆಚ್ಚು! ಈ ಶಿವಳ್ಳಿ ಬ್ರಾಹ್ಮಣ ಹೇಳೋದು ವೇದ; ಆದರೆ ಹಾಕೋದು ಮಾತ್ರ ಕೊಚ್ಚೆಯಲ್ಲೇ ಗಾಳ! ಒಂದು ಕಾಲದಲ್ಲಿ ಥಂಡಿ-ಜ್ವರಕ್ಕೆ ಸ್ಯಾಕ್-ಸ್ಯಾಂಪಲ್ ಗುಳಿಗೆ ಬಣ್ಣ ನೀರು ಕೊಡುತ್ತ ಚೆಡ್ಡಿ ಡಾಕ್ಟರ್ ಅನ್ನಿಸಿಕೊಂಡಿದ್ದ ಆಚಾರ್ಯನ ಬದುಕೇ ದುಸ್ತರವಾಗಿತ್ತು. ಇವತ್ತು ಆಚಾರ್ಯ ಎಮ್ಮೆಲ್ಸಿ ಸತತ ಎಮ್ಮೆಲ್ಸಿ-ಮಂತ್ರಿಗಿರಿ ಸುಖ-ಸಂಬಳ- ಅಡ್ಡ ಕಸುಬುಗಳಿಂದ ಕೋಟಿಗೆ ತೂಗುವಷ್ಟು ಭಾರವಾಗಿದ್ದಾರೆ!

ಡಾಕ್ಟರಿಕೆ ಡಲ್ಲಾದಾಗ ಕೇಸರಿ ರಾಜಕಾರಣದಲ್ಲಿ ಪುನರ್ವಸತಿ ಕಂಡುಕೊಂಡಿದ್ದ ಈ ಅನಾಹುತಕಾರಿ ವೈದಿಕವಾದಿ ಮುಂದೊಂದು ದಿನ ಕರಾವಳಿಗೇ ಕೊಳ್ಳಿ ಇಡುವ ಪಾಪಿ ಪುಢಾರಿ ಆಗಬಹು ದೆಂದು ಸಂಘಪರಿವಾರದ ಪರಾಕ್ರಮಿಗಳೂ ಊಹಿಸಿ ರಲಿಕ್ಕಿಲ್ಲ! ಅಚಾನಕ್ ಒಮ್ಮೆ ಮಾತ್ರ ಎರಡೂವರೆ ವರ್ಷ ಎಮ್ಮೆಲ್ಲೆ ಆಗಿದ್ದ ಆತ ಆನಂತರ ಮತ್ತೆ ನೇರ ಚುನಾವಣೆ ಯಲ್ಲಿ ಗೆದ್ದಿದ್ದೇ ಇಲ್ಲ. ಆದರೆ ಆ ಅತ್ಯಲ್ಪ ಅವಧಿಯಲ್ಲಿ ಆಚಾರ್ಯನ ಅಪಾಯಕಾರಿ ಹಿಂದೂತ್ವದ ತಂತ್ರಗಾರಿಕೆ ಆರೆಸ್ಸೆಸ್ ವಲಯದಲ್ಲಿ ಸುಪ್ರಸಿದ್ಧವಾಗಿಹೋಗಿತ್ತು. ಉಡುಪಿ ಮುನಸಿಪಾಲ್ಟಿಯಲ್ಲಿ ಒಮ್ಮೆ ಜನಸಂಘದ ಅಧ್ಯಕ್ಷನೂ ಆಗಿದ್ದ ಈತ ಕರಾವಳಿ ಬಿಜೆಪಿಗೆ ಫುಲ್‌ಟೈಮ್ ಕೆಲಸ ಮಾಡು ವವರಿಲ್ಲದ ಕಾಲದಲ್ಲಿ ಸದ್ದು-ಸುದ್ದಿ ಮಾಡುತ್ತಿದ್ದರು.

ಹೀಗಾಗಿ ಈ ನಾಜೂಕಯ್ಯನಿಗೆ ಸಂಘ ಪರಿವಾರ ವಿಧಾನಪರಿಷತ್ತಿನ ಲ್ಲೊಂದು ಸೀಟು ಕಾಯಂಪಡಿಸಿ ಬಿಟ್ಟಿತು. ಎಮ್ಮೆಲ್ಸಿ ಸಂಬಳ-ಸೌಲಭ್ಯ ಪಡೆದ ಈತ ಮಾಡಿದ್ದು ಪಕ್ಕಾ ಜನವಿರೋಧಿ ಕೇಸರಿ ರಾಜಕಾರಣ. ಎಮ್ಮೆಲ್ಸಿ ಕಾಲಾವಧಿಯಲ್ಲಿ ಆಚಾರ್ಯ ಜನಸಮುದಾಯದ ಹಿತಕಾಯುವ ರಾಜಕಾರಣ ಮಾಡಿದ್ದೇ ಇಲ್ಲ. ಆತ ಜನರ ಸಮಸ್ಯೆ-ಸಂಕಟಕ್ಕೆ ಸ್ಪಂದಿಸಿದ ಕುರುಹುಗಳೇ ಕಾಣಿಸದು. ಊರಿಗೆ ಬೆಂಕಿ ಹಚ್ಚುವ ಮತಾಂಧ ಕಿತಾಪತಿಯೇ ಕಸುಬಾಗಿಸಿಕೊಂಡಿದ್ದ ಆಚಾರ್ಯನಿಗೆ ಜನರೆಂದರೆ ಅಲರ್ಜಿ. ಆತ ಮಂತ್ರಿ ಯಾದ ಬಳಿಕವೂ ಸಾಲುಸಾಲಾಗಿ ಪ್ರಜಾಪೀಡನೆಯ ದಗಾಕೋರ ಅಕ್ರಮ-ಅವಾಂತರ-ಅನ್ಯಾಯ ಮಾಡು ತ್ತಲೇ ಹೋದರು....

ಹಿಂದೂತ್ವದ ಅಮಲು ಅಮಾಯ[illegible] ಕರಿಗೇರಿಸಿ ಸ್ವಾರ್ಥ ಸಾಧಿಸುವ ವಿದ್ಯೆಯ[illegible] ಈ ಆಚಾರ್ಯ ಪ್ರವೀಣ! ಯ[illegible] ಸರ್ಕಾರದಲ್ಲಿ ತುಂಬ ಶಕ್ತಿಶಾಲಿಯಾಗಿ[illegible] ಆಚಾರ್ಯ ಮನಸ್ಸು ಮಾಡಿದರೆ ಜನ[illegible] ಒಳಿತಿಗೆ ಏನು ಬೇಕಾದರೂ ಮಾಡಬಹುದಿತ್ತು. ಆದ[illegible] ಒಣಪ್ರತಿಷ್ಠೆಯ ರಾಜಕಾರಣದಲ್ಲಿ ವ್ಯೆವಾರೆತಿ[illegible] ಆಚಾರ್ಯನಿಗೆ ಜನಪರ ಬದ್ಧತೆ, ಇಚ್ಛಾಶಕ್ತಿಗಳೇ ಇರಲಿ[illegible] ಅಂಥ ರಚನಾತ್ಮಕ ರಾಜಕಾರಣದ ಯೋಜನೆ ಈ ಪುಳು[illegible]



...ಯ ಆಚಾರ್ಯನಿಗಿರಲಿಲ್ಲ. ಉಡುಪಿ ಜಿಲ್ಲೆಯಲ್ಲಿ
ಸ್ವಪಕ್ಷದಲ್ಲೇ ಯಾರೂ ಮೇಲೇಳದಂತೆ ರಕ್ಕಸ
...ಕಾರಣ ಮಾಡುತ್ತಲೇ ಬಂದಿದ್ದಾರೆ.

...ಉಡುಪಿ ಸಂಸದರಾಗಿರುವ ಸಿಎಂ ಸದಾನಂದ ಗೌಡರ
...ೇ ಕ್ಷೇತ್ರದಲ್ಲಿ ನಡೆಯದಂತೆ ಅಧಿಕಾರಿಗಳಿಗೆಲ್ಲ
... ಸೂಚನೆ ಈತ ಕೊಟ್ಟಿದ್ದರು. "ಒಬ್ಬ ಜನ ಪೀಡಕ
...ೀಸ್ ಅಧಿಕಾರಿಗೂ ಬುದ್ಧಿ ಕಲಿಸಲಾಗದಂಥ ದೈನೇಸಿ
... ನನ್ನನ್ನು ಮಂತ್ರಿ ಆಚಾರ್ಯ ಮಾಡಿದ್ದಾನೆ" ಎಂದು
... ತನ್ನ ಆಪ್ತರಲ್ಲಿ ಹೇಳಿಕೊಂಡು ಗೋಗರೆಯುತ್ತಿದ್ದರು
... ಈ ಡೀವಿ ಸೀನಿಯರ್ ಆಚಾರ್ಯನ ಅಪಚಾರ
... ಅದೆಷ್ಟು ಹತಾಶರಾಗಿ ಹೋಗಿದ್ದರೆಂದರೆ,
...ದೆಂದೂ ಉಡುಪಿಯಿಂದ ಸಂಸದನಾಗಬಾರದು, ಇಲ್ಲಿ
...ಕಾರಣ ಮಾಡಬಾರದೆಂಬ ನಿರ್ಧಾರಕ್ಕೆ ಬಂದು
...ದ್ದರು: ನೀತಿಗೆಟ್ಟ ರಾಜಕಾರಣದ ಲೀಲಾವಿನೋದ
...ದೆ ನೋಡಿ! ಇಂಥ ದಾದಾಗಿರಿಯ ಆಚಾರ್ಯ
...ತ್ತು ತನಗಿಂತ ಬರೋಬ್ಬರಿ 20 ವರ್ಷ ಚಿಕ್ಕವನಾದ
...ಯ ಮಂತ್ರಿ ಮಂಡಲದಲ್ಲಿ ಜುಜುಬಿ ಮಂತ್ರಿಯಾಗಿ
... ಹಿಂದೆ ಯಡ್ಡಿಯ ಗೂಢಚಾರನಾಗಿ ಈ ಮುದಿ
...ದಲ್ಲಿ ಓಡಾಡಬೇಕಾಗಿ ಬಂದಿದೆ!!

...ಆಚಾರ್ಯ ಮಂತ್ರಿಯಾಗಿದ್ದೇ ತಡ, ಉಡುಪಿ ಜಿಲ್ಲೆಗೆ
...ವ ತೊಂದರೆ-ತಾಪತ್ರಯ ಶುರುವಾಗಿಬಿಟ್ಟಿತು. ಈ
...ರ್ಸ್ ಮಂತ್ರಿ ಕಾಸಿಗಾಗಿ ನಡೆಸುವ ಕರಾಮತ್ತಿನಿಂದ
...ಕಂಗಾಲಾಗಿ ಹೋದರು. ದುಡ್ಡೊಂದು ಸಿಗುತ್ತ ದೆಂದರೆ
...ರ್ಯ ಎಂಥ ಪ್ರಜಾಪೀಡನೆಗೂ ಹೇಸು ತ್ತಿರಲಿಲ್ಲ.
...ಕ್ಕೊಂದು ಜ್ವಲಂತ ಉದಾಹರಣೆ ಯೆಂದರೆ, ಆಚಾರ್ಯ
... ವಿರೋಧವನ್ನೆಲ್ಲಾ ಸರ್ಕಾರಿ
...ತ್ರದ ಬಲದಿಂದ ಬಗ್ಗಿಸಿ ನಂದಿಕೂರು ಎಂಬಲ್ಲಿ
...ವಿರೋಧಿ ಉಷ್ಣವಿದ್ಯುತ್ ಸ್ಥಾವರ ಸ್ಥಾಪಿಸಿ ಕಾಸು
...ಸಿದ ಕತೆ. ಈ ಹಾರುಬೂದಿ ಸ್ಥಾವರದಿಂದ
... ನಂದಿಕೂರು ಪರಿಸರ ರೌರವ ನರಕವಾಗಿದೆ.

...ಲ-ತೋಟ-ಮನೆ-ಬಾವಿಗಳೆಲ್ಲ
...ಚಿ ಗುಂಡಿಯಂತಾಗಿದೆ;
...ೋಗ್ಯ ಹಾಳಾಗಿದೆ. ಆದರೂ
...ರ್ಜುನ ಪವರ್ ಪ್ಲಾಂಟ್‌ನ
...ವಾಳ್ಳುಗಳ ಬೆನ್ನಿಗೆ ನಿಂತು
...ತ್ರಿ ಆಚಾರ್ಯ ಸ್ಥಳೀಯರಿಗೆ
...ರ ದ್ರೋಹ-ಅನ್ಯಾಯ
...ಡುತ್ತಿದ್ದಾರೆ.


...ಪೇಜಾವರ ಸ್ವಾಮಿ ನಾಗಾರ್ಜುನ
...ಸ್ಥಲು ಸ್ಥಾವರದ ವಿರುದ್ಧ ಬೀದಿ
...ನ ಮಾತಾಡಿದರೆ ಆತನನ್ನೇ ಈ
...್ ಮಂತ್ರಿ ಮರುಕ್ಷಣವೇ
...ದಿ ಮಾಡಿ ಬಾಯಿಮುಚ್ಚಿಸು
... ಆಚಾರ್ಯ ಈ ಪ್ರಳಯಾಂತಕ
...ಜನೆಯ ಪರ ಏಕೆ ಹಠಕ್ಕೆ
...ವ ರಂತೆ ವಕಾಲತ್ತು
...ಡುತ್ತಿದ್ದಾರೆ? ಕಂಪನಿ
...ಗಳಿಗೇಕೆ ಅಷ್ಟು ಸರ್ಕಾರಿ
...ರಿಟ ಕೊಟ್ಟು ಕಾಪಾಡುತ್ತಿದ್ದಾರೆ?
...ರ ತುಂಬ ಸಿಂಪಲ್. ನಾಗಾ
...ನ ಕಂಪನಿಯ ಹಣವಂತರು
...ರ್ಯನಿಗೆ ಕೋಟಿ-ಕೋಟಿ
...ಸು ಕೊಟ್ಟಿದ್ದಾರೆ; ಆತನ ವೈದ್ಯ ಮಗನಿಗಾಗಿ
...ಜ್ಜಿತ ಆಸ್ಪತ್ರೆಯೊಂದನ್ನು ಕಟ್ಟಿಸಿ ಕೊಡುತ್ತಿದ್ದಾರೆ.
... ಇದೀ ಕರಾವಳಿಗೆ ಗೊತ್ತಿರುವ ಬಹಿರಂಗ
...ಸ್ಯ!

... ಈ ಸ್ವಯಂಘೋಷಿತ ಸುಭಾವಿತ-ದೇಶಭಕ್ತ ಹೋಮ್
...ಸ್ಟರ್ ಆಗಿದ್ದಾಗಲೂ ಪಕ್ಕಾ ಹೇತ್ಲಾಂಡಿ ಯಂತಾಡಿದ್ದಾರೆ.
... ಗೃಹ ಮಂತ್ರಿಯಾಗುತ್ತಿದ್ದಂತೆಯೇ ಹಾವೇರಿಯಲ್ಲಿ
...ರ ಮೇಲೆ ಗೋಲಿಬಾರಾಗಿತ್ತು, ಆಗ ಈ ಧರ್ಮಾತ್ಮ
...ಜಾವರರೊಂದಿಗೆ ಧಾರ್ಮಿಕ ಕಾರ್ಯಕ್ರಮದಲ್ಲಿ
...ಮರೆತಿ ದ್ದರು; ಕರಾವಳಿಯ ಕಾನೂನು- ಸುವ್ಯವಸ್ಥೆಯಂತೂ ಈ ಅಡ್ನಾಡಿ ಆಚಾರ್ಯರ ಗೃಹಮಂತ್ರಿಗಿರಿ ಯಲ್ಲಿ ನೆಲ ಕಚ್ಚಿ ಹೋಗಿತ್ತು, ಚೆಡ್ಡಿ-ಕಾವಿ ಭಜರಂಗಿಗಳ ಅಟ್ಟಹಾಸ- (ಅ)ನೈತಿಕ ಪೊಲೀಸ್‌ಗಿರಿ, ಗೋರಕ್ಷಣೆಯ ಪ್ರಹಸನ ಗಳೆಲ್ಲ ಹಿಂಸಾತ್ಮಕವಾಗಿ ನಡೆಯುತ್ತಿದ್ದವು. ಮಂಗಳೂರಿನ ಪಬ್ ಮತ್ತು ಕರಾವಳಿಯ ಚರ್ಚ್‌ಗಳ ಮೇಲೆ ಭಜರಂಗಿ ಭಂಡರು ರಾಜಾರೋಷವಾಗಿ ದಾಳಿ ಮಾಡಿದರೂ ಆಚಾರ್ಯ ಆ ಪಾತಕಿ ಗಳಿಗೆಲ್ಲ ಆಶ್ರಯ ಕೊಟ್ಟು ಕಾಪಾಡಿದ್ದರು.


ಇಂಥ ಹೋಪ್‌ಲೆಸ್ ಆಚಾರ್ಯನ ಕಪಿಮುಷ್ಠಿಗೆ ಉಡುಪಿ ಮತ್ತೆ ಸಿಲುಕಿದೆ. ಸಿಎಂ ಡೀವಿಯನ್ನೇ ದಿಕ್ಕುತಪ್ಪಿಸುವ ಧರತಿ ಆಚಾರ್ಯನ ಚಲನ-ವಲನವು ಎಂಥವರಿಗೂ ಗೋಚರಿಸುತ್ತದೆ. ಇದರರ್ಥ ಸಿಎಂ ಬದಲಾದರೂ ಹಳೆಯ ಹರಾಮಿ ವ್ಯವಸ್ಥೆ ಬದಲಾಗುವ ಸಾಧ್ಯತೆಯಿಲ್ಲ. ಒಟ್ಟಿನಲ್ಲಿ ಉಡುಪಿ ಭವಿಷ್ಯ ಭಯಾನಕ. ಈ ಕೆಲಸಕ್ಕೆ ಬಾರದ ಆಚಾರ್ಯನ ಬದಲು 'ಕೆಸರಿನ ಕಮಲ' ಎಂದೇ ಖ್ಯಾತನಾಗಿರುವ ಕುಂದಾಪುರ ಶಾಸಕ ಹಾಲಾಡಿ ಶ್ರೀನಿವಾಸ್ ಶೆಟ್ಟರ್‌ರನ್ನು ಮಂತ್ರಿ ಮಾಡಿದ್ದರೆ ಡೀವಿಗೆ ಜನಮನ್ನಣೆ ಯಾದರೂ ಸಿಗುತ್ತಿತ್ತು, ಮೂರು ಬಾರಿ ಗೆದ್ದ ಜನಾನುರಾಗಿ ಹಾಲಾಡಿಗೂ ನ್ಯಾಯ ಒದಗಿಸಿದಂತಾಗುತ್ತಿತ್ತು.

'ಕರ್ಮ'ಗೇಡಿ ಕಾಗೇರಿ

ಶಿಕ್ಷಣವನ್ನು ಕೇಸರೀಕರಣ ಮಾಡುವ ಕಂತ್ರಿ ಕನಸುಗಾರಿಕೆಯ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತದೇ ಖಾತೆಗೆ ತಗುಲಿಕೊಂಡಿದ್ದಾರೆ. ಮನು ಮತ್ತು ಮನಿ ಸಿದ್ಧಾಂತದಿಂದ ಇಡೀ ರಾಜ್ಯದ ಪ್ರಾಥಮಿಕ-ಪ್ರೌಢ ಶಿಕ್ಷಣವನ್ನು ಅಧ್ವಾನ ಗೊಳಿಸಿರುವ ಕಾಗೇರಿ ಮಾಣಿ ಉತ್ತರ ಕನ್ನಡವನ್ನು ಒಡೆದು ಹಾಕಿದ್ದಾರೆ! ಅಂಕೋಲೆಯಿಂದ ಮೂರು, ಶಿರಸಿಯಿಂದ ಒಂದು ಬಾರಿ ಗೆದ್ದಿರುವ ಹುಟ್ಟಾ ಚೆಡ್ಡಿ ಕಾಗೇರಿ ಸಂಘ ಪರಿವಾರದ ಅಧಿಕಾರ ರಾಜಕಾರಣದ ಪಟುಗಳಲ್ಲಿ ಸೀನಿಯರ್. ಈ ಹಿಂದೂತ್ವದ ಹಿರಿತನ ಕಾಗೇರಿಗೆ ಅಧಿಕಾರ-ಆಸ್ತಿ-ಪುರೋಹಿತಶಾಹಿ ದಾಹ ತೀರಿಸಿಕೊಳ್ಳಲು ನೆರವಾಯ್ತೇ ಹೊರತು ಆತನಿಗೆ ಜನ್ಮ ನೀಡಿ ಎತ್ತರೆತ್ತರಕ್ಕೆ ಏರಿಸಿದ ಉತ್ತರ ಕನ್ನಡಕ್ಕೇನೂ ಪ್ರಯೋಜನವಾಗಲಿಲ್ಲ!



ಯೋಗೀಶ್ ಭಟ್ಟ




ಹಾಲಾಡಿ ಶ್ರೀನಿವಾಸ್ ಶೆಟ್ಟಿ


ಕಾಗೇರಿ ಪಕ್ಕಾ ಆಶಾಢಭೂತಿ. ಹೇಳೋದೇ ಒಂದು; ಮಾಡೋದು ಇನ್ನೊಂದು. ಕನ್ನಡ ಪ್ರೇಮಿಯಂತೆ ಪೋಸು ಕೊಡುವ ಕಾಗೇರಿ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ತೆರೆಯಲು ಕಚ್ಚೆ ಕಟ್ಟಿಕೊಂಡು ಸೆಡ್ಡು ಹೊಡೆಯುತ್ತಿದ್ದಾರೆ. ತನ್ನ ಮೂರೂ ಹೆಣ್ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಗೇ ಹಾಕಿದ್ದೇನೆಂದು ಬೀಗುವ ಈ ಮಾಣಿಯ ಭಾಷಾನೀತಿ ನಿಗೂಢವಾಗಿದೆ. 'ಮನುಕರ್ಮ' ಸಿದ್ಧಾಂತದ ಕಾಗೇರಿಗೆ ಹೆಣ್ಣು ಸಂತಾನವಾದ್ದರಿಂದ ಕನ್ನಡ ಮಾಧ್ಯಮಕ್ಕೆ ಸೇರಿಸಿದ್ದಾರೆ; ಗಂಡಾಗಿದ್ದರೆ ಖಂಡಿತ ಕ್ರಿಶ್ಚಿಯನ್ನರ ಇಂಗ್ಲಿಷ್ ಮೀಡಿಯಮ್ ಸ್ಕೂಲಿಗೆ ಸೇರಿಸ್ತಿದ್ರು ಎಂದು ಆತನ ಲಹರಿ ಬಲ್ಲವರು ಹೇಳುತ್ತಾರೆ.

ಶಿಕ್ಷಣ ಮಂತ್ರಿಯಾಗಿ ಕಾಗೇರಿ ಸಾಧಿಸಿದ್ದಕ್ಕಿಂತ ಶೋ ಮಾಡಿದ್ದೇ ಜಾಸ್ತಿ. ಜೆಓಸಿ ಕೋರ್ಸ್‌ಗಳನ್ನು ಮುಚ್ಚಿ ಐಟಿಐ-ಪಾಲಿಟೆಕ್ನಿಕ್ ಕಾಲೇಜುಗಳ ಸ್ಥಾಪನೆಗೆ 'ವೈಜ್ಞಾನಿಕ ಒಲವು' ತೋರಿಸಿದ ಕಾಗೇರಿ ಈ ಕಾಲೇಜುಗಳ ಪರ್ಮಿಷನ್ ಬಿಸಿನೆಸ್ ಮೇಲೆ ಕಣ್ಣಿಟ್ಟಿದ್ದಾರೆಂಬುದು ಬಹಿರಂಗ ರಹಸ್ಯ. ತನ್ನೂರಿನ ಸ್ವರ್ಣವಲ್ಲಿ ಮಠಾಧೀಶರ ಪೊಲಿಟಿಕಲ್ ಆಶೀರ್ವಾದಕ್ಕಾಗಿ ರಾಜ್ಯದ ಶಾಲೆಗಳಲ್ಲೆಲ್ಲ ಭಗವದ್ಗೀತಾ ಅಭಿಯಾನ ನಡೆಸಿ ಸಿಕ್ಕಿಬಿದ್ದಾಗ ಇಡೀ ದೇಶವೇ ತನ್ನಪ್ಪನ ಆಸ್ತಿ ಎಂಬಂತೆ ಮಾತಾಡಿ ಕಾಗೇರಿ ನಗೆಪಾಟಲಿಗೀಡಾಗಿದ್ದು ಆತನ ಅಸಲಿ ಅರ್ಹತೆ ಸಾಬೀತುಪಡಿಸಿಬಿಟ್ಟಿದೆ. ಅತ್ತ ಉತ್ತರ ಕನ್ನಡದ ಅಖಂಡತೆ ಒಡೆದು ಸ್ವಜಾತಿ ಹೈಗರ ಸಾಮ್ರಾಜ್ಯವನ್ನು ಶಿರಸಿಯಲ್ಲಿ ಕಟ್ಟುವ ಕಿತಾಪತಿ ಮಾಡಿದ ಕಾಗೇರಿ ತವರೂರಲ್ಲೇ ಒಂದು ಶೈಕ್ಷಣಿಕ ಜಿಲ್ಲೆ ತಯಾರು ಮಾಡಿಕೊಂಡಿದ್ದಾರೆ. ಆದರೆ ಇಲ್ಲೂ ಆತ ಎಡವಿದ್ದೇ ಹೆಚ್ಚು!

ಶಿರಸಿ ಶೈಕ್ಷಣಿಕ ಜಿಲ್ಲೆಯಲ್ಲಿ ಹಲವೆಡೆಯ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳೇ ಇಲ್ಲ, ಗಡಿ ತಾಲ್ಲೂಕಾದ ಜೋಯಿಡಾದಲ್ಲಿ ಬರೋಬ್ಬರಿ 164 ಶಿಕ್ಷಕರ ಕೊರತೆ ಇದೆ. ಇಲ್ಲಿ ಶೈಕ್ಷಣಿಕ ಪರಿಸರ ಸರಿಯಾಗಿಲ್ಲದೆ ಕನ್ನಡ ನಾಪತ್ತೆ ಯಾಗುತ್ತಿದೆ. ಗೋವಾದ ಪ್ರಭಾವ ಜೋಯಿಡಾ ಗಡಿಯಲ್ಲಿರುವ ಹಳ್ಳಿಗಳಲ್ಲಿದೆ. ಶಿಕ್ಷಣ-ಉದ್ಯೋಗ-ಭಾಷೆ-ಬದುಕು ಪ್ರತಿಯೊಂದಕ್ಕೂ ಗೋವಾದ ಮೇಲೆ ಜನ ಅವಲಂಬಿಸುವ-ಆಕರ್ಷಣೆಗೊಳಗಾಗುವ ದುರಂತ ಕಾಗೇರಿಯಂಥ ಉತ್ತರ ಕನ್ನಡದ ದರಿದ್ರ ಪುಢಾರಿಗಳು ಜೋಯಿಡಾದಲ್ಲಿ ಸೃಷ್ಟಿಸಿದ್ದಾರೆ. ಗೋವಾ ಗಡಿಯ ಆರೆಂಟು ಹಳ್ಳಿಗಳ ಕನ್ನಡ ಶಾಲೆ ಮಾಸ್ತರಿಲ್ಲದೆ ಸದಾ ಮುಚ್ಚಿಯೇ ಇರುತ್ತದೆ.



ಆನಂದ್ ಅಸ್ನೋಟಿಕರ್



ಎಸ್. ಅಂಗಾರ


ಜೋಯಿಡಾದಲ್ಲಿರುವುದು ಒಟ್ಟು 164 ಕನ್ನಡ ಶಾಲೆ. ಇದರಲ್ಲಿ 98 ಶಿಕ್ಷಕರ ಹುದ್ದೆ ಖಾಲಿಯಿದೆ; 30 ಮಾಸ್ತರಣಿಯರು ಹೆರಿಗೆ ರಜೆಯಲ್ಲಿದ್ದಾರೆ; 36 ಶಿಕ್ಷಕ/ಶಿಕ್ಷಕಿಯರು ಬೇರೆಡೆ ಟ್ರಾನ್ಸ್‌ಫರ್ ಆಗಿದ್ದಾರೆ. ಹೀಗಾಗಿ ಬಹಳಷ್ಟು ಶಾಲೆಗಳು ಬೀಗ ಜಡಿದುಕೊಂಡಿವೆ. ಇದು ಗ್ರೇಟ್ ಶಿಕ್ಷಣ ಮಂತ್ರಿ ಕಾಗೇರಿ ಸಾಹೇಬರ ಸಾಮರ್ಥ್ಯಕ್ಕೊಂದು ಸಾಲಿಡ್ ಎಕ್ಸಾಂಪಲ್! ಗಡಿನಾಡನ್ನೇ ತವರು ಜಿಲ್ಲೆಯ ತಾಲ್ಲೂಕಿನ ಶಿಕ್ಷಣವನ್ನೇ ಇಷ್ಟು ಕಡೆಗಣಿಸಿರುವ ಕಾಗೇರಿ ಮತ್ತಿನ್ನೆಲ್ಲಿ ಶೈಕ್ಷಣಿಕ ಉದ್ಧಾರ ಮಾಡಿಯಾನು? ಜೋಯಿಡಾದಂಥ ಹಲವು ಗುಡ್ಡಗಾಡು ಏರಿಯಾದ ಶಾಲೆಗಳಲ್ಲಿ ಬಿಸಿಯೂಟ ವ್ಯವಸ್ಥೆ ಸರಿಯಿಲ್ಲ, ಸಿಲೆಂಡರ್-ಕಟ್ಟಿಗೆ ಸಿಗದು; ಬೇಯಿಸಿದ ಅನ್ನ ತಿನ್ನಲು ಬಾರದು. ಇದೆಲ್ಲ ಹೇಳಿದರೂ ಭಗವದ್ಗೀತೆ, ಅಧಿಕಾರಿಗಳ ವರ್ಗಾವರ್ಗಿ, ಮಂತ್ರಿ- ಜಾತಿ ರಾಜಕೀಯದಲ್ಲಿ ಬಿಡಿಯಾಗಿ ರುವ ಕಾಗೇರಿಗೆ ಅರ್ಥವೂ ಆಗುತ್ತಿಲ್ಲ!

ಇನ್ನು ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿ ಕಾಗೇರಿ ಉತ್ತರ ಕನ್ನಡದಲ್ಲಿ ಈ ಮೂರು ವರ್ಷದಿಂದ ಮಾಡಿದ ಮಹಾಕಾರ್ಯಗಳದೇ ಪ್ರತ್ಯೇಕ ಪುರಾಣದಷ್ಟಿದೆ! ತನ್ನ ಹವ್ಯಕ ಬಳಗಕ್ಕೆ ಅನುಕೂಲ ಮಾಡಿಕೊಡುವ ಏಕೈಕ ಹಿಡನ್ ಅಜೆಂಡಾ ಇಟ್ಟುಕೊಂಡು ಉತ್ತರ ಕನ್ನಡ ಘಟ್ಟದ ಮೇಲಿನ- ಘಟ್ಟದ ಕೆಳಗಿನ (ಕರಾವಳಿ) ಎಂದು ವಿಭಾಗಿಸುವ ಹಿಕಮತ್ತು ಆತ ಮಂತ್ರಿಯಾದ ಮರುಕ್ಷಣವೇ ಶುರು ಹಚ್ಚಿಕೊಂಡಿದ್ದಾರೆ. ಅಭಿವೃದ್ಧಿ ದೃಷ್ಟಿಯಿಂದ ಜಿಲ್ಲೆ ಎರಡಾಗಿಸುವುದು ಒಳ್ಳೆಯದು. ಆದರೆ ಕಾಗೇರಿ ಕಾರ್ಯಾಚರಣೆಯಲ್ಲಿ ಪುರೋಗಾಮಿ ಕಿತಾಪತಿ ಅಡಗಿದೆಯೇ ಹೊರತು ಪ್ರಗತಿಗಾಮಿ ಚಿಂತನೆಯಿಲ್ಲ, ಜಿಲ್ಲಾ ಕೇಂದ್ರ ಕಾರವಾರದಲ್ಲಿರುವ ಜಿಲ್ಲಾಮಟ್ಟದ ಹಲವು ಕಚೇರಿಗಳನ್ನು ತನ್ನ ಶಿರಸಿಗೆ ಕದ್ದೊಯ್ದಿರುವ ಕಂತ್ರಿ ಕಾಗೇರಿಗೆ ಅಧಿಕೃತವಾಗಿ ಜಿಲ್ಲೆ ಒಡೆಯುವ ತಾಕತ್ತು-ದೂರದೃಷ್ಟಿ- ಜಾಣ್ಮೆ ಇಲ್ಲ!!

ಜಿಲ್ಲೆಯ ಒಂದೇ ಒಂದು ಸಮಸ್ಯೆ ಕಾಗೇರಿಯಿಂದ ಪರಿಹರಿಸಲಾಗಿಲ್ಲ, ಜಲ್ಲಿ ಕಲ್ಲಿನ ಕ್ವಾರಿ, ಉಸುಕು ಸಾಗಾಣಿಕೆ, ಅರಣ್ಯ ಅತಿಕ್ರಮಣ, ಸೀಬರ್ಡ್ ನೌಕಾ ನೆಲೆ ನಿರಾಶ್ರಿತರಿಗೆ ಪರಿಹಾರ, ರೈತ, ತೋಟಿಗ, ಬೆಸ್ತರ ಸಮಸ್ಯೆಗಳೆಲ್ಲ ಕಾಗೇರಿಗೆ ಕಾಣಿಸುತ್ತಿಲ್ಲ, ಅಧಿಕಾರಿಗಳ ಮೇಲೆ ಹಿಡಿತವಾಗಲಿ, ತನ್ನ ಸರ್ಕಾರದಲ್ಲಿ ಪ್ರಭಾವವಾಗಲಿ ಇಲ್ಲದ ಕಾಗೇರಿಯ ಒಣ ರುಬಾಬಿಂದ ಜಲ್ಲಿಕಲ್ಲು- ಉಸುಕು ಸಿಗದೆ ಜಿಲ್ಲೆಯ ಅಭಿವೃದ್ಧಿ ಕುಂಠಿತವಾಗಿದೆ. ಹಾಗಂತ ಪ್ರಾಮಾಣಿಕತೆ-ಕೌಟುಂಬಿಕ ಶ್ರೀಮಂತಿಕೆಯ ಪೋಸು ಕೊಡುತ್ತಲೇ ಅಡ್ಡಕಸುಬು ನಡೆಸಿರುವ ಕಾಗೇರಿಯ ಕಳ್ಳ ಕುಬೇರಿಕೆಯ ಪ್ರಗತಿ ಮಾತ್ರ ನಾಗಾಲೋಟದಿಂದ ನಡೆಯುತ್ತಿದೆ!

ಸ್ವಜಾತಿ ಹೈಗರನ್ನು ಸುತ್ತಲೂ ಇಟ್ಟುಕೊಂಡಿರುವ ಕಾಗೇರಿ ಕರಾರುವಕ್ಕಾದ ಜಾತಿ ರಾಜಕಾರಣ ಮಾಡುತ್ತಿದ್ದಾರೆ. ಸ್ವಜನಪಕ್ಷಪಾತ-ಭ್ರಷ್ಟಾಚಾರವಂತೂ ಮಿತಿ ಮೀರಿದೆ ಕಾಗೇರಿ ದರ್ಬಾರಿನಲ್ಲಿ, ಆತನ ಸೋದರನಾದ ವಕೀಲನೇ ಲೇವಾದೇವಿ ಏಜೆಂಟ್. ಅಧಿಕಾರಿಗಳ ವರ್ಗಾವರ್ಗಿ-ಬೇನಾಮಿ ಆಸ್ತಿ ಖರೀದಿ- ವಸೂಲಿ ಮಾಡುವುದೇ ಈ ಮರಿ ಕಾಗೇರಿ. ತನ್ನ ಸೋದರಳಿಯ ಸುಹಾಸ್ ಹೆಗಡೆ ಎಂಬಾತನಿಗೆ ಪ್ರವಾಸೋದ್ಯಮದ ಹೆಸರಲ್ಲಿ ಲಕ್ಷ-ಲಕ್ಷ ಈತ ಸ್ಯಾಂಕ್ಷನ್ ಮಾಡಿಸಿದ್ದಾರೆ. ಇದೆಲ್ಲ ಶುದ್ಧ ಸ್ವಾಹಾ!! ಶಿರಸಿ ಸಿದ್ಧಾಪುರದ ಗಟಾರ-ಕಕ್ಕಸು ಉದ್ಘಾಟನೆಗೂ ತನ್ನನ್ನೇ ಕರೀಬೇಕೆಂಬ ಕಾಗೇರಿ ಇಂಥ ಸಣ್ಣ ಬುದ್ಧಿಯಿಂದ ಸ್ವ-ಪಕ್ಷದಲ್ಲೂ ತಾತ್ಸಾರಕ್ಕೆ ತುತ್ತಾಗಿದ್ದಾನೆ. ಹಿರಿಯ ಬಿಜೆಪಿ ಮುಖಂಡ ಡಾ. ಕರ್ಕಿ, ಸಂಸದ ಅನಂತ್ಮಾಣಿ, ಮಾಜಿ ಮಂತ್ರಿ ಶಿವಾನಂದ ನಾಯ್ಕರನ್ನೆಲ್ಲಾ ಕಾಲು ಮುರಿದು ಮೂಲೆಯಲ್ಲಿ ಕೂರಿಸಿರುವ ಕಾಗೇರಿ ರಾಜ್ಯಮಟ್ಟದ ಬಿಜೆಪಿಯಲ್ಲಿ ಅನಂತಕುಮಾರ್ ಕಡೆಯವರು. ಆದರೂ ಈತ ಮೊನ್ನೆ ಯಡ್ಡಿ ಗ್ಯಾಂಗಿನ ಸದಾನಂದ ಗೌಡರಿಗೆ ಕ್ರಾಸ್‌ಓಟ್ ಮಾಡಿರುವ ಗುಮಾನಿ ಎದ್ದಿದೆ. ಇದಕ್ಕೆ ಕಾಗೇರಿಯ ಸಂಶಯಾಸ್ಪದ ವ್ಯಕ್ತಿತ್ವ-ಇತಿಹಾಸ-ಭೂಗೋಳವೇ ಕಾರಣ.

ಮಂತ್ರಿಗಿರಿ ಪ್ರತಿಸ್ಪರ್ಧಿ ಆನಂದ್ ಅಸ್ನೋಟಿಕರ್ ಶೆಟ್ಟರ್-ಅನಂತ್ ಬಣದಲ್ಲಿದ್ದುದು ಕಾಗೇರಿಯ ನಿಷ್ಠಾಂತರಕ್ಕೆ ಕಾರಣವಂತೆ. ಆದರೂ ಈಗ ಅನಂತ್ ಪಡೆಯ ಕೋಟಾದಲ್ಲೇ ಮಂತ್ರಿಯಾಗಿರುವ ಕಾಗೇರಿ ಆನಂದ್ ಅಸ್ನೋಟಿಕರ್‌ಗೆ ಸಚಿವಗಿರಿ ಸಿಗದಂತೆ ಶತಪ್ರಯತ್ನ ನಡೆಸಿದ್ದಾರೆ. ಒಟ್ಟಿನಲ್ಲಿ ತರತರದ ಚೆಡ್ಡಿ ತಂತ್ರಗಾರಿಕೆ ಬಿಟ್ಟರೆ ಜನಪರ ನೀತಿ-ರೀತಿಯೇ ಇಲ್ಲದ ಕಾಗೇರಿ ಸಾರ್ವಜನಿಕ ಬದುಕಿಗೊಂದು ದೊಡ್ಡ ಲಯಬಿಲಿಟಿಯಷ್ಟೇ! ❖





ರಾಜೀವ್‌ರೊಂದಿಗೆ ಸಂತಸದ ಕ್ಷಣ...

ಈ ಲೇಖನದೊಂದಿಗೆ ಕೆಲ ಫೋಟೋಗಳನ್ನು ಪ್ರಕಟಿಸಲಾಗಿದೆ. ರಾಜೀವ್-ಸೋನಿಯಾರ ಫೋಟೋಗಳಿವು. 1992 ರಲ್ಲಿ ಸೋನಿಯಾ 'Rajiv' ಎಂಬ ಪುಸ್ತಕ ಬರೆದು ಪ್ರಕಟಿಸಿದ್ದರು. ಇನ್ನೂರಾ ಹತ್ತು ಪುಟಗಳ ಆ ಪುಸ್ತಕವನ್ನು ಓದುವುದೇ ಒಂದು ಚೇತೋಹಾರಿ ಅನುಭವ. ಸೋನಿಯಾ ಅದರಲ್ಲಿ ತಾನು ಕೆಂಬ್ರಿಡ್ಜ್‌ನಲ್ಲಿ 1965 ರಲ್ಲಿ ರಾಜೀವ್‌ರನ್ನು ಮೊದಲು ಭೇಟಿಯಾದ ಘಟನೆಯಿಂದ ಹಿಡಿದು ಪ್ರೀತಿಸಿದ್ದು, ಇಂದಿರಾ ಗಾಂಧಿ ಭೇಟಿ, ಮದುವೆ, ಭಾರತ ವಾಸ, ಮಕ್ಕಳು, ಸುತ್ತಾಟಗಳು ಕೊನೆಗೆ ರಾಜೀವ್ ಹತ್ಯೆಯವರೆಗಿನ ವಿಚಾರಗಳನ್ನೆಲ್ಲಾ ದಾಖಲಿಸಿದ್ದಾರೆ. ನೂರಾರು ಫೋಟೋಗಳಿರುವ ಈ ಪುಸ್ತಕದಲ್ಲಿನ ಸೋನಿಯಾರ ನಿರೂಪಣೆ ಮನ ಮಿಡಿಯುವಂತಿದೆ. ಆಕೆಯ ಸರಳ ನೇರ ವ್ಯಕ್ತಿತ್ವ ಬಿಂಬಿಸುವಂತಿವೆ.

ಸೋನಿಯಾಗೆ ಕ್ಯಾನ್ಸರ್ ದೇಶಭಕ್ತರದ್ದು ಯಾವ ಕಾಯಿಲೆ?

ಸೋನಿಯಾ ಗಾಂಧಿ ವಿದೇಶೀ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರಂತೆ....

ಈ ರೀತಿಯದ್ದೊಂದು ಸುದ್ದಿ ಹೊರಬೀಳುತ್ತಲೇ 'ಪಾಪ, ಏನಾಯ್ತೊ ಏನೋ' ಅಂತ ಮರುಕಪಟ್ಟಿದ್ದು ಅಪ್ಪಟ ಭಾರತೀಯ ಮನಸ್ಸು. ಇದು ಪಕ್ಷ, ತಕರಾರು, ಹಿತಾಸಕ್ತಿಗಳನ್ನೆಲ್ಲ ಮೀರಿದ ಅಪ್ಪಟ ಮಾನವೀಯತೆ. ಇದರ ಬೆನ್ನಲ್ಲೇ ಅತ್ಯಂತ ಅಸಹ್ಯ ಬೆಳವಣಿಗೆಗಳಿಗೆ ಚಾಲನೆ ಸಿಕ್ಕಿದೆ. ಸೋನಿಯಾರನ್ನು ರಾಜಕೀಯವಾಗಿ ಮುಗಿಸಲು ಶತಪ್ರಯತ್ನ ಪಟ್ಟು ಸೋತ ಸಂಘ ಪರಿವಾರದ ಮಂದಿ ಆಕೆಗೆ ಬಾಧಿಸಿರುವ ಕಾಯಿಲೆಯನ್ನೇ ಅಸ್ತ್ರವಾಗಿಸಿಕೊಂಡಿದ್ದಾರೆ. ಈ ದುಷ್ಟರ ಕಡೆಯಿಂದಲೇ ಸೋನಿಯಾಗಿರುವ ಕಾಯಿಲೆಯ ಬಗ್ಗೆ ಕೀಳುಮಟ್ಟದ ಊಹಾಪೋಹಗಳು ಎಗ್ಗಿಲ್ಲದೆ ಹರಿದಾಡುತ್ತಿವೆ.

ಅಧಿಕೃತವಾಗಿ ಹೊರಬಿದ್ದಿಲ್ಲವಾದರೂ ಸೋನಿಯಾರನ್ನು ಬಾಧಿಸುತ್ತಿರುವ ಕಾಯಿಲೆ ಕಾನ್ಸರ್ ಎಂಬುದು ಈಗಾಗಲೇ ಬಹಿರಂಗಗೊಂಡಿದೆ. ಅಮೆರಿಕದ ಮ್ಯಾನ್‌ಹಟನ್‌ನಲ್ಲಿರುವ ಸ್ಲೋವನ್ ಕೆಟರಿಂಗ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಸೋನಿಯಾಗೆ ಶಸ್ತ್ರ ಚಿಕಿತ್ಸೆಯೂ ಮುಗಿದಿದೆ. ಆಂಧ್ರ ಪ್ರದೇಶ ಮೂಲದ ಡಾ. ದತ್ತಾ ಪ್ರೇಮುಡು ನೂರಿ ಮುಂದೆ ನಿಂತು ಸೋನಿಯಾರ ಚಿಕಿತ್ಸೆ ನಡೆಸಿದ್ದಾರೆ. ಇದೀಗ ಆಕೆ ತಾತ್ಕಾಲಿಕವಾಗಿ ಸಾವಿನಿಂದ ಪಾರಾಗಿದ್ದಾರಾದರೂ ಆ ರಾಕ್ಷಸ ಕಾಯಿಲೆಯ ಯಾತನೆಗಳು ಮಾಸಿರಲಿಕ್ಕಿಲ್ಲ. ಅಷ್ಟಕ್ಕೂ ಈ ಕ್ಯಾನ್ಸರ್‌ನ ಶಸ್ತ್ರ ಚಿಕಿತ್ಸೆಯೆಂದರೆ ಸಾವಿನ ಮನೆ ಹೊಕ್ಕು ಹೊರ ಬಂದಂತೆಯೇ. ಇಂಥಾ ಸ್ಥಿತಿಯಲ್ಲಿ ಆಕೆ ದೂರದ ದೇಶದಲ್ಲಿ ನರಳುತ್ತಿದ್ದರೆ ಭಾರತದ ಅಪ್ರತಿಮ ದೇಶಭಕ್ತರು ಪಕ್ಕಾ ಹೊಲಸು ಕೆಲಸಕ್ಕಿಳಿದಿದ್ದಾರೆ.

ನಿಜ, ಕಾಂಗ್ರೆಸ್ ನೇತೃತ್ವದ ಯುಪಿಎ ಮೈತ್ರಿಕೂಟ ಭ್ರಷ್ಟಾಚಾರದಲ್ಲಿ ಮಿಂದೇಳುತ್ತಿದೆ. ಸೋನಿಯಾ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷೆಯಾಗಿರುವುದರಿಂದ ಆಕೆಯೂ ಅದರಲ್ಲಿ ಬಾಧ್ಯಸ್ಥರು. ಈ ಬಗ್ಗೆ ಸಮಚಿತ್ತದ ಜನರಲ್ಲೆಲ್ಲಾ ಪ್ರಶ್ನೆಗಳಿವೆ, ಆಕ್ರೋಶಗಳಿವೆ. ಇಂಥಾ ಭ್ರಷ್ಟಾಚಾರದಿಂದ ನುಣುಚಿಕೊಳ್ಳುವುದಕ್ಕೆ ಕಾಯಿಲೆ ಸೇರಿದಂತೆ ಯಾವುದೂ ಸಬೂಬಾಗುವುದಿಲ್ಲ, ಆಗ ಬಾರದು ಕೂಡಾ. ಈಗಾಗಿರುವ ಹಗರಣ ಗಳಲ್ಲಿ ಯುಪಿಎ ಮೈತ್ರಿಕೂಟದ ಸದಸ್ಯರೇ ಜೈಲು ಸೇರಿದ್ದಾರೆ. ಇನ್ನೂ ಕೆಲಮಂದಿ ಆ ಹಾದಿಯಲ್ಲಿದ್ದಾರೆ. ಸೋನಿಯಾಗಾಂಧಿಯೇ ಅದರಲ್ಲಿ ಪಾಲುದಾರರಾಗಿದ್ದರೆ ಆಕೆಗೂ ಶಿಕ್ಷೆಯಾಗಲೇ ಬೇಕು.

ಆದರೆ ಅಂಥ ಹಗರಣಗಳಿಗೂ ಸೋನಿಯಾರ ಕಾಯಿಲೆಗೂ ತಳುಕು ಹಾಕುವುದು ರೋಗಗ್ರಸ್ತ ದೇಶಭಕ್ತರಿಗಷ್ಟೇ ಶೋಭಿಸುವ ವಿಚಾರ. ಇವರೆಲ್ಲ ಫೇಸ್‌ಬುಕ್, ಟ್ವಿಟರ್ ಗಳಂಥ ಸಾಮಾಜಿಕ ತಾಣಗಳಲ್ಲಿ ಸೋನಿಯಾ ವಿರುದ್ಧದ ವಿಕಾರಗಳನ್ನೆಲ್ಲ ಅಸಹ್ಯವಾಗಿ ಕಾರಿಕೊಳ್ಳುತ್ತಿದ್ದಾರೆ. ಆಕೆಗೆ ಕಾಯಿಲೆ ಇರುವುದೇ ಹೌದಾದರೆ ಭಾರತದಲ್ಲೇನು ಆಸ್ಪತ್ರೆಗಳಿಗೆ ಬರವಿದೆಯೇ ಅಂತ ಯಾವನೋ ಅಬ್ಬೇಪಾರಿ ಪ್ರಶ್ನಿಸಿದರೆ, ಇನ್ನೊಬ್ಬ ಸೋನಿಯಾ ಆರೋಗ್ಯಕ್ಕೇನೂ ಆಗಿಲ್ಲ, ಆಕೆ ಸ್ವಿಸ್ ಬ್ಯಾಂಕ್‌ನಲ್ಲಿರುವ ಕಪ್ಪು ಹಣ ಮೇಂಟೇನ್ ಮಾಡಲು ಹೋಗಿದ್ದಾರೆ ಅಂತ ಅರಚಿಕೊಳ್ಳುತ್ತಾನೆ. ಸೋನಿಯಾಗೆ ಗರ್ಭಕೋಶದ ಕ್ಯಾನ್ಸರಿದೆ ಎಂಬುದನ್ನೇ ಚರ್ಚೆಗೊಡ್ಡಿರುವ ತಲೆಮಾಸಿದ ದೇಶಭಕ್ತನೊಬ್ಬ ಅದರೊಂದಿಗೆ ಲೈಂಗಿಕ ವಿಚಾರಗಳನ್ನು ತಳುಕು ಹಾಕಿ ವಿಕೃತ ಖುಷಿ ಅನುಭವಿಸಿದ್ದಾನೆ. ಹುಡುಕುತ್ತಾ ಹೋದರೆ ಸೋನಿಯಾರ ಕಾಯಿಲೆಯ ಸುತ್ತಾ ಇಂಥ ದಂಡಿದಂಡಿ ದರಿದ್ರ ಕಮೆಂಟುಗಳು, ಊಹಾಪೋಹಾಗಳು ಕಣ್ಣಿಗೆ ರಾಚುತ್ತವೆ.



ಮಗ ರಾಹುಲ್‌ನೊಂದಿಗೆ....

ಇದು ಖಂಡಿತವಾಗಿ ಭಾರತೀಯ ಜನತಾಪಾರ್ಟಿ ಅಲಿಯಾಸ್ ಬಿಜೆಪಿಯ ದೇಶಭಕ್ತರ ಕೃತ್ಯ. ಬಿಜೆಪಿ ಅದೆಷ್ಟೊ ದಶಕಗಳಿಂದ ಕೋಮುವಿಕಾರದ ಹೊರತಾಗಿ ಜನಪರವಾದುದೊಂದು ವಿಚಾರವೇ ಸಿಕ್ಕದೆ ಬರಗೆಟ್ಟವರ ಪಕ್ಷ ಎಂಬುದನ್ನು ಪ್ರತ್ಯೇಕವಾಗಿ ವಿವರಿಸುವ ಅವಶ್ಯಕತೆಯಿಲ್ಲ. ಈ ಹಿಂದಿನ ಚುನಾವಣೆಗಳ ಸಂದರ್ಭಗಳನ್ನೊಮ್ಮೆ ಮೆಲುಕು ಹಾಕಿದರೆ ಬಿಜೆಪಿಯ ರಾಷ್ಟ್ರೀಯ ಮುಖಂಡರ ಕಾಯಿಲೆಗಳು ಅನಾವರಣಗೊಳ್ಳುತ್ತವೆ. ಪಕ್ಷದ ಮುಖಂಡರೆಲ್ಲ ಆಗ ಸೋನಿಯಾರ ವಿದೇಶೀ ಮೂಲವನ್ನೇ ಪ್ರಮುಖ ಅಸ್ತ್ರವಾಗಿ ಪ್ರಯೋಗಿಸಿದ್ದರು. ದಿಲ್ಲಿಯಿಂದ ಹಳ್ಳಿಯವರೆಗೆ ಬಿಜೆಪಿಗರ ಪಾಲಿಗೆ ಇದೇ ಬೀಜಮಂತ್ರವಾಗಿ ಹೋಗಿತ್ತು. ಆದರೆ ಈ ನೆಲದ ಪ್ರಜ್ಞಾವಂತ ಜನ ಬಿಜೆಪಿ ಭಂಡರ ಬಡಬಡಿಕೆಗೆ ವಿರುದ್ಧವಾಗಿ ತೀರ್ಪು ನೀಡಿದ್ದರು. ಅದರರ್ಥ, ಜನಸಾಮಾನ್ಯರಿಗೂ ಬಿಜೆಪಿಗಳ ಭಂಡತನ ಅರ್ಥವಾಗಿ ಹೋಗಿತ್ತು.

ರಾಷ್ಟ್ರೀಯ ಪಕ್ಷವೆಂದು ಬಡಾಯಿ ಕೊಚ್ಚಿಕೊಳ್ಳುವ ಇದೇ ಭಾರತೀಯ ಜನತಾ ಪಾರ್ಟಿ ಸೋನಿಯಾ ವಿರುದ್ಧ ಷಡ್ಯಂತ್ರ ನಡೆಸುತ್ತಿರುವುದಿದೆಯಲ್ಲಾ? ಅದು ಆಕೆಯ ಶಕ್ತಿಗೊಂದು ಉದಾಹರಣೆ. ಕಾಂಗ್ರೆಸ್‌ನಲ್ಲಿ ನೆಹರೂ ಕುಟುಂಬದ ಪ್ರಾಬಲ್ಯ, ಕುಟುಂಬ ರಾಜಕಾರಣ ವನ್ನೆಲ್ಲ ಬದಿಗಿಟ್ಟು, ಸೋನಿಯಾರ ಸಂಘಟನಾ ವೈಖರಿಯನ್ನೊಮ್ಮೆ ದಿಟ್ಟಿಸಿದರೆ ಎಲ್ಲವೂ ಅನಾಯಾಸ ವಾಗಿ ಅರ್ಥವಾಗುತ್ತದೆ. ಆಕೆ ಜನತಾ ಪಾರ್ಟಿಯ ಅಬ್ಬರದೆದುರು ಕುಸಿದು ಬೀಳಲಿದ್ದ ಕಾಂಗ್ರೆಸ್ ಅನ್ನು ಸೆಡ್ಡು ಹೊಡೆಯುವಂತೆ ಬೆಳೆಸಿದ್ದು, ನಾಯಕರ ನಡುವಿನ ಮನುಷ್ಯ ಸಹಜ ಅಸಹನೆ, ಹೊಟ್ಟೆಕಿಚ್ಚುಗಳು ಮೇರೆ ಮೀರದಂತೆ ಎಚ್ಚರ ವಹಿಸಿದ್ದು- ಇದೆಲ್ಲ ಎಲ್ಲಾ ಪಕ್ಷ ಗಳಿಗೂ ಮಾದರಿ.



ಬಿಜೆಪಿಯೂ ಸೇರಿದಂತೆ ಸೋನಿಯಾರ ರಾಜಕೀಯ ವಿರೋಧಿಗಳು ಆಕೆಯ ಬದುಕನ್ನು ವಾಸ್ತವಕ್ಕೆ ವಿರುದ್ಧವಾಗಿ ಭಾರತದೆದುರು ಬಿಂಬಿಸಲು ಹರಸಾಹಸ ಪಟ್ಟಿವೆ. ದೂರದ ದೇಶ ಇಟಲಿಯಲ್ಲಿ ಇಂದಿರಾ ಗಾಂಧಿಯ ಮಗ ರಾಜೀವ್‌ಗೆ ಪರಿಚಯವಾದಳೆಂದರೆ,

• ಸಂತೋಷ್ ಬಾಗಿಲಗದ್ದೆ •

ಆಕೆಯದ್ದು ಹೈಫೈ ಹಿನ್ನೆಲೆಯ ಕುಟುಂಬವೇ ಇರಬೇಕು ಅಂತ ಅನೇಕರು ಅಂದು ಕೊಂಡಿದ್ದರೆ ಆಶ್ಚರ್ಯವಿಲ್ಲ. ಆದರಾಕೆ ಭಾರತದ ಸಾಮಾನ್ಯ ಮಧ್ಯಮ ವರ್ಗದ ತಲ್ಲಣಗಳನ್ನೇ ಕಂಡುಂಡು ಬೆಳೆದವರು. ವ್ಯಾಸಂಗಕ್ಕಾಗಿ ಹದಿನೆಂಟನೇ ವಯಸ್ಸಿಗೆ ಮನೆಬಿಟ್ಟು ಇಟಲಿ ಪಟ್ಟಣ ಸೇರಿದ ಸೋನಿಯಾಗೆ ಆಸರೆಯಾದದ್ದು ಪೇಯಿಂಗ್ ಗೆಸ್ಟ್ ರೂಮು. ಕೈಗೆ ಸಿಗುತ್ತಿದ್ದದ್ದು ಅಂದಂದಿನ ಅವಶ್ಯಕತೆಗಳಿಗೆ ಲೆಕ್ಕಮಾಡಿ ಕೊಟ್ಟಂತಹ ಚಿಲ್ಲರೆ ಕಾಸು. ಸೋನಿಯಾ ತಂದೆ ಸ್ಟೆಫಾನೋ ಮಾಜಿ ಸೈನಿಕನಾಗಿದ್ದು ಕುಟುಂಬ ನಿರ್ವಹಣೆಗೆ ಏದುಸಿರು ಬಿಡುತ್ತಿದ್ದ ಕಷ್ಟಜೀವಿ. ಒಟ್ಟಾರೆಯಾಗಿ ಹೇಳಬೇಕೆಂದರೆ ಸೋನಿಯಾರದ್ದು ಆರಂಭದಿಂದಲೂ ಥೇಟು ಭಾರತದ ಬಡ ಹಳ್ಳಿ ಹುಡುಗಿಯರಂಥದ್ದೇ ಬದುಕು.




ಪ್ರವಾಸದ ಸಂದರ್ಭದಲ್ಲಿ.....


ಇಂಥ ಸೋನಿಯಾ ಇಂದಿರಾ ಗಾಂಧಿಯ ಮಗ ರಾಜೀವ್‌ಗೆ ಪರಿಚಯವಾದದ್ದು, ಭಾರತವನ್ನು ನಕ್ಷೆಯಲ್ಲಷ್ಟೇ ನೋಡಿದ್ದ ಆಕೆ ಇಪ್ಪತ್ತೊಂದು ವರ್ಷದ ನಂತರದ ಪೂರ್ತಿ ಆಯುಷ್ಯವನ್ನು ಅಲ್ಲೇ ಕಳೆಯಲು ನಿರ್ಧರಿಸಿದ್ದೆಲ್ಲ ಅಪ್ಪಟ ಪ್ರೇಮಗಾಥೆ. 1968ರಲ್ಲಿ ರಾಜೀವ್ ಸಂಗಾತಿಯಾದ ಸೋನಿಯಾ ಸೂಕ್ಷ್ಮ ಜೀವಿ. ಪುಸ್ತಕದ ಹುಳು. ತನ್ನ ಗಂಡ ಸಕ್ರಿಯವಾಗಿದ್ದ ರಾಜಕೀಯದಲ್ಲಿ ಮೂಗು ತೂರಿಸದಿದ್ದರೂ ಅದೆಲ್ಲವನ್ನು ಹತ್ತಿರದಿಂದ ಗ್ರಹಿಸಬಲ್ಲ ಬುದ್ಧಿಮತ್ತೆ ಸೋನಿಯಾಗಿತ್ತು. ಆ ಬಳಿಕ ಸೋನಿಯಾ ಹಠಾತ್ತನೆ ಹಲವಾರು ಏಳುಬೀಳುಗಳನ್ನು ಕಂಡು ಅರಗಿಸಿಕೊಳ್ಳಲೇ ಬೇಕಾದ ಸ್ಥಿತಿ ನಿರ್ಮಾಣ ವಾಯಿತು. 1984ರಲ್ಲಿ ಪ್ರಧಾನಿಯಾಗಿದ್ದ ಅತ್ತೆ ಇಂದಿರಾ ಗಾಂಧಿಯ ಹತ್ಯೆ ನಡೆಯಿತು. ತದನಂತರ ಪ್ರಧಾನಿಯಾದ ಗಂಡ ರಾಜೀವ್ ಗಾಂಧಿ ಕೂಡಾ ಹತರಾದರು. ಇಂಥ ಯಾತನೆಗಳನ್ನೇ ಆತ್ಮಬಲದ ಇಂಧನವಾಗಿ ಬದಲಾಯಿಸಿಕೊಂಡ ಸೋನಿಯಾ ತದನಂತರ ತಾನೇ ಕಾಂಗ್ರೆಸ್ ಪಕ್ಷದ ಚುಕ್ಕಾಣಿ ಹಿಡಿದಿದ್ದೀಗ ಇತಿಹಾಸ.

ಆ ನಂತರದ ಬೆಳವಣಿಗೆಗಳೇ ಸೋನಿಯಾರನ್ನು ಅಳೆಯಬಹುದಾದ ಮಾನದಂಡ. ಈಕೆ ಕಾಂಗ್ರೆಸ್ ಚುಕ್ಕಾಣಿ ಹಿಡಿದಾಗ ವಿರೋಧ ಪಕ್ಷಗಳ ಜೊತೆ ಖುದ್ದು ಕಾಂಗ್ರೆಸ್ಸಿಗರೇ ವಿರೋಧ ವ್ಯಕ್ತಪಡಿಸಿದರು. ಆದರೆ ಸೋನಿಯಾ ಇಂಥವುಗಳ ವಿರುದ್ಧ ಕೀಳುಮಟ್ಟಕ್ಕಿಳಿದು ಸೆಡ್ಡುಹೊಡೆದ ಉದಾಹರಣೆಗಳಿಲ್ಲ. ಗಮನೀಯ ಅಂಶವೆಂದರೆ, ಅದಾಗಲೇ ಕಾಂಗ್ರೆಸ್ ತುರ್ತು ಪರಿಸ್ಥಿತಿ ಮತ್ತಿತರ ಜನದ್ರೋಹಿ ನಿಲುವುಗಳಿಂದ ಸವಕಲಾಗುತ್ತ ಬಂದಿತ್ತು. ಅದಕ್ಕೆ ಸರಿಯಾಗಿ ಇಂದಿರಾ, ರಾಜೀವ್‌ರಂಥ ಆಧಾರಸ್ತಂಭಗಳೇ ಉದುರಿಹೋಗಿದ್ದರಿಂದ ಕಾಂಗ್ರೆಸ್‌ನ ಮರಣ ನಿಶ್ಚಿತವೆಂಬ ಮಾತುಗಳೇ ದೇಶಾದ್ಯಂತ ವ್ಯಾಪಕವಾಗಿತ್ತು.

ಇಂಥ ಸಂದರ್ಭವನ್ನು ಪರಿಣಾಮಕಾರಿಯಾಗಿ ಪಳಗಿಸಿಕೊಳ್ಳಲೆತ್ನಿಸಿದ್ದು ಭಾರತೀಯ ಜನತಾಪಾರ್ಟಿ

▸▸▸13 ಪುಟ





ಕಟ್ಟಾ+ಪುಟ್ಟಾ ಕಾಯಂ ಫಿಟ್ಟಾ?

ಸಾಲು ಕುಡಿದವರೇ ಬದುಕೊಲ್ಲ ಇನ್ನು ವಿಷ ...ಯೋರು ಬದುಕುವುದುಂಟಾ?

...ಕ್ಕಿರಿದ ಕೋರ್ಟ್ ಹಾಲ್‌ನಲ್ಲಿ ವಕೀಲರೊಬ್ಬರು ...ವಿದ್ದೇ ತಡ, ಕಟ್ಟಾ ಮತ್ತವನ ಮಗನ ವಿರುದ್ಧ ...ಂದು ಗೇಲಿ, ಚಟಾಕಿ, ಶಾಪ ಕೇಳಿಬಂತು. 24ನೇ ...ವಿಲ್ ಮತ್ತು ಸೆಷನ್ಸ್ ಕೋರ್ಟಿನ ಕಟಕಟೆಯಲ್ಲಿ ... ಮಗ ಕಟ್ಟಾ, ಇಟಾಸ್ಕಾ ಕಂಪನಿಯ ಸೋಕಾಲ್ಡ್ ...ಜಿಂಗ್ ಡೈರೆಕ್ಟರ್ ಶ್ರೀನಿವಾಸ್, ಯುನೈಟೆಡ್ ...ಂ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಸಿ. ಬಸವ ...ಯ್ಯ, ಕೆಐಎಡಿಬಿಯ ಮಾಜಿ ಭೂಸ್ವಾಧೀನಾಧಿಕಾರಿ ...ನಾರಾಯಣಪ್ಪ, ಬಂಡಿಕೊಡಿಗೆಹಳ್ಳಿ ಪಂಚಾಯ್ತಿ ...ರ್ ಮತ್ತು ಲ್ಯಾಂಡ್ ಬ್ರೋಕರ್ ಬಿ.ಕೆ.ಮಂಜು ... ಸಂಪಂಗಿರಾಮನಗರದ ವಾರ್ಡಿನ ಬಿಬಿಎಂಪಿ ಸದಸ್ಯ ... ಕೈಕಟ್ಟಿ ನಿಂತಿದ್ದರು.

...ಲೋಕಾಯುಕ್ತ ವಿಶೇಷ ನ್ಯಾಯಾಧೀಶ ಎನ್.ಕೆ. ...ಂದ್ರ ರಾವ್ ಅವರ ಮುಖ ಅದೆಷ್ಟು ಗಂಭೀರವಾಗಿ ... ರಾಜ್ಯದ ಇತಿಹಾಸದಲ್ಲೇ ವಿಶಿಷ್ಟ ಪ್ರಸಂಗವೊಂದಕ್ಕೆ ... ಕಾರಣರಾಗಬಹುದೆಂಬ ನಿರೀಕ್ಷೆಯಾದರೂ ...ಗಿತ್ತು?

...ಗಸ್ಟ್ 8ರ ಮಧ್ಯಾಹ್ನ ನಾಲ್ಕೂಕಾಲಿರಬೇಕು. ಕಿಕ್ಕಿರಿದಿದ್ದ ...ರು, ಕಟ್ಟಾ ಬೆಂಬಲಿಗರು, ಪೊಲೀಸರು, ಪತ್ರಕರ್ತರು ... ಸಾರ್ವಜನಿಕರ ಅಷ್ಟೂ ಕಣ್ಣು ಒಮ್ಮೆ ಮಕ್ಮಲ್ ...ಧಾರಿ ಕಟ್ಟಾನನ್ನೂ ಮತ್ತೊಮ್ಮೆ ನ್ಯಾಯಾಧೀಶ ...ಂದ್ರ ರಾವ್‌ರನ್ನೂ ಎವೆಯಿಕ್ಕದೆ ನಿಟ್ಟಿಸುತ್ತಿದ್ದವು. ...d has been rejected ಎಂಬ ಶಬ್ದ ಬಂದಿದ್ದೇ ...ಇಡೀ ಸಭಾಂಗಣವೇ ತಲ್ಲಣಿಸಿಬಿಟ್ಟಿತು.

...ಆರ್‌ಪಿಸಿ ಸೆಕ್ಷನ್ 438ರ ಪ್ರಕಾರ ಜಾಮೀನು ...ವುದು ಸಾಧ್ಯವೇ ಇಲ್ಲ ಎಂಬ ಶಬ್ದ ನ್ಯಾಯಾಧೀಶರ ...ಂದ ಹೊರಬಿದ್ದಿದ್ದೇ ತಡ, ಕಟ್ಟಾ ತಲೆ ಸುತ್ತು ...ಂತೆ ನಿತ್ರಾಣಗೊಂಡೆ. ಪಕ್ಕ ನಿಂತಿದ್ದ ಮಗ ಅಪ್ಪನ ... ತಟ್ಟಿ ಒತ್ತಿ ಹಿಡಿದು ಸಮಾಧಾನಪಡಿಸುತ್ತಿದ್ದ.

...ಮೊದಲೇ ನಿರೀಕ್ಷಿಸಿದ್ದರೋ ಏನೋ ಈಗಾಗಲೇ ...ನು ತಿರಸ್ಕರಿಸಿದ್ದಕ್ಕೆ ತಡೆ ನೀಡಬೇಕೆಂದು ತಕ್ಷಣವೇ ...ಂದು ಅರ್ಜಿ ಕಟ್ಟಾ ಪರ ವಕೀಲರು ಸಲ್ಲಿಸಿದರು. ... ಸುಧೀಂದ್ರರಾವ್ ಅಷ್ಟೇ ನಿರ್ದಾಕ್ಷಿಣ್ಯವಾಗಿ ಅದನ್ನೂ ...ಸಿಬಿಟ್ಟರು. 'ಅಲ್ರೀ, ಇದೇ ಕೋರ್ಟ್ ಕೊಟ್ಟ ...ಕ್ಕೆ ಇದೇ ಕೋರ್ಟ್ ಸ್ಟೇ ಕೊಡೋಕೆ ಆಗುತ್ತೇನ್ರೀ?' ... ಜಸ್ಟೀಸ್ ತಿರುಗೇಟು ಹಾಕಿದರು.

...ಲ್ಲಿಗೆ ತಾನು ಜೈಲು ಪಾಲಾಗುವುದು ಶತಸ್ಸಿದ್ಧ ...ಂದು ಕಟ್ಟಾಗೆ ಗ್ಯಾರಂಟಿಯಾಗಿತ್ತು. ಒಂದೆಡೆ ...ವರಿದಿದ್ದ ಭಟ್ಟಂಗಿಗಳು ಹತಾಶೆಯಿಂದ ತಲೆ ...ಕೊಳ್ಳುತ್ತಿದ್ದರೆ ಮತ್ತೊಂದೆಡೆ ಅಪ್ಪ-ಮಗ ಬೆಂಚಿನ ... ಕೂತು ಗಳಗಳನೆ ಅಳತೊಡಗಿದರು.

...ನಗೆ ವಿಪರೀತ ಎದೆನೋವಿದೆ, ಆಸ್ಪತ್ರೆಗೆ ಹೋಗ್ಬೇಕು ... ಶ್ರೀನಿವಾಸ್ ವಕೀಲರಿಗೆ ಸನ್ನೆ ಮಾಡಿ ಹೇಳುತ್ತಿದ್ದರೆ ...ಜ್ ಸುಧೀಂದ್ರ ರಾವ್ ಅಷ್ಟೇ ಕಟುವಾಗಿ 'ಜೈಲಲ್ಲೂ ...ಆಸ್ಪತ್ರೆ ಇದೆ, ಅಲ್ಲೇ ಟ್ರೀಟ್‌ಮೆಂಟ್ ತಗೋಬಹುದು' ...ಬಿಟ್ಟರು. ಅಂಥಾ ಮಳೆಯನ್ನೂ ಲೆಕ್ಕಿಸದೇ ಅಳುತ್ತಿದ್ದ ...ಮಗನನ್ನು ಪೊಲೀಸರು ಸುತ್ತುವರಿದು ಕೋರ್ಟಿನ ...ಕ್ಕೆ ಕರೆತಂದರು.

...ಅಪ್ಪ-ಮಕ್ಕಳ ದುರುಳತನಕ್ಕೆ ಸಾಕ್ಷಿಯಂತಿದ್ದದ್ದು ಅವರ ...ಗಿ ಪಡೆ. ಬಾಗಲೂರಿನ ಬೀಕೆ ಮಂಜು, ಕೌನ್ಸಿಲರ್ ...ಪಿ ಮತ್ತು ಮಗ ಕಟ್ಟಾನ ಛೇಲಾಗಳಂತಿದ್ದ ರೌಡಿ ... ಟೀವಿಯ ಕ್ಯಾಮರಾಮೆನ್‌ಗಳನ್ನು ಸುತ್ತುವರಿದು ...ಸುತ್ತಿತ್ತು. ಛೇಲಾ ಓರ್ವ ಟೀವಿಯವರನ್ನು ಅತ್ಯಂತ ...ವಾಗಿ ಬಯ್ಯುತ್ತಿದ್ದ. ಕಟ್ಟಾ ಜೈಲಿಗೆ ಹೋಗುವ ... ಟೀವಿಗಳಲ್ಲಿ ಪ್ರಸಾರವಾಗದ ಹಾಗೆ ಏನೆಲ್ಲ ಕಿತಾಪತಿ ...ಬೇಕೋ ಎಲ್ಲವನ್ನೂ ಛೇಲಾಗಳು ಮಾಡುತ್ತಿದ್ದರೂ ... ಕ್ಯಾಮರಾಮೆನ್‌ಗಳ ಚಾಲಾಕಿತನದ ಮುಂದೆ ಎಲ್ಲವೂ ವ್ಯರ್ಥಗೊಂಡಿತ್ತು. ಅಪ್ಪ-ಮಗ ಮತ್ತು ಇಟಾಸ್ಕಾ ಸೀನನನ್ನು ಹೊತ್ತ ಪೊಲೀಸ್ ಜೀಪು ಪರಪ್ಪನ ಅಗ್ರಹಾರದ ಹಾದಿ ಹಿಡಿದು ಸಾಗುತ್ತಿದ್ದರೆ ನೆರೆದ ಜನ ಬಾಯಿಗೊಂದರಂತೆ ಬೈಗುಳ ಹಾಕುತ್ತಿದ್ದರು.

ಲೋಕಾಯುಕ್ತ ಜಡ್ಜ್ ಸುಧೀಂದ್ರ ರಾವ್ ಕೋರ್ಟಿನಲ್ಲಿ ನೆರೆದಿದ್ದ ವಕೀಲರು, ಜನಸಾಮಾನ್ಯರ ಮಟ್ಟಿಗಷ್ಟೇ ಅಲ್ಲ, ಇಡೀ ಕರ್ನಾಟಕದ ಪ್ರಜ್ಞಾವಂತರ ಕಣ್ಮಣಿಯಾಗಿದ್ದರು. ಕೋರ್ಟ್ ಆವರಣದ ತುಂಬ ಅವರದ್ದೇ ಗುಣಗಾನ. ಆಗಸ್ಟ್ 22ರವರೆಗೆ ಅಂದರೆ 14 ದಿನಗಳ ಕಾಲ ಕಟ್ಟಾ ಪರಪ್ಪನ ಅಗ್ರಹಾರ ಜೈಲನ್ನು ಅನುಭವಿಸಲೇಬೇಕು.

ಇತ್ತ ಪರಪ್ಪನ ಅಗ್ರಹಾರ ಜೈಲಿನ ದೃಶ್ಯಾವಳಿಗಳಂತೂ ಇನ್ನೂ ವಿಶೇಷವಾಗಿತ್ತು. ಸಂಜೆ ಆರೂಕಾಲ್... ಹೊತ್ತಿಗೆ ಮಗ ಮತ್ತು ಇಟಾಸ್ಕಾ ಸೀನನ ಜೊತೆ ಜೈಲು ...ಸಿದ ಕಟ್ಟಾನನ್ನು ನೇರವಾಗಿ ಜೈಲು ಸೂಪರಿಂಟೆಂಡೆಂಟ್ ಲಕ್ಷ್ಮಿನಾರಾಯಣ ಮತ್ತು ಡೆಪ್ಯೂಟಿ ಸೂಪರಿಂಟೆಂಡೆಂಟ್ ಪಿ.ಎಸ್.ರಮೇಶರೇ ಬಂದು ಸ್ವಾಗತಿಸಿದ್ದಾರೆ! ಅಲ್ಲಿಂದ ಸೀದಾ ಜೈಲಾಸ್ಪತ್ರೆಗೆ ಕರೆದೊಯ್ದಿದ್ದಾರೆ. ಅಲ್ಲಿ ತೀವ್ರ ನಿಗಾ ಘಟಕದ ಡಾಕ್ಟರ್‌ಗಳಾದ ವಿಜಯ್‌ಕುಮಾರ್ ಮತ್ತು ಕುಮಾರ್ ಎಲ್ಲಾ ಚೆಕಪ್ ಮುಗಿಸಿದ್ದಾರೆ. ನಂತರ ಮೂವರನ್ನೂ ಹೈಸೆಕ್ಯೂರಿಟಿ ಬ್ಲಾಕ್‌ಗೆ ಕರೆತರಲಾಗಿದೆ.

ಜೈಲಿನ ಅದೃಷ್ಟವೋ ತಮ್ಮ ಸೌಭಾಗ್ಯವೋ ಎಂಬಂತೆ ಜೈಲು ಸೂಪರಿಂಟೆಂಡೆಂಟ್ ಲಕ್ಷ್ಮಿನಾರಾಯಣ ನಡುರಾತ್ರಿ ತನಕ ಕಟ್ಟಾ ಮನೆಯಿಂದ ತಂದಿದ್ದ ಊಟ ಬಡಿಸುವುದರಲ್ಲೇ ಬಿಜಿಯಾಗಿಬಿಟ್ಟ. ಜೈಲಿನ ಹೊರಗೆ ಕಟ್ಟಾ ಪರಪ್ಪನ ಅಗ್ರಹಾರ ಜೈಲಿನ ಹೈ ಸೆಕ್ಯೂರಿಟಿ ಬ್ಲಾಕ್‌ನ ಮೊದಲ ಕೈದಿಯಾಗಿದ್ದ. ಸದ್ಯ ಇಡೀ ಜೈಲಿನ ಮಟ್ಟಿಗೆ ಆತನೇ ಕೈದಿ ನಂ 1!

ಸೂಪರಿಂಟೆಂಡೆಂಟ್ ಲಕ್ಷ್ಮಿನಾರಾಯಣ ಟೀವಿ ವರದಿಗಾರರಿಗೆ ಏನೇ ತ್ಯಾಪೆ ಹಾಕಲೆತ್ನಿಸಿದರೂ ಕಟ್ಟಾನ ಟೈಮು ಕೆಟ್ಟುಹೋಗಿತ್ತು. ಆವತ್ತು ಸಂಜೆ ಜೈಲೊಳಗೆ ನಡಿಬಾರದ್ದು ನಡೆದುಹೋಗಿತ್ತು. ಅದು ಜೈಲಿನ ಇತರೇ ಕೈದಿಗಳು ಕಟ್ಟಾ ಸೆಲ್ಲಿನ ಮೇಲೆ ನಡೆಸಿದ ದಾಳಿ.

ಆಗಸ್ಟ್ 15 ರ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಸನ್ನಡತೆ ಆಧಾರದ ಮೇಲೆ ತಮ್ಮನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಲು ಸರಿಸುಮಾರು ನೂರು ಮಂದಿ ಕೈದಿಗಳು ಜೈಲು ಸೂಪರಿಂಟೆಂಟ್ ಲಕ್ಷ್ಮಿನಾರಾಯಣರ ಛೇಂಬರಿಗೆ ಬಂದಿದ್ದಾರೆ. ಅದು ಸಂಜೆ ಏಳರ ಹೊತ್ತು. ಆದರೆ ಲಕ್ಷ್ಮಿನಾರಾಯಣ ತನ್ನ ಛೇಂಬರಿನಲ್ಲಿ ಇರಲೇ ಇಲ್ಲ. ಎಲ್ಲಿ ಸೂಪರಿಂಟೆಂಡೆಂಟ್ ಎಂದು ಹುಡುಕಲ್ಲು ಹೊರಟ ಕೈದಿಗಳಿಗಳಿಗೆ ಆತ ಹೈಸೆಕ್ಯೂರಿಟಿ ಬ್ಲಾಕ್‌ನಲ್ಲಿ ಕಟ್ಟಾ ಜೊತೆ ಹರಟೆ ಹೊಡೆಯುತ್ತಿರುವುದು ಗೊತ್ತಾಗಿದೆ.

ತಕ್ಷಣವೇ ಕೈದಿಗಳ ಇಡೀ ಹಿಂಡು ಹೈಸೆಕ್ಯೂರಿಟಿ ಬ್ಲಾಕ್‌ಗೆ ನುಗ್ಗಿದೆ. ಅಲ್ಲಿ ನೋಡಿದರೆ ಕಟ್ಟಾನ ಮನರಂಜನೆಗೆಂದು ಜೈಲು ಸೂಪರಿಂಡೆಂಟ್ 24 ಇಂಚಿನ ಕಲರ್ ಟೀವಿ ಹಾಕಿಸಿಕೊಟ್ಟಿದ್ದ. ಜೊತೆಗೊಂದು ಫ್ರಿಜ್ಜು, ಎರಡು ಐಷಾರಾಮಿ ಮಂಚಗಳು, ಅದ್ದೂರಿ ಹಾಸಿಗೆ, ಬಿರಿಯಾನಿ ಎಲ್ಲವೂ ಅಲ್ಲಿತ್ತು. ನೋಡಿದ್ದೇ ಕೈದಿಗಳಿಗೆ ತಲೆಕೆಟ್ಟಿದೆ. ಅಲ್ರೀ ನಮ್ಮನ್ನ ನಾಯಿ ನರಿಗಿಂತ ಕೀಳಾಗಿ ಕಾಣ್ತೀರ. ಮಿನಿಸ್ಟ್ರು ಬಂದವ್ನೆ ಅಂತ ಟೀವಿ, ಫ್ರಿಜ್ಜು ಎಲ್ಲಾ ಹಾಕಿದ್ದೀರಲ್ಲ; ಇದು ಯಾವ ರೂಲ್ಸು? ನಮಗೊಂದು ಕಾನೂನು ಮಂತ್ರಿಗೊಂದು ಕಾನೂನಾ? ಎಂದು ಸಜಾ ಕೈದಿಯೊಬ್ಬ ಕೆಣಕಿಬಿಟ್ಟ.

ಅಷ್ಟಕ್ಕೇ ಕೆಂಡಾಮಂಡಲನಾದ ಸೂಪರಿಂಟೆಂಡೆಂಟ್ ಸೂ.... ಮಕಾಟ್ಲೊ ಹೋಗ್ರೋ ಇಲ್ಲಿಂದ. ಯಾಕ್ರೋ ಬಂದ್ರಿ ಇಲ್ಲಿಗೆ? ಎಂದು ದಬ್ಬಲು ಯತ್ನಿಸಿದ್ದಾನೆ. ಕೈದಿಗಳಿಗೆ ಏನೇನು ಸಿಟ್ಟಿತ್ತೋ. ಕಟ್ಟಾ ಕೋಣೆಗೆ ನುಗ್ಗಿದ್ದೇ ಟೀವಿಯನ್ನು ಚಿಂದಿಯೆಬ್ಬಿಸಿದ್ದಾರೆ. ಫ್ರಿಜ್ಜನ್ನು ಒದ್ದು ಮುರಿದುಹಾಕಿದ್ದಾರೆ. ಎರಡು ಮಂಚಗಳ ಪೈಕಿ ಒಂದು ಕೈದಿಗಳ ಆಕ್ರೋಶಕ್ಕೆ ಪುಡಿಯಾಗಿದೆ. ಒಂದೆಡೆ ಕೈದಿಗಳು ನುಗ್ಗಿ ಟೀವಿ, ಫ್ರಿಜ್ಜನ್ನು ಚಿಂದಿಯೆಬ್ಬಿಸುತ್ತಿದ್ದರೆ ಮತ್ತೊಂದೆಡೆ ಕಟ್ಟಾ ನೋಡಿ ಸಾರ್ ಎಂಥಾ ಗತಿ ಬಂತು ನನಗೆ? ಎಂದು ತಲೆ ತಲೆ ಚಚ್ಚಿಕೊಂಡು ಅಳುತ್ತಿದ್ದ!

ದಾಳಿಯಿಟ್ಟ ಕೈದಿಗಳನ್ನೆಲ್ಲ ಹೊರಹಾಕಿದ ನಂತರವೇ ಪುಡಿಯಾಗಿದ್ದ ಟೀವಿ, ಫ್ರಿಜ್ಜುಗಳನ್ನು ಸೂಪರಿಂಟೆಂಡೆಂಟ್ ಲಕ್ಷ್ಮಿನಾರಾಯಣನೇ ನಿಂತು ಲಾರಿಗೆ ತುಂಬಿಸಿ ಸಾಗಿಸಿದ್ದಾನೆ. ಮಾಡಿದ ಪಾಪ ಈಗ ಕಟ್ಟಾನನ್ನು ನುಂಗುತ್ತಿದೆ.

ಕಟ್ಟಾ ಮಾಡಿದ ಅನಾಹುತಗಳಿವೆಯಲ್ಲ ಬಹುಶಃ ಗಣಿ ರೆಡ್ಡಿಗಳ ನಂತರ ರಾಜ್ಯಕ್ಕೆ ದೊಡ್ಡ ಮಟ್ಟದ ದ್ರೋಹ ಬಗೆದ ಬಿಜೆಪಿಯ ಮತ್ತೊಬ್ಬ ಖದೀಮನೆಂದರೆ ಅದು ಕಟ್ಟಾ. ಏನೂ ಇಲ್ಲದೆ ಗಾರೆ ಮೇಸ್ತ್ರಿಯಾಗಿದ್ದವನು ಇಟ್ಟಮಡು ಸಮೀಪದ ಕಾಡನ್ನೇ ಕಬಳಿಸಿದ. ಅಲ್ಲೇ ಅಕ್ರಮ ಲೇಔಟ್ ಮಾಡಿ ಮಾರಿದ. ಕತ್ರಿಗುಪ್ಪೆಯ ಪಾಲಿಕೆ ಆಸ್ತಿಯನ್ನೇ ನುಂಗಿ ಐಷಾರಾಮಿ ಅಪಾರ್ಟ್‌ಮೆಂಟ್ ನಿರ್ಮಿಸಿ ಮಾರಿಕೊಂಡ. ಬಂದ ದುಡ್ಡಲ್ಲಿ ಬಿಜೆಪಿ ನಾಯಕನಾದ. ಸಂಪಂಗಿರಾಮನಗರ, ಶಿವಾಜಿನಗರದುದ್ದಕ್ಕೂ ಖೊಟ್ಟಿ ಮತದಾರರನ್ನು ಹುಟ್ಟಿಹಾಕಿದ. ಗೆದ್ದು ಎಮ್ಮೆಲ್ಲೆಯೂ ಆದ.

ಎಮ್ಮೆಲ್ಲೆಗಿರಿಯೆಂಬುದು ಕಟ್ಟಾ ಪಾಲಿಗೆ ಭೂಕಬಳಿಕೆಯ ಅಸ್ತ್ರವಾಯಿತು. ಹೊಸೂರು ರಸ್ತೆಯ ಎಲೆಕ್ಟ್ರಾನಿಕ್ ಸಿಟಿ ಪಕ್ಕ ಚಿಕ್ಕನಾಗಮಂಗಲದ ಕೆರೆಯನ್ನೇ ಕಬಳಿಸಿದ. ಪಕ್ಕದ ದೊಡ್ಡ ನಾಗಮಂಗಲದ ಮೀಸಲು ಅರಣ್ಯವನ್ನೂ ನುಂಗಿ ಲೇಔಟ್ ಮಾಡಿ ಮಾರಿಹಾಕಿದ. ಅದೇ ದುಡ್ಡನ್ನು ಸುರಿದು ಮತ್ತೆ ಎಲೆಕ್ಷನ್ ಗೆದ್ದ. ಯಡ್ಡಿ-ಕುಮ್ಮಿ ಜಂಟಿ ಸರ್ಕಾರ ಬಂದಿದ್ದೇ ಕಟ್ಟಾ ತನ್ನ ಗುರು ವೆಂಕಯ್ಯ ನಾಯ್ಡುಗೆ ಹೇಳಿಸಿ ಕೇಳಿ ಪಡೆದದ್ದು ಭಾರೀ ಕೈಗಾರಿಕಾ ಖಾತೆಯನ್ನು!

ಏಕೆಂದರೆ ಕೆಐಎಡಿಬಿ ಎಂಬ ರೈತ ದ್ರೋಹಿ ಏಜೆನ್ಸಿಯಿರುವುದೇ ರಿಯಲ್ ಎಸ್ಟೇಟ್ ದಂಧೆಗೆಂಬುದು ಆತನ ನಂಬಿಕೆಯಾಗಿತ್ತು. ಹಾಗೇ ಕೈಗಾರಿಕಾ ಮಂತ್ರಿಯಾದವನು ಕೋಟಿಕೋಟಿ ದೋಚಲು ಹುಟ್ಟಿ ಹಾಕಿದ್ದೇ ಇಟಾಸ್ಕಾ ಎಂಬ ನಕಲಿ ಐಟಿ ಕಂಪೆನಿಯನ್ನು. ಅದಕ್ಕೆ ಜೊತೆಯಾದವರೇ ಬಂಡಿಕೊಡಿಗೆಹಳ್ಳಿಯ ರೌಡಿ ಬಿ.ಕೆ. ಮಂಜು, ಬ್ರೋಕರ್ ಗೋಪಿ, ವೆಂಕಯ್ಯ ನಾಯ್ಡುನ ಬೇನಾಮಿಗಳಾದ ಬಸವ ಪೂರ್ಣಯ್ಯ, ಇಂದೂ ಬಿಲ್ಡರ್ಸ್‌ನ ಜಗ್ಗಯ್ಯ ಮತ್ತು ವೆಂಕಯ್ಯ ಮುಂತಾದವರು.

ಇಟಾಸ್ಕಾ ಎಂಬುದೇ ಎಂಥ ನಕಲಿ ಕಂಪೆನಿಯೆಂದೂ ಅದಕ್ಕೆ ಬಂಡಿಕೊಡಿಗೆ ಹಳ್ಳಿಯ ದಲಿತ ರೈತರನ್ನು ಹೇಗೆ ಬಲಿಹಾಕಲಾಗುತ್ತಿದೆಯೆಂದೂ ಮೊದಲು ತನಿಖಾ ವರದಿ ಪ್ರಕಟಿಸಿದ್ದೇ ಪತ್ರಿಕೆ. ನೆಟ್ಟಗೊಂದು ಆಫೀಸು, ಫೋನು, ಕಂಪ್ಯೂಟರು, ಅಡ್ರೆಸ್ಸು, ಯಾವುದೂ ಇಲ್ಲದ ಬೋಗಸ್ ಇಟಾಸ್ಕಾ ಹೆಸರಲ್ಲಿ 325 ಎಕರೆದೋಚಲಾಯ್ತು. ಭೂಮಿ ಕೊಡಲೊಪ್ಪದ ರೈತರ ಮೇಲೆ ಕಟ್ಟಾ ಜಗ್ಗನ ರೌಡಿಗಳು ದಾಳಿಯಿಟ್ಟರು. ರೈತ ನಾಯಕ ಡಿ.ಎಸ್. ಗೌಡರ ಮನೆಗೇ ನುಗ್ಗಿ ಜಗ್ಗನ ಬಂಟರು ಹಾವಳಿಯಿಟ್ಟರು. ರೈತರ ಹೆಸರಲ್ಲಿ ಪರಿಹಾರದ ದುಡ್ಡನ್ನು ದೋಚಿದರು. ಕೋಟಿ ಮೊತ್ತದ ಪರಿಹಾರದ ದುಡ್ಡನ್ನು ಕೆಐಎಡಿಬಿಯ ಖದೀಮರ ಮೂಲಕ ಕಟ್ಟಾ ಭಟ್ಟಂಗಿಗಳೇ ನುಂಗಿ ಬಿಟ್ಟರು. ಕೊನೆಕೊನೆಗೆ ಇಲ್ಲದ ಭೂಮಿಗೆ, ಸರ್ಕಾರಿ ಭೂಮಿಗೆ ನಕಲಿ ದಾಖಲೆ ಸೃಷ್ಟಿಸಿ ಕಟ್ಟಾ ಗ್ಯಾಂಗ್ ಅಟ್ಟಹಾಸಗೈದಿತ್ತು.

ಆದರೆ ಕಟ್ಟಾನ ಪಾಪದ ಕೊಡ ಯಾವತ್ತಿಗೋ ತುಂಬಿಹೋಗಿತ್ತು. ಅದು 2010 ರ ಜೂನ್ 28 ನೇ ತಾರೀಖು. ಕೆಐಎಡಿಬಿಯ ಭೂಸ್ವಾಧೀನಾಧಿಕಾರಿ ನಾಗರಾಜ್ ಕಚೇರಿಗೆ ದಾಳಿಯಿಟ್ಟ ಲೋಕಾಯುಕ್ತ ಎಸ್ಪಿ ಮಧುಕರ್ ಶೆಟ್ಟಿಗೆ ಕಟ್ಟಾ ನಡೆಸಿದ ಅಷ್ಟೂ ಕರ್ಮಕಾಂಡದ ದಾಖಲೆ ಸಿಕ್ಕಿತ್ತು. ಇಟಾಸ್ಕಾ ಹೆಸರಲ್ಲಿ ಬಡದಲಿತರ ಭೂಮಿ ಕಿತ್ತು ಅದನ್ನು ಆಂಧ್ರದ ಖದೀಮರಾದ ಜಗ್ಗಯ್ಯ ಮತ್ತು ವೆಂಕಯ್ಯರ ಲ್ಯಾಂಡ್ ದಂಧೆಗೆ ಒದಗಿಸಲು ಕಟ್ಟಾ 87 ಕೋಟಿ ರೂಪಾಯಿಗಳ ಲಂಚ ಪಡೆದಿದ್ದ. ಮಗ ಜಗ್ಗ ಮತ್ತವನ ರಿಯಲ್ ಎಸ್ಟೇಟ್ ಬಂಟರು ಪರಿಹಾರದ ದುಡ್ಡನ್ನು ದೋಚಿದ್ದರು.

ಯಾವತ್ತು ಲೋಕಾಯುಕ್ತ ಕಟ್ಟಾ ಬೆನ್ನಿಗೆ ಬಿತ್ತೋ ಮಗ ಕಟ್ಟಾ ದಲಿತ ನಾಯಕ ರಾಮಾಂಜನಪ್ಪನಿಗೆ ಲಕ್ಷ ರೂಪಾಯಿ ಲಂಚ ಕೊಡಲು ಹೋಗಿ ಲೋಕಾಯುಕ್ತ ಕೈಗೆ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದ. ಮಾಡಿದ ಪಾಪ ಮುಚ್ಚಿಕೊಳ್ಳಲು ರೌಡಿಗಳನ್ನು ಬಳಸಿದರು. ಅಧಿಕಾರವನು ಇನ್ನಿಲ್ಲದಂತೆ ದುರ್ಬಳಕೆ ಮಾಡಿಕೊಂಡರು. ಲೋಕಾಯುಕ್ತ ಎಸ್ಪಿ ಮಧುಕರ್ ಶೆಟ್ಟರನ್ನೇ ಬೆದರಿಸಲೆತ್ನಿಸಿದರು. ಬಯಲಿಗೆಳೆದ ಪತ್ರಕರ್ತರ ವಿರುದ್ಧ ರೌಡಿಗಳನ್ನು ಬಿಟ್ಟರು. ಭೂಮಿ ಕಳಕೊಂಡ ರೈತರ ದೂರುಗಳು ದಾಖಲಾಗದಂತೆ ಪೊಲೀಸರನ್ನು ಹೆದರಿಸಿದರು. ದೂರು ದಾಖಲಿಸಿದ ಅಧಿಕಾರಿಗಳನ್ನೇ ಎತ್ತಂಗಡಿಗೈದರು. ಒಂದು ಡಜನ್ ಟೀವಿ ವರದಿಗಾರರಿಗೆ ತಮ್ಮ ಕಳ್ಳ ಲೇಔಟಿನಲ್ಲಿ ಬಿಟ್ಟಿ ಸೈಟು ಕೊಟ್ಟರು. ಆದರೆ ನೈಸರ್ಗಿಕ ನ್ಯಾಯವಿದೆಯಲ್ಲ? ಬಂಡಿಕೊಡಿಗೆ ಹಳ್ಳಿಯ ಬಡ ದಲಿತರ ಶಾಪ, ಕಣ್ಣೀರು. ನೋವುಗಳೆಲ್ಲ ಒಟ್ಟಾಗಿ ಕಟ್ಟಾನ ಪಾಪದ ಕೊಡವನು ಭರ್ತಿ ಮಾಡಿಬಿಟ್ಟವು.

ಮಾಡಿದ ಪಾಪವೇ ಕಟ್ಟಾನನ್ನು ನುಂಗಿ ಹಾಕಿದೆ.

-ರಾ. ಸೋಮನಾಥ್

...ಭಯದಲ್ಲಿ ಭ್ರಷ್ಟ ಅಧಿಕಾರಿಗಳು

...ಕಟ್ಟಾ ನಾಯ್ಡುನ ಹಗಲು ದರೋಡೆಗೆ ಸಹಕರಿಸಿ, ದೊಡ್ಡ ಮೊತ್ತದ ...ಕ ದೋಚಿದ್ದ ಕೆಐಎಡಿಬಿಯ ಅಧಿಕಾರಿಗಳಿಗೂ ಈಗ ನಡುಕ ಶುರುವಾಗಿದೆ. ...ಕಟ್ಟಾನ ನಕಲಿ ಕಂಪನಿ. ಇಟಾಸ್ಕಾಗೆ ಅಕ್ರಮವಾಗಿ ಬಡರೈತರ ಭೂಮಿ ... ಕೊಟ್ಟದ್ದ ಅಪರಾಧದ ಜೊತೆಗೆ ಸರ್ಕಾರಿ ಭೂಮಿಗೇ ನಕಲಿ ...ಸುದಾರರನ್ನು ಸೃಷ್ಟಿಸಿ ಪರಿಹಾರದ ಹಣ ದೋಚಿದ್ದು ಈ ಗುಂಪಿನ 2 ... ಘೋರ ವಂಚನೆಯಾಗಿದೆ. ಬೆಂಗಳೂರು ಉತ್ತರ ತಾಲ್ಲೂಕಿನ ಜಾಲ ...ಬಳಿಯ ಬಂಡಿಕೊಡಿಗೇಹಳ್ಳಿಯ ಸುತ್ತಮುತ್ತ ಒಟ್ಟು 3268 ಎಕರೆ ...ಸ್ವಾಧೀನವಾಗಿತ್ತು, ಇದರ ಪೈಕಿ 1648.28 ಎಕರೆ ಜಮೀನು ಸರ್ಕಾರದ್ದೇ ...ದ್ದರೂ ನಕಲಿ ವಾರಸುದಾರರಿಗೆ ಕೋಟ್ಯಂತರ ರೂಪಾಯಿ ಪರಿಹಾರ ...ದಂತೆ ಲೆಕ್ಕ ತೋರಿಸಲಾಗಿತ್ತು, ಕೆಐಎಡಿಬಿಯ ಅಧಿಕಾರಿಗಳಾದ ಚಿಕ್ಕಬೆಟ್ಟಯ್ಯ ...ಷ ಭೂ ಸ್ವಾಧೀನಾಧಿಕಾರಿ ರಾಮಕೃಷ್ಣ ಜೆ.ಸಿ. ಅನಿಲ್ ಕುಮಾರ್ ...ಗೂ ಎಸ್.ಆರ್. ನಾಗರಾಜ್ ಇವರೇ ಆ ಅಧಿಕಾರಿಗಳು. ಈ ಎಸ್.ಆರ್. ...ರಾಜ್ ಕೆಐಎಡಿಬಿಗೆ ಕಾಲಿಡುವ ಮೊದಲು ಶಿವಮೊಗ್ಗದಲ್ಲಿ ಅಸಿಸ್ಟೆಂಟ್ ...ಷನರ್ ಆಗಿದ್ದ, ಅಲ್ಲಿದ್ದಾಗಲೇ ಯಡಿಯೂರಪ್ಪನ ಮಗ ವಿಜಯೇಂದ್ರನ ...ತೆ ಅನೇಕ ಡೀಲುಗಳನ್ನು ಕುದುರಿಸಿ ದುಡ್ಡು ದೋಚುವ ಕಲೆಯನ್ನು ಕರಗತ ಮಾಡಿಕೊಂಡಿದ್ದ. ವಿಜಯೇಂದ್ರನ ಬಲಗೈ ಬಂಟ ಸಂಪತ್ ಎಂಬುವನ ಜೊತೆಗೂ ನಾಗರಾಜ್ ಚೆನ್ನಾಗಿದ್ದ.

ಇಷ್ಟಲ್ಲದೆ ಧನಲಕ್ಷ್ಮಿ ಎಂಬುವವರನ್ನು ಯಲಹಂಕ ತಹಶೀಲ್ದಾರ್ ಆಗಿ ತರಲಾಯಿತು. ಕಟ್ಟಾ ಗುಂಪು, ವಿಜಯೇಂದ್ರ ಹಾಗೂ ಯಲಹಂಕ ಶಾಸಕ ವಿಶ್ವನಾಥ್ ಎಲ್ಲರೂ ಒಟ್ಟಿಗೆ ಸೇರಿ ಸರ್ಕಾರಿ ಭೂಮಿಗೂ ಪರಿಹಾರ ಕೊಡಿಸಿ ಹಣ ದೋಚುವ ಸ್ಕೀಂ ರೂಪಿಸಿದ್ದರಲ್ಲ ಅದು ಜಾರಿಯಾಗಬೇಕೆಂದರೆ ದೂಸರಾ ಮಾತಾಡದೆ ಸಹಕರಿಸುವ ಅಧಿಕಾರಿಗಳು ಜೊತೆಗಿರಬೇಕಿತ್ತು, ಹಾಗಾಗಿ ಶಿವಮೊಗ್ಗದಲ್ಲಿದ್ದ ಎಸ್.ಆರ್. ನಾಗರಾಜ್‌ನನ್ನು ಕೆಐಎಡಿಬಿಗೂ, ಮಳವಳ್ಳಿಯಲ್ಲಿ ತಹಶೀಲ್ದಾರ್ ಆಗಿದ್ದ ಧನಲಕ್ಷ್ಮಿಯನ್ನು ಯಲಹಂಕ ತಹಶೀಲ್ದಾರ್ ಆಗಿಯೂ ಕರೆತರಲಾಯಿತು. ಈ ವರ್ಗಾ ಡೀಲ್ ಕುದುರಿಸಿದವ ಪೈಕಿ ಬೆಂಗಳೂರಿನ ರಾಜಾಜಿನಗರದಲ್ಲಿ ಪ್ರಿಂಟಿಂಗ್ ಪ್ರೆಸ್ ಹೊಂದಿರುವ ಸುನೀಲ್ ಎಂಬುವನು ಕೈವಾಡವೂ ಇತ್ತು.

ಶಾಸಕ ವಿಶ್ವನಾಥನ ಕುಮ್ಮಕ್ಕಿನಿಂದ ಜಾಲ ಹೋಬಳಿಯ ಆಸುಪಾಸಿನ ಸರ್ಕಾರಿ ಭೂಮಿಗೆ ನಕಲಿ ವಾರಸುದಾರರನ್ನು ಸೃಷ್ಟಿಸಿ ಅಂತವರ ಹೆಸರಿನಲ್ಲೇ




ಧನಲಕ್ಷ್ಮಿ

ನಕಲಿ ಪಹಣಿ ಹಾಗೂ ನಕಲಿ ಮ್ಯೂಟೇಶನ್ ಸೃಷ್ಟಿಸುವ ಕೆಲಸವೂ ಆಯಿತು. ತಹಶೀಲ್ದಾರ್ ಧನಲಕ್ಷ್ಮಿಯೂ ಇದರಲ್ಲಿ ಕೈಜೋಡಿಸಿ ಕೋಟ್ಯಂತರ ರೂಪಾಯಿ ಹಣ ದೋಚಿದರು. ನಂತರ ಹೀಗೆ ದೋಚಿದ ಹಣದಲ್ಲೇ ಧನಲಕ್ಷ್ಮಿಯ ಪತಿರಾಯ ವಸಂತ್ ಕುಮಾರ್ ಎಂಬಾತ ಗಾಂಧಿನಗರದಲ್ಲಿ ಚೈತ್ರ ಬುಕ್ ಹೌಸ್ ತೆರೆದರು. ಅನಾಮತ್ತು ಒಂದು ಕೋಟಿ ರೂಪಾಯಿ ಬಂಡವಾಳದ ಚೈತ್ರ ಬುಕ್ ಹೌಸ್ ಅಮಾಯಕ ರೈತರ ರಕ್ತ ಹೀರಿ ತಲೆ ಎತ್ತಿದರೂ ಉದ್ಧಾರವಾಗಲಿಲ್ಲ. ಈ ನಡುವೆ ಎಲೆಕ್ಷನ್ ಚಟ ಹತ್ತಿಸಿಕೊಂಡ ವಸಂತ್ ಕುಮಾರ್ 2008-09 ರಲ್ಲಿ ಆಗ್ನೇಯ ಪದವೀಧರ ಕ್ಷೇತ್ರದಿಂದ ಸ್ಪರ್ಧಿಸಿ ಸರಿಸುಮಾರು 2 ಕೋಟಿ ರೂಪಾಯಿಗಳ ತನಕ ಹಣ ಖರ್ಚು ಮಾಡಿದರಾದರೂ ಠೇವಣಿಯೂ ಬರದೆ ಸೋತರು. ಆತನ ಎಲೆಕ್ಷನ್ ಖರ್ಚಿನ ಹಣವೂ ಪತ್ನಿ ಧನಲಕ್ಷ್ಮಿ ದೋಚಿದ್ದ ಹಣವೇ ಆಗತ್ತೆನ್ನಲಾಗಿದೆ.

ಈ ಮಧ್ಯೆ ವಂಚನೆ ಪ್ರಕರಣ ಪೊಲೀಸರ ಹಾಗೂ ಲೋಕಾಯುಕ್ತರ ವ್ಯಾಪ್ತಿಗೆ ಬರುತ್ತಿದ್ದಂತೆ ಕೆಐಎಡಿಬಿಯ ಭ್ರಷ್ಟ ಅಧಿಕಾರಿಗಳೆಲ್ಲಾ ತಲೆತಪ್ಪಿಸಿಕೊಂಡು ಓಡಿಹೋದರು. ನಂತರ ಜಾಮೀನು ಸಿಗದೆ ಪೊಲೀಸರಿಗೆ ಶರಣಾದರು.

ಇವರೆಲ್ಲರ ಮೇಲೂ ಈಗ ಚಾರ್ಜ್ ಶೀಟ್ ಸಲ್ಲಿಕೆಯಾಗಿದೆ. ಕಟ್ಟಾಗೆ ಹಿಂದೆಯೇ ಈ ಭ್ರಷ್ಟರೂ ಜೈಲಿಗೆ ಹೋಗುವ ಸಾಧ್ಯತೆಗಳಿವೆ.



ಶ್ರೀರಾಮುಲುಗೆ ಮೆಂಟಲ್ ಪ್ರಾಬ್ಲಮ್!

ಮಾಜಿ ಆರೋಗ್ಯ ಸಚಿವ ಶ್ರೀರಾಮುಲನ ಪರಿಸ್ಥಿತಿ ತೀರಾ ಚಿಂತಾಜನಕವಾಗಿದೆ. ಗಣಿ ರೆಡ್ಡಿಗಳೆದೆಗಿನ ನಿಯತ್ತು, ಅವರ ಜೊತೆಗೂಡಿ ಮಾಡಿದ ಗಣಿ ದರೋಡೆ ಮತ್ತು ಅದರಿಂದಲೇ ಕಾಲಬುಡಕ್ಕೆ ಬಂದು ಬಿದ್ದ ಹಠಾಟಿ ಸಂಪತ್ತು... ಇವೆಲ್ಲವೂ ಶ್ರೀರಾಮುಲನ ಮಿದುಳಿಗೆ ಕೈಹಾಕಿ ಕಲೆಸ ರಾಂಭಿಸಿವೆ. ತರಹೇವಾರಿ ತನಿಖೆಗಳ ತೂಗುಗತ್ತಿ ಯಡ್ಡಿ ಹಾಗೂ ರೆಡ್ಡಿಗಳ ನೆತ್ತಿಯ ಮೇಲೆ ಸರಿಯುತ್ತಿದ್ದರೆ, ಶಿಕ್ಷೆಯ ಹುಣಿಸೆ ತಪ್ಪದೇ ಹುತ್ತ ಸವರಿದಂತಾಗಿ ರಾಮುಲು ಕಂಗಾಲಾಗಿದ್ದಾನೆ. ಇದೆಲ್ಲದರಿಂದಾಗಿ ಅಷ್ಟು ಮನೋರೋಗ ತಗುಲಿಸಿಕೊಂಡಿರುವ ಆತ ಶಿವಮೊಗ್ಗದ ಮಾನಸಿಕ ತಜ್ಞ ಡಾ. ಅಶೋಕ್ ಪೈ ಮೊರೆ ಹೋಗಿದ್ದಾನೆ!

ರಾಮುಲು ಸೇರಿದಂತೆ ಇಡೀ ರೆಡ್ಡಿ ಪಟಾಲಂ ಇಂತಹುದೊಂದು ಅನಾಹುತವನ್ನು ನಿರೀಕ್ಷಿಸಿರಲಿಲ್ಲ. ಬೀಡಾಡಿ ಶಾಸಕರನ್ನು ಖರೀದಿಸಿದಷ್ಟೇ ಸುಲಭವಾಗಿ ನ್ಯಾಯವನ್ನೂ ಕೊಂಡುಕೊಂಡು ಅಖಂಡ ಅನ್ಯಾಯವನ್ನು ದಕ್ಕಿಸಿಕೊಳ್ಳಬಹುದೆಂಬ ಭ್ರಮೆ ಈ ಘಟಿಂಗರಿಗಿತ್ತು. ಆದರೀಗ ನ್ಯಾಯವೆಂಬುದು ನಿಷ್ಠುರವಾಗಿ ಛಾಟಿ ಬೀಸಿದೆ. ಕಳ್ಳ ಜನಾರ್ದನ ರೆಡ್ಡಿ ಪಟಾಲಂನ ಸಮೇತ ಪರಪ್ಪನ ಅಗ್ರಹಾರ ಸೇರುವುದೂ ಖಾತ್ರಿಯಾಗಿದೆ. ಇದೆಲ್ಲದರಿಂದ ಮಾನಸಿಕ ಸ್ಥಿಮಿತ ಕಳೆದುಕೊಂಡಿರುವ ರಾಮುಲು ಅಶೋಕ್ ಪೈ ಸಮ್ಮುಖದಲ್ಲಿ ಭಯದ ಭಾರ ಇಳಿಸಿಕೊಳ್ಳಲು ಹೆಣಗುತ್ತಿದ್ದಾನೆ.



ಲೋಕಾಯುಕ್ತ ವರದಿ ಬಂದು ಸರ್ಕಾರ ಅದುರತೊಡಗಿದಾಗಲೇ ಶ್ರೀರಾಮುಲವಿನ ಮಾನಸಿಕ ಸ್ಥಿಮಿತ ಕಳೆದುಹೋಗಿತ್ತು. ತದನಂತರದ ಬೆಳವಣಿಗೆಯಲ್ಲಿ ತಾನೂ ಸೇರಿದಂತೆ ಇಡೀ ರೆಡ್ಡಿ ಪಟಾಲಂ ಮಾಜಿಗಳಾಗಿ ಮಂಕಾಗುವಂತಾಯಿತು. ಇದೇ ಫೀಲಿಂಗ್‌ನಲ್ಲಿ ಬಳ್ಳಾರಿಯ ಕಡೆ ಬಂದ ರಾಮುಲುಗೆ ತಾನೇ ಬಗೆದ ಗಣಿ ಹೊಂಡಗಳು ತನ್ನದೇ ಸಮಾಧಿಯಂತೆ ಬಾಯ್ತೆರೆದಂತಾಗಿ ಕಂಗಾಲಾಗಿದ್ದಾನೆ. ಇದರಿಂದಾಗಿ ಮಾನಸಿಕ ಸ್ಥಿಮಿತ ಸಂಪೂರ್ಣ ಕೈಕೊಟ್ಟಿದೆ. (ಈ ಹಿಂದೆ ಹತೋಟಿಯಲ್ಲಿತ್ತೆಂಬುದಕ್ಕೆ ಪುರಾವೆಗಳಿಲ್ಲ!) ತದನಂತರ ಹುಚ್ಚಾಸ್ಪತ್ರೆಗೆ ದೌಡಾಯಿಸುವುದೊಂದೇ ಆತನ ಎದುರಿಗಿದ್ದ ಏಕೈಕ ಮಾರ್ಗ!

ಕಳೆದ ವಾರವೇ ಶ್ರೀರಾಮುಲು ಗುಟ್ಟಾಗಿ ಶಿವಮೊಗ್ಗೆಗೆ ಬಂದು ಅಶೋಕ್ ಪೈಯೆದುರು ಹಾಜರಾಗಿದ್ದ. ಈ ಸಂದರ್ಭದಲ್ಲಿ ಆತನ ಜೊತೆಗೆ ಕೆಲವೇ ಕೆಲ ಆಪ್ತರಿದ್ದರು. ಆದರೆ ಶ್ರೀರಾಮುಲನಿಗಂಟಿರುವ ಮನೋರೋಗ ಒಂದು ಭೇಟಿ, ಒಂದಷ್ಟು ಥೆರಪಿಗಳಿಗೆ ಬಗ್ಗುವ ಸ್ಟೇಜು ಮೀರಿ ಹೋಗಿದೆ. ಆದುದರಿಂದಲೇ ಮುಂದಿನ ವಾರ ಮತ್ತೆ ಚಿಕಿತ್ಸೆ ಪಡೆಯಲು ಪೈರನ್ನು ಭೇಟಿಯಾಗಲಿದ್ದಾನೆ. ಆದರೆ ರೆಡ್ಡಿ ಪಟಾಲಂನ ಬುಡಕ್ಕೆ ದಿನಕ್ಕೊಂದೊಂದು ತನಿಖೆಗಳ ಬೆಣೆ ಜಡಿಯುತ್ತಾ ಸಾಗಿದೆ. ಅಶೋಕ್ ಪೈ ಅದೆಷ್ಟೇ ಕಷ್ಟಪಟ್ಟು ರಾಮುಲನ ಸ್ಕ್ರೂ ಟೈಟು ಮಾಡಿದರೂ ಅದು ವ್ಯರ್ಥ ಕೆಲಸ!

ಅಷ್ಟಕ್ಕೂ ಶ್ರೀರಾಮುಲು ಮಾನಸಿಕ ಅಸ್ವಸ್ಥ ಸ್ಥಿತಿ ತಲುಪಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಲೋಕಾಯುಕ್ತರು ವರದಿ ನೀಡಿದ ನಂತರದ ಪ್ರತೀ ಘಟನೆಗಳೂ ಸಹ ಅಷ್ಟೇ ಬಿರುಸಾಗಿವೆ. ಸದರಿ ವರದಿ ಜನಾರ್ದನ ರೆಡ್ಡಿ, ಕರುಣಾಕರ ರೆಡ್ಡಿ ಹಾಗೂ ಶ್ರೀರಾಮುಲನನ್ನು ಸ್ಪಷ್ಟವಾಗಿ ಆರೋಪಿ ಸ್ಥಾನದಲ್ಲಿ ನಿಲ್ಲಿಸಿದೆ. ಇವರೆಲ್ಲರನ್ನು ಸಂಪುಟದಿಂದ ಕೈಬಿಡಬೇಕೆಂದೂ ಸೂಚಿಸಿ ಅದು ಕಾರ್ಯರೂಪಕ್ಕೂ ಬಂದಿದೆ. ಇದನ್ನು ಕೂಡಾ ಹೇಗೋ ದಕ್ಕಿಸಿಕೊಳ್ಳಬಹುದೆಂಬ ಭಂಡತನದಲ್ಲಿದ್ದ ರೆಡ್ಡಿ ಪಟಾಲಂಗೆ ಕಟ್ಟಾ ನಾಯ್ಡು ಮಗನ ಸಮೇತ ಜೈಲಿಗೆ ಗದುಮಿಸಿಕೊಂಡಿರುವುದು ವಿಪರೀತ ಭಯ ಹುಟ್ಟಿಸಿದೆ. ಈ ಭಯದ ಪೆಟ್ಟು ನೇರವಾಗಿ ಬಿದ್ದದ್ದು ಅದಾಗಲೇ ಸ್ಥಿಮಿತ ಕಳಕೊಂಡಿದ್ದ ಶ್ರೀರಾಮುಲವ ಮೆದುಳಿಗೆ!

ಲೋಕಾಯುಕ್ತರ ವರದಿ ಒಂದೆಡೆಯಾದರೆ ಇದರಿಂದಲೇ ಅಕ್ರಮ ಗಣಿ ವಿರುದ್ಧದ ಹೋರಾಟಗಳಿಗೆ ಸ್ಫೂರ್ತಿ ಸಿಕ್ಕಿದೆ. ಸಮಾಜ ಪರಿವರ್ತನಾ ಸಮುದಾಯದ ಸಂಗಯ್ಯ ಹಿರೇಮಠ್ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಡಿಯಲ್ಲಿ ಲೋಕಾಯುಕ್ತ ವರದಿಯನ್ನು ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ್ದಾರೆ. ಅಲ್ಲಿಗೆ ಕಳ್ಳರ ಪಾಲಿಗೆ ಜೈಲೆಂಬುದು ಕಾಯಂ ಆದಂತೆಯೇ. ಇನ್ನುಳಿದಂತೆ ಇನ್ ಕಂಟ್ಯಾಕ್ಟ್, ಸಿಇಸಿ ತನಿಖೆಗಳಿಗೂ ಈ ಕಳ್ಳರ ದಂಡು ಎದೆಯೊಡ್ಡಲೇ ಬೇಕಾದ ಪರಿಸ್ಥಿತಿಯಿದೆ.


ಶ್ರೀರಾಮುಲನಿಗೆ ತಿಕ್ಕಲುತನಗಳಿಗೆ ಭಾವುಕ ಹೊದಿಕೆ ಹೊದಿಸಿ ಜನರೆದುರು ಹರಿಬಿಡುವ ಕಲೆ ಕರತಲಾಮಲಕ. ಕಾಂಗ್ರೆಸ್ಸಿಗರು ಅಕ್ರಮ ಗಣಿಗಾರಿಕೆಯನ್ನು ಸಿಬಿಐ ತನಿಖೆಗೊಳಪಡಿಸುವಂತೆ ಒತ್ತಾಯಿಸಿ ಬಳ್ಳಾರಿಯವರೆಗೆ ಕಾಲ್ನಡಿಗೆ ಜಾಥಾ ನಡೆಸಿದ್ದರಲ್ಲಾ? ಆಗ ಈ ಶ್ರೀರಾಮುಲು ತಮ್ಮ ವಿರುದ್ಧ ವಿನಾಕಾರಣ ಆರೋಪ ಮಾಡುತ್ತಿದ್ದಾರೆಂದು ಅಲವತ್ತುಕೊಂಡವನೇ ತಲೆ ಬೋಳಿಸಿಕೊಂಡು ಕಪ್ಪು ವಸ್ತ್ರಧರಿಸಿ ಕಮಂಗಿಯಂತಾಡಿದ್ದ. ಹದಿನೈದಿಪ್ಪತ್ತು ದಿನ ಬರೀ ಕಾಳುಕಡ್ಡಿ ಕಡಿದೇ ಹೊಟ್ಟೆ ತುಂಬಿಸಿಕೊಂಡು ಚಾಪೆಯ ಮೇಲೆ ಮಲಗಿ ಪೋಸು ಕೊಟ್ಟಿದ್ದ. ಆಗಲೇ ರಾಜ್ಯದ ಪ್ರಜ್ಞಾವಂತರಿಗೀತ ಮಾನಸಿಕ ಅಸ್ವಸ್ಥನಂತೆ ಕಾಣಿಸಿದ್ದು ದಿಟ.

ಶ್ರೀರಾಮುಲನ ಇಂದಿನ ಸ್ಥಿತಿಗೆ ಮೇಲ್ಕಂಡವುಗಳೆಲ್ಲ ತಾಂತ್ರಿಕ ಕಾರಣಗಳಾದರೇ, ಆತನೇ ತನ್ನೊಳಗೆ ಸಾಕಿಕೊಂಡಿರುವ ವಂಚನೆಗಳದ್ದೂ ಪಾಲಿರುವ ವಿಚಾರ ಸುಳ್ಳಲ್ಲ. ಈತನಿಗೆ ಅಧಿಕಾರದ ಹಪಾಹಪಿಯಿತ್ತು, ಅಡ್ಡ ಹಾದಿಯಲ್ಲಿ ಸಾಗಿಯಾದರೂ ಹಣ ಮಾಡುವ ಉಮೇದೂ ಇತ್ತು. ಅದಿಲ್ಲದೆ ಹೋಗಿದ್ದರೆ ಕಳ್ಳ ರೆಡ್ಡಿಗಳ ಪಟಾಲಂ ಸೇರಿಕೊಳ್ಳುವುದು ಸಾಧ್ಯವಿರಲಿಲ್ಲ. ಆದರೀತನಿಗೆ ಜಗತ್ತಿನೆದುರು ಒಳ್ಳೆಯವನೆಂದು ತೋರಿಸಿಕೊಳ್ಳುವ ತಲುಬು ವಿಪರೀತವಿದೆ. ಈಗ ಆತನನ್ನು ಮಾನಸಿಕವಾಗಿ ಹೈರಾಣು ಮಾಡುತ್ತಿರುವುದೂ ಇದೇ ತೊಳಲಾಟ. ನಾಳೆ ತನಿಖೆಗಳೆಲ್ಲ ಮುಗಿದು ಪರಪ್ಪನ ಅಗ್ರಹಾರ ಸೇರಿ ಕಳ್ಳ-ಕೆಟ್ಟವನು ಅನ್ನಿಸಿಕೊಳ್ಳುವ ಕ್ಷಣವನ್ನು ಎದುರುಗೊಳ್ಳಲು ಆತನೊಳಗಿನ ವಂಚಕ ಅನುವು ಮಾಡಿಕೊಡುತ್ತಿಲ್ಲ. ಅದಕ್ಕಾಗಿಯೇ ಆತ ಹುಚ್ಚಾಸ್ಪತ್ರೆ ಸೇರುವ ಸ್ಥಿತಿ ತುರುಕೊಂಡಿದ್ದಾನೆ. ಈ 'ಮಾನಸಿಕ' ವಿಶ್ಲೇಷಣೆಯನ್ನು ಸಾಕ್ಷಾತ್ತು ಅಶೋಕ್ ಪೈ ಕೂಡಾ ತಳ್ಳಿ ಹಾಕಲಿಕ್ಕಿಲ್ಲ!

ಹಾಗಾದರೆ ಇಡೀ ಅಕ್ರಮದ ಜನಕ ಜನಾರ್ದನ ರೆಡ್ಡಿಗೇಕೆ ಹುಚ್ಚು ಹಿಡಿದಿಲ್ಲ ಅಂತೊಂದು ಪ್ರಶ್ನೆ ಕಾಡುವುದು ಸಹಜ. ಈ ಜನಾ ರೆಡ್ಡಿ ಮಾನ ಮರ್ಯಾದೆ, ಅಂಜಿಕೆಗಳಿಗೆಲ್ಲ ಬೆನ್ನು ತಿರುಗಿಸಿ ಸಾಕಷ್ಟು ಕಾಲವಾಗಿದೆ. ಆತ ಪರಪ್ಪನ ಅಗ್ರಹಾರದಲ್ಲಿ ಕಟ್ಟಾ ಸುಬ್ರಮಣ್ಯ ನಾಯ್ಡುವಿನ ಪಕ್ಕದಲ್ಲಿ ಕೂತೇ ತಾನು ಪರಮ ಸಾಚಾ ಅನ್ನಬಲ್ಲ ಭಂಡ!

ಅಂತೂ ಮಾಜಿ ಆರೋಗ್ಯ ಸಚಿವ ಶ್ರೀರಾಮುಲು ತಾನೇ ಮನೋರೋಗಿಯಾಗಿ ವೈದ್ಯರ ಮುಂದೆ ನಿಲ್ಲುವ ಸ್ಥಿತಿ ತಂದುಕೊಂಡಿದ್ದಾನೆ. ಆತ ಈಗ ಅಕ್ಷರಶಃ ಹುಚ್ಚಾಸ್ಪತ್ರೆ ಸೇರಿದ್ದಾನೆ. ಅಶೋಕ್ ಪೈ ಆತನನ್ನು ಮಾನಸಿಕ ವ್ಯಾಕುಲ ದಿಂದ ಹೊರತರಲು ಶತಪ್ರಯತ್ನ ನಡೆಸುತ್ತಿದ್ದಾರೆ.

ಶ್ರೀರಾಮುಲು ತೀರಾ ತಾನಿರುವುದು ಪರಪ್ಪನ ಅಗ್ರಹಾರದಲ್ಲಿ, ಮುರಿಯುತ್ತಿರುವುದು ಜೈಲಿನ ಮುದ್ದೆ ಎಂಬಷ್ಟಾದರೂ ಸ್ಥಿಮಿತ ಉಳಿಯುವಂತೆ ಚೇತರಿಸಿಕೊಳ್ಳಲಿ. ಆತನ ಭವಿಷ್ಯದ ದೃಷ್ಟಿಯಿಂದ ಇದು ಅನಿವಾರ್ಯ ಹಾರೈಕೆ ●



ಹಳೇ ಕಳ್ಳರ ಹೊಸಾ ಸಂಪುಟ!

ಯಡಿಯೂರಪ್ಪನವರಿಗ ಕಳಂಕ ತರುವಲ್ಲಿ 'ಮಹತ್ವವಾದ ಪಾತ್ರ" ವಹಿಸಿದ ವಿ. ಸೋಮಣ್ಣ ಮತ್ತೆ ಸದಾನಂದ ಗೌಡರಿಗೂ ಅದೇ ರೀತಿಯ ಗೌರವ ಸೂಚಿಸಲು ಹೊರಟಿದ್ದಾರೆ. ಸದಾನಂದ ಗೌಡರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಮೊದಲ ಹಂತದ ಸಂಪುಟ ವಿಸ್ತರಣೆ ಸಂದರ್ಭದಲ್ಲಿ ಸೋಮಣ್ಣನ ಹೆಸರು ಸೇರ್ಪಡೆಯಾಗಿದ್ದೇ ಈಗ ಆಡಳಿತಾರೂಢ ಬಿಜೆಪಿ ಪಕ್ಷದಲ್ಲಿ ಬಂಡಾಯದ ಅಲೆಗೆ ಕಾರಣವಾಗಿದೆ.

ವಾಸ್ತವವಾಗಿ ಸದಾನಂದ ಗೌಡರು 20 ಜನ ಹೊಸ ಶಾಸಕರನ್ನು ಮಂತ್ರಿ ಮಾಡುತ್ತಾರೆ ಎಂದೇ ಆರಂಭದಲ್ಲಿ ಪತ್ರಿಕಾ ವರದಿಗಾರರಿಗೆ ಮತ್ತು ಶಾಸಕಾಂಗ ಪಕ್ಷದ ಸದಸ್ಯರಿಗೆ ಮಾಹಿತಿ ಬಂದಿತ್ತು, ಆದರೆ ಕೊನೆಯ ಕ್ಷಣದಲ್ಲಿ 21 ಜನ ಶಾಸಕರು ಮಂತ್ರಿಯಾಗುತ್ತಾರೆ ಎಂಬ ಸುದ್ದಿ ಬಂದಾಕ್ಷಣ 21ನೆಯ ವ್ಯಕ್ತಿ ಯಾರು ಎಂದೇ ಎಲ್ಲಾ ಕಡೆ. ಚರ್ಚೆಯಾಯಿತು. ಆದರೆ ಪ್ರಮಾಣವಚನ ಸ್ವೀಕಾರ ಆರಂಭವಾಗುವ ತನಕ 21 ನೆಯ ವ್ಯಕ್ತಿ ಯಾರೆಂಬುದು ಯಾರಿಗೂ ಗೊತ್ತಾಗಲೇ ಇಲ್ಲ, ಆದರೆ ಸೋಮಣ್ಣನ ಕಟೌಟ್ ಆಗಮನ ಕಾಣುತ್ತಿದ್ದಂತೆಯೇ ಸೋಮಣ್ಣ ಮಂತ್ರಿಯಾಗುತ್ತಿದ್ದಾರೆಂಬ ಸೂಚನೆ ಬಂತು. ಅಲ್ಲಿಯವರೆಗೆ ಸೋಮಣ್ಣ ಮಂತ್ರಿಯಾಗುವುದನ್ನು ಗೌಪ್ಯವಾಗಿಡಲಾಗಿತ್ತು,

ಸೋಮಣ್ಣನನ್ನು ಮಂತ್ರಿ ಮಾಡಿದ್ದೇ ಈಗ ಹೊಸ ಮುಖ್ಯಮಂತ್ರಿ ಸದಾನಂದ ಗೌಡರಿಗೆ ತಲೆನೋವಿನ ಸಂಗತಿಯಾಗಿದೆ. ಅಷ್ಟೇ ಅಲ್ಲ, ಇದರಿಂದಾಗಿ ಕುಪಿತಗೊಂಡಿರುವ ಬಳ್ಳಾರಿಯ ರೆಡ್ಡಿ ಸಹೋದರರು ಪ್ರಮಾಣವಚನ ಸಮಾರಂಭಕ್ಕೂ ಹಾಜರಾಗದೇ ನೇರವಾಗಿ ದೆಹಲಿಗೆ ಪ್ರಯಾಣ ಬೆಳೆಸಿ ಪಕ್ಷದ ಹೈಕಮಾಂಡ್ ಜೊತೆಗೆ ಮಾತುಕತೆ ನಡೆಸಿದರು. ನಿನ್ನೆ-ಮೊನ್ನೆ ಪಕ್ಷಕ್ಕೆ ಬಂದ ಸೋಮಣ್ಣನಿಗೆ ಮಂತ್ರಿಗಿರಿ ಕೊಡುವುದಾದರೆ ಪಕ್ಷ ಸಂಕಷ್ಟದಲ್ಲಿದ್ದಾಗ ಅದನ್ನು ಪೋಷಿಸಿ, ಚುನಾವಣೆಯಲ್ಲಿ ಪಕ್ಷಧ ಅಭ್ಯರ್ಥಿಗಳು ಗೆಲ್ಲಲು ಹಣದ ಥೈಲಿಯನ್ನು ನೀಡಿದ ನಮಗೆ ಯಾಕೆ ಮಂತ್ರಿಗಿರಿ ನೀಡಿಲ್ಲ ಎಂದು ಹೈಕಮಾಂಡನ್ನೇ ನೇರವಾಗಿ ಪ್ರಶ್ನಿಸಿದ್ದಾರೆ. ಹೀಗಾಗಿ 'ಸೋಮಣ್ಣನ ಕೃಪೆ'ಯಿಂದಾಗಿ ರೆಡ್ಡಿ ಸಹೋದರರು ಮತ್ತೊಮ್ಮೆ ತಲೆಯೆತ್ತಿ ಪಕ್ಷದೊಳಗೆ ಈಗ ಓಡಾಡುವಂತಾಗಿದೆ.

ಸೋಮಣ್ಣನನ್ನು ಬಲವಂತವಾಗಿ ಸದಾನಂದ ಗೌಡರ ಸಂಪುಟಕ್ಕೆ ಸೇರಿಸಿದ್ದೇ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಎಂಬುದು ಗುಟ್ಟಾಗಿ ಉಳಿದಿಲ್ಲ, ಸೋಮಣ್ಣನನ್ನು ಮಂತ್ರಿ ಮಾಡದಿದ್ದರೆ ನಾನು ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಬರುವುದಿಲ್ಲ ಎಂದು ಯಡ್ಡಿ ಹಠ ಹಿಡಿದಿದ್ದರಿಂದ ಸದಾನಂದ ಗೌಡ ಶರಣಾಗಬೇಕಾಯಿತು. ಹೀಗೆ ಮೊದಲ ದಿನದಿಂದಲೇ ಸದಾನಂದ ಗೌಡರ ಮೇಲೆ ಬಲವಾದ ಹಿಡಿತವನ್ನು ಸಾಧಿಸುವಲ್ಲಿ ಯಡಿಯೂರಪ್ಪ ಯಶಸ್ವಿಯಾದರು. ಆ ಮೂಲಕ ತಾನು ಸೂಪರ್ ಸಿ.ಎಂ. ಎಂಬುದನ್ನು ತನ್ನ ಪಕ್ಷದ ಶಾಸಕರಿಗೆ ಪರೋಕ್ಷವಾಗಿ ತೋರಿಸಿಕೊಟ್ಟರು.

ಈಗ ಎರಡನೇ ಹಂತದ ಸಂಪುಟ ವಿಸ್ತರಣೆಯಲ್ಲಿ ಇಂದು ಗುರುವಾರ ಸದಾನಂದ ಗೌಡರು ಮತ್ತೆ ಐದು ಜನ ಶಾಸಕರನ್ನು ಮಂತ್ರಿ ಮಾಡಿದ್ದಾರೆ. ಅದರಲ್ಲಿ ಮುಖ್ಯವಾಗಿ ಇವರೆಲ್ಲರೂ ಬಿಜೆಪಿ ಪಕ್ಷಕ್ಕೆ ವಲಸೆ ಬಂದವರು ಎಂಬುದೇ ಪ್ರಮುಖ ಸಂಗತಿ. ಸಹಜವಾಗಿ ಅನೇಕ ವರ್ಷಗಳಿಂದ ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರಿಗೆಲ್ಲ ಇದರಿಂದ ಬೇಸರವಾಗಿದೆ. ಹೀಗಾಗಿ ಮೂಲ ನಿವಾಸಿಗಳು ಮತ್ತು ವಲಸೆ ಬಂದವರ ನಡುವಿನ ಕಂದಕ ಇನ್ನಷ್ಟು ಆಳವಾಗುತ್ತಿದೆ.

ಈಗಾಗಲೇ ಸೋಮಣ್ಣನನ್ನು ಮಂತ್ರಿಮಂಡಲದಿಂದ ಡ್ರಾಪ್ ಮಾಡಬೇಕೆಂದು ಹರಿಹರದ ಶಾಸಕ ಹರೀಶ್ ಬಾಂಬ್ ಹಾಕಿದ್ದಾರೆ. ಅಷ್ಟೇ ಅಲ್ಲ, ಇಂತಹ ಅನರ್ಹರನ್ನು ಮಂತ್ರಿ ಮಂಡಲದಲ್ಲಿ ಸೇರಿಸಿರುವುದರಿಂದ ಪಕ್ಷಕ್ಕೆ ದೊಡ್ಡ ತೊಂದರೆಯಾಗಿದೆ ಮತ್ತು ಪಕ್ಷದ ನಾಯಕರಿಗೆ ಮುಜುಗರವಾಗುತ್ತದೆ, ಆ ಕಾರಣಕ್ಕಾಗಿ ಅವರನ್ನು ಮಂತ್ರಿಮಂಡಲದಿಂದ ಕೈಬಿಡಬೇಕೆಂದು ಹರೀಶ್ ದೆಹಲಿಯಲ್ಲಿರುವ ವರಿಷ್ಠರನ್ನು ಒತ್ತಾಯಿಸಿದ್ದಾರೆ.

ಇನ್ನೊಂದು ವಿಶೇಷವೆಂದರೆ 'ಸೋಮಣ್ಣ ಹಠಾವೋ' ಕಾರ್ಯಕ್ರಮದಲ್ಲಿ ಹರೀಶ್ ಜೊತೆಗೆ ಇನ್ನೂ ಅನೇಕ ಶಾಸಕರು ಕೈಜೋಡಿಸಿದ್ದಾರೆ. ಪಕ್ಷದ ರಾಜ್ಯಾಧ್ಯಕ್ಷ ಈಶ್ವರಪ್ಪ ಮುಖ್ಯಮಂತ್ರಿ ಸದಾನಂದ ಗೌಡ ಮತ್ತು ನಾಯಕ ಯಡಿಯೂರಪ್ಪನವರ ಮಾತು ಮತ್ತು ಮನವಿಯನ್ನು ಬದಿಗೊತ್ತಿ ಹರೀಶ್ ಪತ್ರಿಕಾಗೋಷ್ಠಿ ಕರೆದದ್ದು ನಿಜಕ್ಕೂ ಪಕ್ಷದಲ್ಲಿ ಅಸಮಾಧಾನ ಭುಗಿಲೆದ್ದಿದೆ ಎಂಬುದನ್ನು ತೋರಿಸುತ್ತಿದೆ. ಒಂದು ವೇಳೆ ಪಕ್ಷದ ಶಿಸ್ತನ್ನು ಮೀರಿ [illegible] ಹೈಕಮಾಂಡ್ ಶಿಸ್ತು ಕ್ರಮ ಕೈಗೊಂಡಲ್ಲಿ ಅವರ ಜೊತೆಗೆ ಕೈಜೋಡಿಸಲು ತೆರೆಮರೆಯಲ್ಲಿ ಇನ್ನೂ ಹಲವಾರು ಶಾಸಕರು ತಯಾರಾಗಿದ್ದಾರೆ. ಅಂದರೆ ಎಲ್ಲಿಯವರೆಗೆ ಸೋಮಣ್ಣ ಮಂತ್ರಿ ಕುರ್ಚಿಯಿಂದ ಇಳಿಯುವುದಿಲ್ಲವೋ ಅಲ್ಲಿಯವರೆಗೆ ಬಿಜೆಪಿದಲ್ಲಿ ಅಸಮಾಧಾನ ಒಳಗೊಳಗೆ ಕುದಿಯುತ್ತಲೇ ಇರುತ್ತದೆ.

ಲೋಕಾಯುಕ್ತ ವರದಿಯಲ್ಲಿ ಸೋಮಣ್ಣನ ಹೆಸರಿಲ್ಲ ಅವರ ಮಗನ ಹೆಸರು ಮಾತ್ರ ಇದೆ ಎಂದು ಅವ ಕಡೆಯವರು ಸಬೂಬು ನೀಡುತ್ತಿದ್ದಾರೆ. ಆದರೆ ಅವ ಮಗ ಡಾ.ಅರುಣ್ ಮಂತ್ರಿಸ್ಥಾನದಲ್ಲಿರುವ ತನ್ನ ತಂದೆ ಸೋಮಣ್ಣನ ಹೆಸರನ್ನು ದುರುಪಯೋಗಪಡಿಸಿಕೊಂಡು ಅಧಿಕಾರದ ಲಾಭ ಪಡೆದಿದ್ದಾರೆ ಎಂಬುದನ್ನು ಅವರು ಮರೆತಂತಿದೆ.

ಅದೇನೇ ಇರಲಿ. ಯಡಿಯೂರಪ್ಪ ಆರಂಭದಿಂದಲೂ ಸೋಮಣ್ಣನನ್ನು ಅಗತ್ಯಕ್ಕಿಂತಲೂ ಹೆಚ್ಚು ತಲೆ ಮೇಲೆ ಹೊತ್ತುಕೊಂಡು ತಿರುಗಾಡಿದರು. ಕಾಂಗ್ರೆಸ್ ಟಿಕೆಟ್‌ನಲ್ಲಿ ಗೆದ್ದುಬಂದ ಸೋಮಣ್ಣನಿಗೆ ಆಪರೇಷನ್ ಕ'ಮಲ' ಮಾಡಿ ಬಿಜೆಪಿಗೆ ಕರೆದುತಂದರು. ಆನಂತರ ಮೂಲ ಬಿಜೆಪಿಗರನ್ನು ನಿರ್ಲಕ್ಷಿಸಿ ಸೋಮಣ್ಣನನ್ನು ಮಂತ್ರಿ ಮಾಡಿ ಚೆಡ್ಡಿ ಶಾಸಕರ ಕೆಂಗಣ್ಣಿಗೆ ಗುರಿಯಾದರು. ಉಪ ಚುನಾವಣೆಯಲ್ಲಿ ಸೋಮಣ್ಣ ಸೋತರೂ ಮತ್ತೆ ಅವರನ್ನು ವಿಧಾನಪರಿಷತ್ತಿಗೆ ನಾಮಕರಣ ಮಾಡಿ ಅವರನ್ನು ಮಂತ್ರಿ ಮಾಡಿ ಸ್ವಜಾತಿ ಪ್ರೇಮವನ್ನು ಮತ್ತು ಸೋಮಣ್ಣನ ಮೇಲಿನ ಅಭಿಮಾನವನ್ನು ಯಡಿಯೂರಪ್ಪ ಜಗಜ್ಜಾಹೀರುಗೊಳಿಸಿದರು. ಈಗ ತಾನು ಅಧಿಕಾರದಲ್ಲಿ ಇಲ್ಲದಿದ್ದರೂ ತನ್ನ ಆಪ್ತ ಸೋಮಣ್ಣನನ್ನು ಬಲವಂತವಾಗಿ ಮಂತ್ರಿಮಂಡಲದ ಒಳಗೆ ತುರುಕಿ ಮತ್ತೊಮ್ಮೆ ಮೂಲ ನಿವಾಸಿಗಳ ಆಕ್ರೋಶಕ್ಕೆ ಒಳಗಾಗಿದ್ದಾರೆ. ಸೋಮಣ್ಣ ನಿಜಕ್ಕೂ ಬಿಜೆಪಿ ಪಕ್ಷವನ್ನು ಸರ್ವನಾಶ ಮಾಡಲು ಬಂದಿದ್ದಾರೆ ಎಂಬುದು ಅನೇಕ ಚೆಡ್ಡಿ ಶಾಸಕರ ಅಭಿಪ್ರಾಯ.

ಈಗ ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿರುವ ಸುದ್ದಿಯೆಂದರೆ ಸದಾನಂದ ಗೌಡರ ವೇಗಕ್ಕೆ ಬ್ರೇಕ್ ಹಾಕಲೆಂದೇ ಸೋಮಣ್ಣನನ್ನು ರೆಡ್ಡಿ ಛೂ ಬಿಟ್ಟಿದ್ದಾರಂತೆ. ಪಕ್ಷದ ರಾಜಕೀಯದ ಆಟಗಳು ಏನೇ ಇರಲಿ, ಒಂದು ಮಾತಂತೂ ನಿಜ. ಲೋಕಾಯುಕ್ತ ವರದಿ ಬಂದ ನಂತರವೂ ಸೋಮಣ್ಣನನ್ನು ಮಂತ್ರಿಮಂಡಲಕ್ಕೆ ಸೇರಿಸಿದ್ದು ನಿಜಕ್ಕೂ ನಾಚಿಕೆಗೇಡು. ಈಗ ಅದನ್ನೇ ನೆಪವಾಗಿಟ್ಟುಕೊಂಡು ಖದೀಮ ರೆಡ್ಡಿಗಳೂ ಸಚಿವ ಸಂಪುಟಕ್ಕೇ ತೂರಿಕೊಳ್ಳುತ್ತಿರುವುದು ಹೇಸಿಗೆ ಹುಟ್ಟಿಸುವ ರಾಜಕಾರಣ.

- ಶೇ

...ೋನಿಯಾಗೆ ಕ್ಯಾನ್ಸರ್?

<<<

...ಲ್ಲೂ ವಿಶೇಷವಾಗಿ ಪ್ರಧಾನಿಯಾಗುವ ಉಮೇದಿ ...ಎಲ್.ಕೆ.ಅಡ್ವಾಣಿ ಕಾಂಗ್ರೆಸ್ ನಾಯಕರ ಸಾವನ್ನೂ ...ಮಿಸುವಂಥ ಕೀಳುಮಟ್ಟದ ರಾಜಕೀಯಕ್ಕೆ ಮೊರೆ ...ಗಿದ್ದು ಅಸಹ್ಯದ ಇತಿಹಾಸ. ಇದೇ ಭರದಲ್ಲಿ ...ಮುವಾದ ಕೈಗೆತ್ತಿಕೊಂಡ ಅಡ್ವಾಣಿ ದೇಶಾದ್ಯಂತ ...ಬ್ಬಿಸಿ ಅಖಂಡ ಹಿಂದೂ ರಾಷ್ಟ್ರವೆಂಬ ಸಂವಿಧಾನ



ವಿರೋಧಿ ಬತ್ತಳಿಕೆ ಹಿಡಿದು ಹೊರಟರೆ ಇತರೆ ಪಕ್ಷಗಳು ಅದರಲ್ಲಿರ ಬಹುದಾದ ಬಾಣಗಳನ್ನು ಕಲ್ಪಿಸಿಕೊಂಡೇ ಕುಸಿದು ಹೋಗಿದ್ದವು. ಅದಕ್ಕೆ ಎದೆಯೊಡ್ಡುವ ...ದ್ದ ಕಾಂಗ್ರೆಸ್ ಅಕ್ಷರಶಃ ಶವಾಸನ ಹಾಕಿತ್ತು. ...ಸ್ಥಿತಿಯಲ್ಲಿದ್ದ ಕಾಂಗ್ರೆಸ್ ಮೇಲೆರಗುವ ...ಹ ಅಡ್ವಾಣಿಗಿತ್ತು.

...ೋನಿಯಾ ಗಾಂಧಿ ಅದಕ್ಕೆ ಅವಕಾಶವನ್ನೇ ಕೊಡ ...ಕಾಂಗ್ರೆಸ್‌ಗೆ ಉಸಿರು ನೀಡಿದ್ದರು. ಇದರಿಂದಾಗಿಯೇ ...ಯ ಪ್ರಧಾನಿಯಾಗುವ ಕನಸಿಗೆ ಪದೇಪದೇ ...ಗಳು ಬಿದ್ದವು. ಆದುದರಿಂದಲೇ ಸೋನಿಯಾ ... ಭಾರತದ ದೇಶಭಕ್ತರೆಲ್ಲರ ಪಾಲಿಗೆ ಅಖಂಡ ...ೂ ರಾಷ್ಟ್ರದ ಭಂಜಕಿಯಂತೆಯೇ ಕಾಣಿಸಲಾರಂಭಿಸಿ ...ಈಗ ಆಕೆ ಕಾಯಿಲೆ ಬಿದ್ದು ಹಾಸಿಗೆ ಹಿಡಿದಾಗಲೂ ...ಳ್ಳೆಯಂತೆ ಬಾಣ ಹೂಡುತ್ತಿದ್ದಾರಲ್ಲಾ ದಗಲ್ಬಾಜಿ ...ಭಕ್ತರು? ಅದಕ್ಕೂ ಕೂಡಾ ಈ ಅಸಹನೆಯೇ ...ಖ ಕಾರಣ.

...ಾಗಂತ ಕಾಂಗ್ರೆಸ್ ಅನ್ನು ಕಳಂಕರಹಿತ ಪಕ್ಷ ಅಂತ



...ೊಳ್ಳಬಹುದಾದ ಯಾವ ಪರಿಸ್ಥಿತಿಯೂ ಈಗಿಲ್ಲ. ...ಪಕ್ಷವೀಗ ಅಕ್ಷರಶಃ ಭ್ರಷ್ಟಾಚಾರ, ಒಳಸಂಚುಗಳ ...ಮುಲ್ಲಿ ಬೋರಲು ಬಿದ್ದಿದೆ. ಖುದ್ದು ಸೋನಿಯಾ ...ಯೇ ಕಷ್ಟಪಟ್ಟು ಬೆಳೆಸಿದ ಕಾಂಗ್ರೆಸ್ ಆಕೆಯ ...ರೇಖಿಯಲ್ಲೇ ಭ್ರಷ್ಟಾಚಾರದ ಕೆಸರಿಗಿಳಿಯಿತಲ್ಲಾ ...ೊಂದು ವಿಷಾದ ಆವರಿಸುವಂಥ ವಾತಾವರಣ ...ದ್ದು.

...ದೆಲ್ಲ ಏನೇ ಇದ್ದರೂ ಸಹ ಸೋನಿಯಾರ ...ಲೆಯ ಬಗ್ಗೆ ವಿಕೃತ ಊಹಾಪೋಹಗಳನ್ನು ...ಡುತ್ತಿರುವ ದೇಶಭಕ್ತರ ಸಂಚು ಎಲ್ಲರಿಗೂ ...ವಾಗಬೇಕಿದೆ. ಇವರ ಮನಸ್ಸು, ವಿಚಾರ, ಅಜೆಂಡಾ ... ಸೋನಿಯಾರ ದೇಹಕ್ಕಂಟಿದ ಕ್ಯಾನ್ಸರ್‌ಗಿಂತಲೂ ...ಮಕಾರಿ ಎಂಬುದನ್ನು ಪ್ರತಿಯೊಬ್ಬರೂ ಮನದಟ್ಟು ...ಕೊಳ್ಳಬೇಕಿವೆ.

...ಜೆಪಿ ಸೇರಿದಂತೆ ಹಿಂದೂತ್ವದ ಬಗ್ಗೆ ಒದರುವ ... ಮಹಿಳೆಯರ ಬಗ್ಗೆ ವಿಪರೀತ ಗೌರವ ...ರ್ಶಿಸುತ್ತಾರೆ. ಮಾತೆ, ಅದೂ ಇದೂ ಅಂತೆಲ್ಲ ...ಟ್ಟೆ ಭಾಷಣ ಕುಟ್ಟುವವರಿಗೂ ಬರವಿಲ್ಲ. ಇದೇ ... ಮಹಿಳೆಯೊಬ್ಬಳು ಸಾವುಬದುಕಿನ ನಡುವೆ ...ರಾಡುತ್ತಿದ್ದರೆ ಅಸಹ್ಯಕಾರಿ ಕಥೆ ಕಟ್ಟಿ ಹರಿಬಿಡು ...ರೆ! ಇದು ಅವರ ಅಸಲಿಯತ್ತು.

...ಜೆಪಿ ಬಾಯಿಂದ ಪದೇಪದೇ ಭಾರತವನ್ನು ...ದರಲ್ಲಾ ಸೋನಿಯಾ? ಅದಕ್ಕಾದರೂ ಭಾರತೀಯರು ... ಋಣಿಯಾಗಿರಬೇಕು. ಈ ದೇಶಭಕ್ತರದ್ದು ವಿಶ್ವದ ...ಕೀಯ ಜಗತ್ತಿನ ಯಾವ ಸಂಶೋಧನೆಗಳಿಗೂ ...ಕದಂಥ ಕಾಯಿಲೆ. ಅವರ ಬಗೆಗೊಂದು ...ವಿಟ್ಟುಕೊಂಡೇ ಸೋನಿಯಾ ಬೇಗನೆ ಗುಣಮುಖ ...ೆಂದು ಹಾರೈಸೋಣ!

ಈ ಪೂಜಾರಿಗೆ ಸಮ ಇಲ್ಲ ಅಂತ ಹೇಳಿದರು ಗೊತ್ತುಂಟ

ಸಾಮಾನ್ಯವಾಗಿ ಜೈಲಿಗೆ ಹೋಗುವವರು ಕೊಲೆಗಾರರು, ದರೋಡೆಕೋರರು ಮಾತ್ರ. ಮೂರು ಕಾಸಿಗೆ ಕೊಂಡು ಆರುಕಾಸಿಗೆ ಮಾರುವ ವ್ಯವಹಾರಸ್ಥರು ಎಂದೂ ಜೈಲು ಪಾಲಾಗಲಾರರು ಎಂದು ಬಲವಾಗಿ ನಂಬಿದ್ದ ಕಟ್ಟಾ ಸುಬ್ಬ ಬೇಲ್ ಸಿಗದೆ ಜೈಲು ಪಾಲಾಗುವುದು ಖಚಿತವಾಗುತ್ತಿದ್ದಂತೆ ಹೆದರಿ ನಡುಗಿಹೋದನಂತಲ್ಲಾ. ನಂತರ ಜೈಲಿನ ಕೋಣೆಗೆ ಹೋಗುತ್ತಿದ್ದಂತೆಯೇ ಕಳ್ಳ ಮಗನ ಮೇಲೆ ಕಡುಗೋಪ ಬಂದು "ಏಮು ಪುಟ್ಟಾವರ ನಾ ಕಡುಪುಲೂ. ನೀನಿಂಕ ನೇನು ಜೈಲು ಪಾಲೈತಿಕದ್ರ ಮುಂಡಾಕೊಡುಕ" ಎಂದು ಮುಖಮುಖದ ಮೇಲೆ ಹೊಡೆದನಂತಲ್ಲಾ. ಸುಧಾರಿಸಿಕೊಂಡನಂತರ ಅನಾರೋಗ್ಯದ ನಿಮಿತ್ತ ಬೇಲು ಸಿಗಬೇಕಾದರೆ, ಏನನ್ನ ತಿನ್ನದೆ ಉಪವಾಸವಿರಬೇಕೆಂದು ಕಟ್ಟಾ ನಿರ್ಧರಿಸಿನಂತಲ್ಲಾ. ಮನೆಯಿಂದ ತೆಗೆದುಕೊಂಡು ಹೋದ ಊಟವನ್ನೇ ಮುಟ್ಟದೆ ಬರೀ ಹುರಿದ ಕರಿದ ಹಾಳೂಮೂಳನ್ನ ತಿಂದು ಇನ್ನೇನು ಸತ್ತೇ ಹೋಗುವಂತೆ ಕಣ್ಣು ಬಿಡಲಾಗಿ ಕಟ್ಟಾ ವಕೀಲ ಹೈಕೋರ್ಟಿಗೆ ಬೇಲರ್ಜಿ ಹಿಡಿದು ಓಡಿದನಂತಲ್ಲಾ, ಥೂತ್ತೇರಿ!

*****

"ಕಳಬೇಡ, ಕೊಲಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ- ಈ ವಚನಗಳನ್ನು ಪ್ರತಿದಿನ ಬೆಳಗ್ಗೆ ಪಠಿಸಿ ನಂತರ ಮುಂದಿನ ಕೆಲಸ ಆರಂಭಿಸಿ ಎಂದು ಎಡೂರಪ್ಪನಿಗೆ ಹೇಳಿದ್ದೆ. ಆದರೂ ನನ್ನ ಮಾತು ಕೇಳದೆ ಅಧಿಕಾರ ಕಳೆದುಕೊಂಡರು" ಎಂದು ನಾಡೋಜ ದೇಜಗೌ ಒಳಗೊಳಗೆ ನಗುತ್ತ ವಿಷಾದಿಸಿದರಂತಲ್ಲಾ.

ಇನ್ನು ಕೃಷ್ಣಯ್ಯ ಶೆಟ್ಟಿ ಎಂಬ ಬಫೂನನ ಪ್ರಕಾರ "ನಾನು ಮಂತ್ರಿಯಾಗಿದ್ದಾಗ ರಾಜ್ಯದ ಎಲ್ಲಾ ದೇವಸ್ಥಾನದಲ್ಲಿ ಪ್ರತಿದಿನ ಎಡೂರಪ್ಪನ ಹೆಸರೇಳಿ ಅರ್ಚನೆ ಮಾಡಿ ಎಂದು ಆಜ್ಞೆ ಹೊರಡಿಸಿದ್ದೆ ಯಾರೂ ನನ್ನ ಆಜ್ಞೆಯನ್ನು ಅನುಷ್ಠಾನಕ್ಕೆ ತರಲಿಲ್ಲ, ಆದ್ದರಿಂದ ಎಡೂರಪ್ಪ ನನ್ನಂತಾಗುವಂತಾಯ್ತು" ಎಂದನಂತಲ್ಲ.

ದೇವೇಗೌಡರ ದೈವಭಕ್ತ ಕಾರ್ಯಕರ್ತರ ಪ್ರಕಾರ "ಈ ಎಡೂರಪ್ಪ ಧರ್ಮಸ್ಥಳಕ್ಕೆ ಆಣೆ ಮಾಡಲು ಬರುತ್ತೇನೆಂದು ತಪ್ಪಿಸಿಕೊಂಡಿದ್ದೆ ಎಫೆಕ್ಟಾಯ್ತು" ಎಂದು ಚರ್ಚಿಸುತ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆಯವರ ಅವಿರತ ಶ್ರಮದ ವರದಿಯನ್ನೇ ಮರೆತು ಹರಟುತ್ತಿವೆಯಂತಲ್ಲಾ, ಥೂತ್ತೇರಿ!!

*****

ಅತ್ತ ಸೋನಿಯಾ ಗಾಂಧಿ ಎಂಬ ಕಾಂಗ್ರೆ ದೇವತೆಗೆ ಬರಬಹುದಾಗಿದ್ದ ಏಡೀಹುಣ್ಣನ್ನು ಅಮೆರಿಕದ ವೈದ್ಯರು ಎರೆದು ತೆಗೆಯುತ್ತಿರಬೇಕಾದರೆ, ಇತ್ತ ದಕ್ಷಿಣ ಕನ್ನಡದ ಕಾಂಗ್ರೆ ಪೂಜಾರಿ ದೇವಸ್ಥಾನಕ್ಕೆ ಹೋಗಿ ಉರುಳು ಸೇವೆ ಮಾಡಿದರಂತಲ್ಲಾ. ಇರಲಾರದು ಎಂದು ಅನುಮಾನಿಸುತ್ತ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್‌ಟೋನ್: "ಓಂ ಆದಿಶಕ್ತಿಯೇ ನಮಃ ಓಂ ಪರಾಶಕ್ತಿಯೇ ನಮಃ..."

"ಹಲೋ ಯಾರು?"

"ನಾನು ಸಾರ್ ಯಾಹೂ."

"ಇಷ್ಟು ದಿನ ಎಲ್ಲಿ ಹೋಗಿದ್ದು ನೀವು?!"

"ಎಲ್ಲೂ ಹೋಗಿಲ್ಲ ಸಾರ್. ನೀವ್ಯಾಕಿಂಗಾದ್ರಿ?"

"ಯಂತ ಆಗಿದ್ದು?"

ಥೂತ್ತೇರಿ ಯಾಹೂ

"ಸದಾನಂದಗೌಡ ಮುಖ್ಯ ಮಂತ್ರಿಯಾದ ಕೂಡ್ಲೆ ಅವರು ನಮ್ಮ ದಕ್ಷಿಣ ಕನ್ನಡದ ಸಮಗ್ರ ಅಭಿವೃದ್ಧಿಗೆ ಶ್ರಮಿಸಬೇಕು ಅಂತ ಹೇಳಿದ್ರಿ ನೀವು."

"ಹೌದು ಆದರಲ್ಲಿ ತಪ್ಪೇನು?"

"ಆದರಲ್ಲಿ ಏನೂ ತಪ್ಪಿಲ್ಲ ಅನ್ನದಾದ್ರೆ ನಾನೇನೂ ಹೇಳಕ್ಕಾಗಲ್ಲ. ನೀವು ರಾಜ್ಯದಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ರಿ. ಕೇಂದ್ರದಲ್ಲಿ ಹಣಕಾಸಿನ ಮಂತ್ರಿಯಾಗಿ ಮೂರು ಸಾವಿರ ಪೂಜಾರಿ ಲೋನ್ ಕೊಟ್ರಿ."

"ಅದೌದು. ಈವತ್ತು ಯಾರು ನೆನಸ್ತರೆ?"



"ನೆನಸದೇ ಇರದೆ ಒಳ್ಳೆದು. ಅದರಿಂದ ಯಾರೂ ಉದ್ಧಾರಾಗಿಲ್ಲ."

"ಅದನ್ನ ಹೇಗೆ ಹೇಳ್ತೀರಿ ನೀವು?"

"ನಾನೇ ಇದ್ದಿನಲ್ಲ, ಪಾಕೆಟ್ ಮನಿ ತರ ಖರ್ಚಾಯ್ತು. ವಿಷಯ ಅದಲ್ಲ, ಸಮಗ್ರ ಕರ್ನಾಟಕದ ಬಗ್ಗೆ ಮಾತನಾಡಬೇಕಾದ ನೀವು ಸದಾನಂದ ಗೌಡ್ರಿಗೆ ಪ್ರಾದೇಶಿಕ ಅಭಿವೃದ್ಧಿ ಬಗ್ಗೆ ಸಂಕುಚಿತವಾದ ಸಲಹೆ ಕೊಡ್ತಿರಲ್ರಿ."

"ಅದು ಮಾತಿಗೆ ಹೇಳಿದ್ದು. ನಾನು ಹೇಳಿದ ಕೂಡಲೇ ಅಭಿವೃದ್ಧಿ ಆಯ್ತಾ?"

"ಮಾತಿಗೆ ಹೇಳದೇ ಬಹಳ ಮುಖ್ಯ. ನೀವು ದಕ್ಷಿಣ ಕನ್ನಡದವರು ಇದ್ದಿರಲ್ಲಾ ನಿಮಗೆ ಮಾತ್ರ ಇಂಥ ಮಾತು ಸಾಧ್ಯ."

"ನೀವು ಘಟ್ಟದ ಮೇಲೆ ಇದ್ದು ಹಾಗೆ ಹೇಳುವುದು ಬೇಡ. ಇಲ್ಲಿ ಬಂದು ಒಂದು ವಾರ ಇದ್ದರೆ ಸಾಕು ನಮ್ಮ ಮಂಗಳೂರು ಅಂತ ಹೇಳುವುದುಂಟು."

"ನಾನು ಸತ್ರೂ ಅಂಗೇಳಲ್ಲ ಸಾರ್. ಯಾವತ್ತಿಗೂ ರಾಜಕಾರಣ ಮಾಡೋರಿಗೆ, ಪ್ರಾದೇಶಿಕವಾದ ಅಸಮತೋಲನ ಎದ್ದು ಕಾಣಬೇಕು. ಬರಗಾಲದ ಪ್ರದೇಶ ಕಾಣಬೇಕು. ಪ್ರವಾಹ ಸಂತ್ರಸ್ತರ ಏರಿಯಾ ಕಾಣಬೇಕು. ಹೆತ್ತ ತಾಯಿಗೆ ತನ್ನ ದುರ್ಬಲ ಮಕ್ಕಳು ಯಾರು, ಬಲಿಷ್ಟ ಮಕ್ಕಳ್ಯಾರು ಅನ್ನದು ಗೊತ್ತಾಗೋ ತರ ರಾಜಕಾರಣಿಗೂ ಗೊತ್ತಾಗಬೇಕು. ಅಂತದ್ರಲ್ಲಿ ನೀವು ಕೆಟ್ಟ ಕೆರ ಹಿಡದ ರಾಜಕಾರಣಿ ತರ ಸದಾನಂದಗೌಡರು ದ.ಕ.ಅಭಿವೃದ್ಧಿ ಮಾಡಬೇಕು ಅಂತಿರಲ್ರೀ."

"ಕೆಟ್ಟ ಕೆರ ಹಿಡಿದ ರಾಜಕಾರಣಿ ಅಂತ ಹೇಳುವುದು ಬೇಡ."

"ಕೆಸರು ಕಂಡಲ್ಲಿ ಬಿದ್ದು ಉರುಳಾಡೋ ರಾಜಕಾರಣಿ ಅಂತ ಹೇಳಬಹುದಾ?"

"ಹಾಗೆ ಏಕೆ ಹೇಳುವುದು?"

"ಯಾಕೆ ಅಂದ್ರೆ ಅದನ್ನ ಕಣ್ಣಾರೆ ನೋಡಿದೆ ನಾನು. ಸೋನಿಯಾ ಗಾಂಧಿಗೆ ಉಷರಾಗ್ಲಿ ಅಂತ ಅದ್ಯಾವುದೋ ದೇವಸ್ಥಾನದ ಸುತ್ತ ಬಿದ್ದು ಉರುಳುತಿರಲ್ರೀ. ಯಾರೋ ಅಲ್ಲಿ ಮುರುದು ಬಿಸಾಕಿರೊ ಚಕ್ಕಳಿ ತರ ಕಸ್ರತ್ ಮಾಡಿದ್ರು ಗೊತ್ತಾ."

"ನಮ್ಮ ಭಕ್ತಿಯನ್ನು ಹೀಯಾಳಿಸುವುದಕ್ಕಾಗಿ ನೀವು ಸುಳ್ಳು ಹೇಳುವುದು ಬೇಡ."

"ಬಿದ್ದು ಉರುಳಾಡದನ್ನ ಭಕ್ತಿ ಅಂತಿರಲ್ಲರೀ. ನಿಮ್ಮಂತ ಪ್ರಬುದ್ಧ ರಾಜಕಾರಣಿಗಳು, ಮುಗ್ಧ ಜನಕ್ಕೆ ಭಕ್ತಿ ಮಾರ್ಗದ ವಿಶೇಷತೆ ಹೇಳಬೇಕು. ನಿಮ್ಮ ಗಣಬಂದ ಪೂಜಾರಿ ಅವತಾರ ನೋಡಿದ ದಕ್ಷಿಣ ಕನ್ನಡದ ಜನ ಏನಂದ್ರು ಗೊತ್ತಾ? 'ಈ ಪೂಜಾರಿಗೆ ಸಮ ಇಲ್ಲ ಮಾರಾ ಯರೆ' ಅಂದ್ರು. ನಿಮ್ಮ ಗೆಳೆಯರಾದ ನಮಗೆ ಎಂತಹ ಅವಮಾನ."

"ಸಮ ಇಲ್ಲ ಅಂತ ಹೇಳಿದವರ ಬಗ್ಗೆ ಮಂಡೆ ಬಿಸಿ ಮಾಡಿಕೊಳ್ಳುವುದು ಬೇಡಿ. ನಮ್ಮ ನಾಯಕಿ ಉಷರಾಗಿ ಬರಲಿ ಅಂತ ನಾವು ಹರಕೆ ತೀರಿಸಿದರೆ ಅದರ ಬಗ್ಗೆ ಹೇಯವಾಗಿ ಮಾತನಾಡುವವರು ಯಾರು ಅಂತ ನಮಗೆ ಗೊತ್ತುಂಟು. ಎಡೆಯೂರಪ್ಪ ಅಧಿಕಾರದಲ್ಲಿ ಉಳಿಯಲಿ ಅಂತ ಹೋಮ ಮಾಡಿದರು, ಯಾಗ ಮಾಡಿದರು, ಗೋಪೂಜೆ ಮಾಡಿದರು, ಚಾಮುಂಡಿ ಬೆಟ್ಟ ಹತ್ತಿದರು, ತಿರುಪತಿಗೆ ಹೋಗಿ ಬಂದರು, ಕಂಡಕಂಡವರಿಗೆಲ್ಲ ಸಿಹಿ ಹಂಚಿದರು. ಇದೆಲ್ಲ ನಿಮಗೆ ಕಾಣಲಿಲ್ಲವಾ?"


"ಕಂಡಿದ್ದಷ್ಟೇ ಅಲ್ಲ ಸಾರ್ ಸಿಹಿ ಈಸಕೊಂಡು ನಾವು ತಿಂದಿದ್ದಿವಿ. ಇನ್ನು ತಿಂತಾಯಿದ್ದಿವಿ. ಆದರೆ ನಿಮ್ಮ ತರ ಯಾರೂ ಬೀದಿಲಿ ಬಿದ್ದುಕೊಂಡು ಉರುಳುಸೇವೆ ಮಾಡಲಿಲ್ಲ."

"ಇರಬಹುದು. ಆದರೆ ಸೋನಿಯಾಜಿ ಬಂದಾಗ ನಮ್ಮ ಡೆಲ್ಲಿ ಕಾರ್ಯಕರ್ತರು 'ಅಮ್ಮಾ ನಿಮ್ಮ ಆಪರೇಷನ್ ಸಕ್ಸೆಸ್ ಆಗಲಿ ಅಂತ ಪೂಜಾರಿಯವರು ದೇವಸ್ಥಾನದ ಸುತ್ತ ಉರುಳು ಸೇವೆ ಮಾಡಿದರು' ಅಂತ ಹೇಳಿದಾಗ, ಮೇಡಂ ಮಂದಹಾಸ ಬೀರಿ ನನ್ನ ಕಡೆ ಆಶೀರ್ವಾದದ ದೃಷ್ಟಿ ಬೀರುವುದುಂಟಲ್ಲ ಅಷ್ಟು ಸಾಕು. ಮುಂದಿನ ಚುನಾವಣೆಗೂ ನಾನೇ ಅಭ್ಯರ್ಥಿ."

"ಥೂತ್ತೇರಿ!!!"

ಈ ದೇಶದ ಸ್ವಾತಂತ್ರ್ಯ ಹೋರಾಟದತ್ತ ಒಂದು ನೋಟ ಬೀರಿದರೆ ಅದರಲ್ಲಿ ಕಾನೂನುಬದ್ಧ ಹಾಗೂ ಮಹಾನಾಯಕರ ಜನಾಂದೋಲನ ಚಳವಳಿಗಳೊಂದಿಗೆ ಸಮಾನಾಂತರವಾಗಿಯೇ ನಡೆದ ತರುಣ ಕ್ರಾಂತಿಕಾರಿಗಳ, ಆದಿವಾಸಿಗಳ ರಕ್ತಸಿಕ್ತ ಹೋರಾಟಗಳು ನಮ್ಮ ಮುಂದೆ ನಿಲ್ಲುತ್ತವೆ. ಸ್ವಾತಂತ್ರ್ಯಗಂಗೆಗೆ ಉಪನದಿಗಳಾಗಿ ಈ ಕೆಂಪು ಹೊಳೆಗಳು ಬಂದುಸೇರಿವೆ. ಆ ಹೊಳೆಗಳಲ್ಲಿ ಹರಿದದ್ದು ಕೆಂಪು ನೀರಲ್ಲ; ನಿಜ ನೆತ್ತರು. ಭಾರತಾಂಬೆಯ ಬಿಡುಗಡೆಗೆ ತಮ್ಮನ್ನು ತಾವೇ ಬಲಿಕೊಟ್ಟುಕೊಂಡ ಮಹಾವೀರರ ಬಿಸಿ ನೆತ್ತರು. ಅದು ಜೀವದ ಹಂಗು ತೊರೆದ ಹೋರಾಟ. ಸೋಲು, ಸಾವು ಖಂಡಿತ ಎಂದು ತಿಳಿದಿದ್ದರೂ ರಣರಂಗದೊಳಗೆ ಧುಮುಕಿ ವೀರಮರಣವನ್ನಪ್ಪಿದ ಅಭಿಮನ್ಯರು ನೂರಾರು. ಇಂಥವರನ್ನು ಆಳುವ ವರ್ಗದ ಚರಿತ್ರೆಯಲ್ಲಿ ಕಾಣಲಾರೆವು. ಆದರೆ ಜನರಾಡುವ ಜನಪದ ಕಾವ್ಯದ ವೀರಗಾಥೆಯೊಳಗೆ ನಾಡಿನುದ್ದಗಲಕ್ಕೂ ಶಾಶ್ವತವಾಗಿ ನೆಲೆ ನಿಂತಿದ್ದಾರೆ. ಅಲ್ಲೂರಿ ಸೀತಾರಾಮರಾಜು, ಸಂಗೊಳ್ಳಿ ರಾಯಣ್ಣ, ದೋಂಡಿಯಾವಾಘ, ಅಪರಂಪರ, ಸುರಪುರ ವೆಂಕಟಪ್ಪ ನಾಯಕ, ನರಗುಂದದ ಬಾಬಾ ಸಾಹೇಬ, ಮುಂಡರಗಿ ಭೀಮರಾಯ, ಮೈಲಾರ ಮಹಾದೇವ ಹಲಗಲಿಯ ಬೇಡ ವೀರರು ಇಂಥವರ ಸಾಲಿನಲ್ಲೇ ನಿಲ್ಲುವ ಇನ್ನೊಂದು ಹೆಸರು ಸಿಂಧೂರ ಲಕ್ಷ್ಮಣ.

ಸಿಂಧೂರಾಗ ಲಕ್ಷ್ಮಣ ಹುಟ್ಯಾನ ಭಂಟ ಅನಿಸ್ಯಾನ
ಕೊಟ್ಟ ವಚನ ಅವ ಎಂದೂ ತಪ್ಪಲಿಲ್ಲ
ಘಟಾ ಹೋಗುತನಕಾ ಹಿಡಿದ ಹಠ ಬಿಡಲಿಲ್ಲ
ಎಂಥಾ ತಾಯ ಹೊಟ್ಟೀಲಿ ಹುಟ್ಟಿದಾನೋ ಪ್ರಬಲ॥



ಭಾರತ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಕರ್ನಾಟಕದ ಕಲಿ ವೀರ ಸಿಂಧೂರ ಲಕ್ಷ್ಮಣನ ಬದುಕಿನ ಕುರಿತು ಲೇಖನ ಇಲ್ಲಿದೆ. ಇಂಥವರನ್ನು ಆಳುವ ವರ್ಗದ ಚರಿತ್ರೆಯಲ್ಲಿ ಕಾಣಲಾರೆವು. ಆದರೆ ಜನರಾಡುವ ಜನಪದ ಕಾವ್ಯದ ವೀರಗಾಥೆಯೊಳಗೆ ನಾಡಿನುದ್ದಗಲಕ್ಕೂ ಶಾಶ್ವತವಾಗಿ ನೆಲೆ ನಿಂತಿದ್ದಾರೆ. ಅಲ್ಲೂರಿ ಸೀತಾರಾಮರಾಜು, ಸಂಗೊಳ್ಳಿ ರಾಯಣ್ಣ, ದೋಂಡಿಯಾವಾಘ, ಅಪರಂಪರ, ಸುರಪುರ ವೆಂಕಟಪ್ಪ ನಾಯಕ, ನರಗುಂದದ ಬಾಬಾ ಸಾಹೇಬ, ಮುಂಡರಗಿ ಭೀಮರಾಯ, ಮೈಲಾರ ಮಹಾದೇವ, ಹಲಗಲಿಯ ಬೇಡ ವೀರರು ಇಂಥವರ ಸಾಲಿನಲ್ಲೇ ನಿಲ್ಲುವ ಇನ್ನೊಂದು ಹೆಸರು ಸಿಂಧೂರ ಲಕ್ಷ್ಮಣ.

ರಾಜೇಶ್

ಅಪ್ರತಿಮ ಸ್ವಾತಂತ್ರ್ಯ ಸೇನಾನಿ

ಸಿಂಧೂರ ಲಕ್ಷ್ಮಣ

ಜನಪದರು ಸಿಂಧೂರಲಕ್ಷ್ಮಣನ ವೀರಗಾಥೆಯನ್ನು ಹಾಡುವ ಪರಿಯಿದು. ಮಹಾರಾಷ್ಟ್ರದ ಜತ್ತ ಸಂಸ್ಥಾನದಲ್ಲಿ ಸಿಂಧೂರ ಒಂದು ಚಿಕ್ಕ ಹಳ್ಳಿ. ಆ ಹಳ್ಳಿಯ ಗೌಡರ ಬಳಿ ವಾಲಿ ಕಾರನಾಗಿದ್ದ ನಾಯಕರ ಸಾಬಣ್ಣ ಮತ್ತು ನರಸವ್ವ ದಂಪತಿಗಳಿಗೆ ಎರಡು ಹೆಣ್ಣು ಮಕ್ಕಳ ನಂತರ ಗಂಡು ಸಂತಾನವಿರಲಿಲ್ಲ. ನರಸವ್ವ ಸಂಬಂಧಿಕರ ರಾಮ ಎಂಬ ಹುಡುಗನನ್ನು ಸಾಕು ಮಗನಾಗಿ ಬೆಳೆಸುತ್ತಿದ್ದಳು. ಕೆಲ ವರ್ಷ ಗಳ ನಂತರ ಆಕೆಯ ಉದರದಲ್ಲೂ ಒಂದು ಗಂಡು ಜನಿಸಿತು. ರಾಮನ ತಮ್ಮನಾಗಿ ಭೂಮಿಗೆ ಬಂದ ಈ ಮಗುವಿಗೆ ಲಕ್ಷ್ಮಣ ಎರದು ಹೆಸರಿಟ್ಟರು. ಲಕ್ಷ್ಮಣ ವಾರಿಗೆಯ ಇತರೆ ಹುಡುಗರಿಗಿಂತ ಚುರುಕಾಗಿ ಬೆಳೆದ. ಹನ್ನೆರಡರ ಪ್ರಾಯದಲ್ಲಿ ಕಾಡಿಗೆ ಹೋಗಿ ಕಲ್ಲಿನಿಂದಲೇ ಮೊಲಗಳ ಬೇಟೆಯಾಡುತ್ತಿದ್ದ. ಒಂದು ಸಾರಿ ಕಾಡಿನಲ್ಲಿ ಮೇಯುತ್ತಿದ್ದ ಕುರಿ ಹಿಂಡಿನ ಮೇಲೆ ದಾಳಿ ಮಾಡಿದ ತೋಳವನ್ನು ಕಲ್ಲಿನಿಂದ ಹೊಡೆದು ನೆಲಕ್ಕುರುಳಿಸಿದ. ಆಗ ಅವನ ಸಾಹಸವನ್ನು ಕೊಂಡಾಡಿದ ಊರವರು ತಲೆಗೆ ಪೇಟ ಸುತ್ತಿ, ಕೊರಳಿಗೆ ಹಾರ ಹಾಕಿ, ಕೈಗೆ ಬೆಳ್ಳಿ ಕಡಗ ತೊಡಿಸಿ, ಗಾಡಿಯ ಮೇಲೆ ತೋಳದ ಮಗ್ಗುಲಲ್ಲೇ ನಿಲ್ಲಿಸಿ ಊರ ತುಂಬಾ ಮೆರವಣಿಗೆ ಮಾಡಿದರು.

ಅಕ್ಕಂದಿರಿಬ್ಬರು ಮದುವೆಯಾಗಿ ಬೇರೆ ಬೇರೆ ಊರಿನಲ್ಲಿ ನೆಲೆಸಿದ್ದರು. ಹದಿನೆಂಟರ ಹರೆಯದಲ್ಲಿ ಲಕ್ಷ್ಮಣನಿಗೆ ಅಕ್ಕ ನೇಸೂರಿನ ಸಕ್ರವ್ವನ ಮಗಳು ಚಂದ್ರವ್ವನನ್ನೇ ತಂದು ಮದುವೆ ಮಾಡಿದರು. ಅಪ್ಪನ ಮರಣಾನಂತರ ವಾಲೀಕಾರನ ಚಾಕರಿ ಲಕ್ಷ್ಮಣನ ಪಾಲಿಗೆ ಬಂತು. ಈ ಚಾಕರಿಗಾಗಿ ಸರ್ಕಾರ ಕೊಟ್ಟಿದ್ದ ತುಂಡು ಭೂಮಿಯಲ್ಲಿ ತಾಯಿ ಮತ್ತು ಹೆಂಡತಿ ಕೂಡಿ ದುಡಿದು ಬೆಳೆ ತೆಗೆಯುತ್ತಿದ್ದ. ಹೀಗಿರುವಾಗ ಒಂದು ವರ್ಷ ಮಳೆಯಾಗದೆ, ಯಾವ ಭೂಮಿಯಲ್ಲೂ ಬೆಳೆಯಾಗದೆ ರೈತ ಕೂಲಿಗಳೆಲ್ಲಾ ಕಂಗಾಲಾದರು. ಕೆರೆ, ಬಾವಿಗಳೆಲ್ಲಾ ಬತ್ತಿ ಕುಡಿಯಲು ನೀರಿಲ್ಲದಾಯಿತು. ಜನರಿಗೆ ಕೂಲಿಯೂ ಸಿಗದೆ, ಕೂಳೂ ಸಿಗದೆ ಉಪವಾಸ ಬೀಳುವಂತಾಯಿತು. ಇಂಥ ಸ್ಥಿತಿಯಿರಲು ಸರ್ಕಾರ ಮಾತ್ರ ಕಂದಾಯವನ್ನು ಬಲಾತ್ಕಾರವಾಗಿ ವಸೂಲಿ ಮಾಡಲಾರಂಭಿಸಿತು. ಅಧಿಕಾರಿಗಳು ರೈತರ ಭೂಮಿ, ಮನೆ ಜಪ್ತಿ ಮಾಡಲಾರಂಭಿಸಿದರು. ಜನರ ಆಸ್ತಿ, ಒಡವೆಗಳು ಶ್ರೀಮಂತರ ಪಾಲಾದವು.

ಲಕ್ಷ್ಮಣನ ಮನೆಯಲ್ಲೂ ಅಂದು ಊಟವಿಲ್ಲದೆ ಮೂವರು ಉಪವಾಸ ಮಲಗಿಕೊಂಡರು. ರಾತ್ರಿ ಬಹಳ ಹೊತ್ತಾಗಿತ್ತು, ನಾಯಿಗಳ ಬೊಗಳುವ ಸದ್ದಿನೊಂದಿಗೆ ಮನೆಬಾಗಿಲು ಬಡಿದ ಸದ್ದು ಕೇಳಿಸಿತು. ಲಕ್ಷ್ಮಣ ಕದ ತೆಗೆದು ನೋಡಿದರೆ ಗಾಬರಿಯಿಂದ ನಿಂತಿದ್ದ ರಡರಟ್ಟಿಯ ಅಕ್ಕನ ಮಕ್ಕಳಾದ ನರಸು, ಸಾಬು, ಗೋಪಾಲಿ. ಈ ನಡುರಾತ್ರಿ ಬಂದ ವಿಷಯ ಕೇಳಲಾಗಿ ಬರಗಾಲದ ಬದುಕಿಗಾಗಿ ಖಾನಾಪುರದ ಸಾಹುಕಾರನ ಮನೆ ದರೋಡೆ ಮಾಡಿದ್ದು, ಅದು ಪೋಲೀಸರಿಗೆ ತಿಳಿದು ಇವರ ಬೆನ್ನು ಹತ್ತಿದ್ದು, ರಾತ್ರೋರಾತ್ರಿ ಊರುಬಿಟ್ಟು, ಪರಾರಿಯಾಗಿ ಓಡಿಬಂದದ್ದನ್ನು ತಿಳಿಸಿದರು. ಅದ ಕೇಳಿದ ಲಕ್ಷ್ಮಣ "ದರೋಡೆಕೋರರಿಗೆ ತನ್ನ ಮನೆಯಲ್ಲಿ ಜಾಗವಿಲ್ಲ" ಎಂದು ಹೊರದೂಡಿ ಕದ ಹಾಕಿದ. ಆದರೆ ಹೆಂಡತಿ ಮಾತ್ರ ಅಣ್ಣಂದಿರ ಪರ ನಿಂತಳು. "ಬರಗಾಲ ಬಂದು ಜನ ಸಾಯುತ್ತಿರುವಾಗ ಸಿರಿವಂತರು ಮಾತ್ರ ತಿಂದುಂಡು ಸುಖದಿಂದಿರುವುದು ಯಾವ ನ್ಯಾಯ? ಈ ಜಗತ್ತಿನಾಗ ಭೂಮಿ, ನೀರು, ಗಾಳಿ, ಬೆಳಕು ಯಾವ ಶ್ರೀಮಂತನ ಸೊತ್ತೂ ಅಲ್ಲ; ನಮ್ಮೆಲ್ಲರ ಬೆವರಿನಲ್ಲೇ ಅವರ ಜೀವನ. ಅಲ್ಲದೆ ಪರಂಗಿ ಸರ್ಕಾರದ ಪರ ನಿಂತು ನಮ್ಮ ಮೇಲೆ ದಬ್ಬಾಳಿಕೆ ನಡೆಸುತ್ತಾರೆ. ಇಂಥ ಪಾಪಿಷ್ಠ ಶ್ರೀಮಂತರ ಮನೆ ಏಕೆ ದರೋಡೆ ಮಾಡಬಾರದು?" ಎಂದು ವಾದಿಸಿದಳು. ಅಜ್ಜಿ ನರಸವ್ವನ ಮಧ್ಯಸ್ಥಿಕೆಯಿಂದ ಮಾವನ ಮನೆಯಲ್ಲಿ ಆಶ್ರಯ ದೊರೆಯಿತು. ಆ ರಾತ್ರಿಯಿಡಿ ಲಕ್ಷ್ಮಣ ರೆಪ್ಪೆ ಮುಚ್ಚಲಿಲ್ಲ, ಒಂದೆಡೆ ಹಸಿವು ಇನ್ನೊಂದೆಡೆ ಹೆಂಡತಿ ಆಡಿದ ಮಾತು ಅವನ ನಿದ್ದೆ ಮಾಡಬಿಡಲಿಲ್ಲ, ರಾತ್ರಿಯಿಡೀ ಚಿಂತಿಸಿ, ಬೆಳಗಾಗುವಷ್ಟರಲ್ಲಿ ಅಳಿಯಂದಿರು ಮಾಡಿದ್ದೇ ಸರಿ ಎನಿಸಿತವನಿಗೆ.

ಸಿಂಧೂರಿನ ಭಾರೀ ಶ್ರೀಮಂತ ಹಿರೇಮಠದ ಸಿದ್ದಯ್ಯ ಊರಜನರ ಭೂಮಿ, ಒಡವೆ, ಎಲ್ಲಾ ಕಬಳಿಸಿದ್ದ. ಬೇಡರ ನಿಂಗಪ್ಪನ ಅಪ್ಪ ಮಾಡಿದ ಸಾಲಕ್ಕಾಗಿ ಒಡವೆ, ಆಸ್ತಿ ಎಲ್ಲ ಅವನ ಪಾಲಾಗಿ ತಂಗಿ ಮದುವೆಗಾಗಿ ಪರದಾಡುತ್ತಿದ್ದ. ಲಕ್ಷ್ಮಣ ಅವನೊಂದಿಗೆ ಸಿದ್ದಯ್ಯನ ಮನೆಗೆ ಬಂದು ಒಡವೆ ಮರಳಿ ಕೊಡುವಂತೆ ಕೇಳಿದ. ಆತ ಒಪ್ಪಲಿಲ್ಲ, ಮಾತಿಗೆ ಮಾತು ಬೆಳೆಯಿತು. "ಕೊಡಲಿಲ್ಲ ಅಂದರೆ ಏನು ಮಾಡುತ್ತೀಯ?" ಎಂದುದ್ದಕ್ಕೆ ಲಕ್ಷ್ಮಣ "ನಿನ್ನ ಮನೆ ದರೋಡೆ ಮಾಡಿ ಬಂಗಾರ ಹೊರತೆಗೆಯುತ್ತೇವೆ" ಎಂದು ಎಚ್ಚರಿಕೆ ಕೊಟ್ಟು ಬಂದ. ಸಾಹುಕಾರ ತನ್ನ ಆಳನ್ನು ಜತ್ತಿಗೆ ಕಳುಹಿಸಿ ಬೀಳೂರು ಕುಲಕರ್ಣಿ ಮನೆಯನ್ನು ಲಕ್ಷ್ಮಣನೇ ದರೋಡೆ ಮಾಡಿದ್ದೆಂದು ದೂರು ಕೊಡಿಸಿದ. ದರೋಡೆ ಮಾಡಿದ ರಡರಟ್ಟಿಯ ಹುಡುಗರು ಅಲ್ಲಿದ್ದದ್ದರಿಂದ ಲಕ್ಷ್ಮಣನೇ ದರೋಡೆ ಮಾಡಿದನೆಂದು ಆರೋಪಿಸಿ ಪೋಲೀಸರು ಅವನ ಕೈಗೆ ಬೇಡಿ ತೊಡಿಸಿ ವಿಚಾರಣೆಗಾಗಿ ಎಳೆತಂದರು.

ವಿಚಾರಣೆಯಲ್ಲಿ ನರರಾಕ್ಷಸರಂತಿದ್ದ ಶ್ರೀಮಂತರ ವಿರುದ್ಧ ಬ್ರಿಟಿಷ್ ಅಧಿಕಾರಿಗಳ ವಿರುದ್ಧ ಅವರ ರಕ್ಷಣೆಗೆ ನಿಂತಿದ್ದ ಪೋಲೀಸರ ವಿರುದ್ಧ ಕೆಂಡಕಾರಿದ. "ನಮ್ಮ ಹೋರಾಟ ಹಸಿವಿನಿಂದ ಪ್ರಾಣ ಬಿಡುವವರ ಸಲುವಾಗಿ, ಸಮುದ್ರ ದಾಟ ಬಂದು, ನಮ್ಮ ಸಂಸ್ಥಾನಿಕರನ್ನು ಕೀಲುಗೊಂಬೆಯಾಗಿ ಆಡಿಸುತ್ತಿರೋ ಪರಂಗಿ ಸರ್ಕಾರದ ವಿರುದ್ಧ" ಎಂದು ಸಮರ್ಥಿಸಿಕೊಂಡ. ಹೀಗೆ ಅರ್ಭಟಿಸುತ್ತಲೇ ಕೈಕೋಳ ಹರಿದು, ಆಳೆತ್ತರದ ಕಟ್ಟೆ ಜಿಗಿದು, ವಾಯುವೇಗದಲ್ಲಿ ಓಡಿ ಕಣ್ಮರೆಯಾದ. ದಾರಿಯಲ್ಲಿ ಮಾರುತಿ ಅವನ ಜತೆ ಸೇರಿದ. ಇಬ್ಬರೂ ಬಾಳೆಹಳ್ಳದ ದಟ್ಟಡವಿ ಸೇರಿದರು. ಬಾಳೆಹಳ್ಳದ ದಟ್ಟಡವಿಯಲ್ಲಿ ಅಡಗಿದ ಸುದ್ದಿ ತಿಳಿದ ಕಲಾಲ ಇನ್ಸ್‌ಪೆಕ್ಟರ್ ಸರ್ಕಾರದ ದಾದಾ ಸಾಹೇಬ ಕುದುರೆ ಏರಿ ಬಂದೂಕಿನೊಂದಿಗೆ ಮುತ್ತಿದರು. ಅವರಿಂದ ತಪ್ಪಿಸಿಕೊಂಡು ಓಡುತ್ತಿರುವಾಗ ದಾದಾ ಸಾಹೇಬ ಹಾರಿಸಿದ ಗುಂಡು, ಮಾರುತಿ ಬೆನ್ನ ಸೀಳಿ ಎದೆಯಲ್ಲಿ ಹೊರಟಿತು. ಆತ ಅರಚಿಕೊಂಡು ನೆಲಕ್ಕುರುಳಿದ. ಲಕ್ಷ್ಮಣ ಅಲ್ಲೇ ಕುಳಿತು ಸಂತೈಸತೊಡಗಿದ. ಪೋಲೀಸರ ದಂಡು ಸುತ್ತುವರಿಯಿತು. ಇನ್ಸ್‌ಪೆಕ್ಟರ್ ಕಲಾಲ ತನ್ನ ಕೈಲಿದ್ದ ಭರ್ಜಿಯಿಂದ ಲಕ್ಷ್ಮಣನ ತೊಡೆ ಸೀಳಿಬಿಟ್ಟ. ರಕ್ತ ಚಲ್ಲನೆ ಚಿಮ್ಮಿ ಮಣ್ಣನ್ನೆಲ್ಲ ಕೆಂಪಾಗಿಸಿತು. ಆ ಕೆಂಪು ಮಣ್ಣ ಹಿಡಿದ ಲಕ್ಷ್ಮಣ "ನಿನ್ನ ಎದೆ ಸೀಳಿ, ಈ ಭೂಮಿ ತಾಯಿಗೆ ರಕ್ತತರ್ಪಣ ಕೊಡದಿದ್ರೆ ನಾನು ಬೇಡರ ಸಾಬಣ್ಣನ ಮಗನೇ ಅಲ್ಲ" ಎಂದು ದಿಟ್ಟ ಪ್ರತಿಜ್ಞೆ ಮಾಡಿದ. ಚಿಕಿತ್ಸೆಯಾಗಿ ತೊಡೆ ಗಾಯ ಮಾಯ್ದ ನಂತರ ಜತ್ತಿ ಜೈಲಿನಲ್ಲಿ ಇರಿಸಲಾಯಿತು. ಈ ಸುದ್ದಿ ತಿಳಿದು, ತಲೆಮರೆಸಿಕೊಂಡಿದ್ದ ನರಸು, ಸಾಬು, ಗೋಪಾಲಿ ರಾತ್ರೋರಾತ್ರಿ ಜೈಲಿಗೆ ನುಗ್ಗಿ, ಲಕ್ಷ್ಮಣನನ್ನು ಪಾರು ಮಾಡಿಕೊಂಡು ಕಣ್ಮರೆಯಾದರು.

ಒಂದು ರಾತ್ರಿ ಸಾಹುಕಾರ ಸಿದ್ದಯ್ಯನ ಮನೆಗೆ ದಾಳಿಯಿಟ್ಟ ಗುಂಪು ನಗ-ನಾಣ್ಯ, ದವಸ-ಧಾನ್ಯ ಹೊರಗೆಳೆದು ಊರಜನಕ್ಕೆ ಹಂಚಿದರು.
ಕಲಾಲಸಾಹೇಬ ಬಿಜಾಪುರದಿಂದ ಇನ್ನೂರು ಜನ ಪೋಲೀಸ್ ಪಾರ್ಟಿ ತರಿಸಿ ಅವರು ದಾಳಿ ಮಾಡುತ್ತಿದ್ದ ಅಥಣಿ, ಜಮಖಂಡಿ, ಓಬಲೇಶ್ವರ, ಕಾಖಂಡಕಿ, ಕಂಕಣವಾಡಿಗಳಲ್ಲೆಲ್ಲ ಶೋಧಕಾರ್ಯ ನಡೆಸಿದ. ಆಗ ಒಂದು ದಿನ ಲಕ್ಷ್ಮಣ ತಾಯಿ ಹೆಂಡತಿ ಭೇಟಿಗಾಗಿ ಸಿಂಧೂರಿಗೆ ಹೋಗಿದ್ದ, ಆಗ ಪೋಲೀಸರು ಉಳಿದವರನ್ನು ಬೆನ್ನತ್ತಿದರು. ಅವರು ಓಡತೊಡಗಿದರು. ಮುಂದಿದ್ದ ನರಸು ಓಡುವ ಭರದಲ್ಲಿ ದೊಡ್ಡ ಬಾವಿಗೆ ಜಿಗಿದುಬಿಟ್ಟ. ಈಜಿ ದಡ ಸೇರಿದನಾದರೂ ಪೋಲೀಸರ ಕೈವಶನಾದ. ಕೆಲದಿನಗಳಲ್ಲಿ ಉಳಿದವರನ್ನು ಬಂಧಿಸಿ, ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿಟ್ಟರು. ಸರ್ಕಾರದ ವಿರುದ್ಧ ಸೆಡ್ಡು ಹೊಡೆದು ನಿಂತವರು ಜೈಲಿನಲ್ಲಿದ್ದು ಸಾಧಿಸಿದ್ದೇನು ಎಂದು ಚರ್ಚಿಸಿ ಒಂದು ಅಮಾವಾಸ್ಯೆಯ ರಾತ್ರಿ ಕಂಬಿಗಳನ್ನು ಮುರಿದು ಜೈಲಿಂದ ಹೊರಬಿದ್ದರು. ಬೆಳಗಾವಿ ನಗರ ದಾಟಿ, ಅರಭಾವಿ ಶ್ರೀ ಮಹಾಂತ ಶಿವಯೋಗಿಗಳ ಆಶ್ರಮಕ್ಕೆ ಬಂದರು. ಆ ರಾತ್ರಿ ಅಲ್ಲೇ ಉಳಿದುಕೊಂಡರು. ಭೋಜನ ಪಂಕ್ತಿಯಲ್ಲೇ ಊಟ ಹಾಕಿಸಿದ ಶ್ರೀಗಳು ಅವರ ಮೈದಡವಿ ಜೈಲಿನ ಬಟ್ಟೆ ತೆಗೆಸಿ ಹೊಸ ಬಟ್ಟೆ ಕೊಡಿಸಿದರು.

ಕಳ್ಳ ಮಾರ್ಗದಲ್ಲಿ ಮುಂದೆ ಸಾಗಿದ ಗುಂಪು ಕೃಷ್ಣಾ ನದಿತೀರಕ್ಕೆ ಬಂತು. ಅವರು ನದಿಯಲ್ಲಿ ಸ್ನಾನ ಮಾಡುವ ಸಮಯದಲ್ಲೇ ಜಮಖಂಡಿ ಸಂಸ್ಥಾನದ ಮಹಾರಾಜ ಪರಶುರಾಮ ಮೊಸಳೆ ಬೇಟೆಯ ಮೋಜಿಗಾಗಿ ಬಂದಿದ್ದ. ನದಿಯಲ್ಲಿ ಮೊಸಳೆಗೆ ಗುರಿಯಿಟ್ಟ ಸಮಯದಲ್ಲಿ ಲಕ್ಷ್ಮಣ ನೀರಿನಾಳದಿಂದ ಈಜಿಬಂದವನೇ ರಾಜನಿಂದ ಬಂದೂಕು ಕಸಿದುಕೊಂಡು ಈಜಿ ಆಚೆ ದಡ ಸೇರಿದ. ಲಕ್ಷ್ಮಣನ ತಂಡ ಅಲ್ಲಲ್ಲಿ ಸಂಚರಿಸಿ, ಕಲ್ಲೋಳಿ ಗುಡ್ಡದಲ್ಲಿ ಬಿಡಾರ ಹೂಡಿತು. ಜಮಖಂಡಿ ರಾಜರಿಂದ ಸುದ್ದಿ ತಿಳಿದ ಇನ್ಸ್‌ಪೆಕ್ಟರ್ ಕಲಾಲ ತನ್ನ ಪರಿವಾರದೊಂದಿಗೆ ಗುಡ್ಡಕ್ಕೆ ಮುತ್ತಿಗೆ ಹಾಕಿದ. ಇಬ್ಬರ ನಡುವೆ ಗುಂಡಿನ ಚಕಮಕಿ ನಡೆಯಿತು. ಕಲಾಲನ ಪಡೆಯವರ ಬುಲೆಟ್‌ಗಳು ಖಾಲಿಯಾದ ನಂತರ ಲಕ್ಷ್ಮಣ ಕಲಾಲ ಸಾಹೇಬನನ್ನು ಹಿಡಿದು ಚನ್ನಾಗಿ ತದುಕಿದ. ಎತ್ತೆತ್ತಿ ಒಗೆದ. ಎದೆ ಮೇಲೆ ಕುಳಿತು ಮುಷ್ಠಿಯಿಂದ ಗುದ್ದಿದ. ನರಸ ತನ್ನ ಕೊಡಲಿಯಿಂದ, ಮಾನವ ಕಂಟಕನಾಗಿದ್ದ ಇನ್ಸ್‌ಪೆಕ್ಟರ್‌ನ ರುಂಡ ಚೆಂಡಾಡಿಬಿಟ್ಟ.

ಹೀಗೆ ಲಕ್ಷ್ಮಣನ ತಂಡ ಊರೂರು ಸಂಚರಿಸು ಶ್ರೀಮಂತರ ಮನೆ ಮೇಲೆ ದಾಳಿ ಮಾಡುತ್ತ ಜೀತಗಾರರನ್ನು ಬಿಡುಗಡೆಗೊಳಿಸುತ್ತಾ, ಶ್ರೀಮಂತ ಪಾಲಾಗಿದ್ದ ಅವರ ಜಮೀನು, ಒಡವೆ ಮರಳಿ ಕೊಡಿಸು ದಾಖಲೆಪತ್ರಗಳನ್ನು ಬೆಂಕಿಹಚ್ಚಿ ಸುಡುತ್ತಾ ಬ್ರಿಟಿಷ್ ಸರ್ಕಾ ಮತ್ತು ಅದರ ಏಜೆಂಟರಾಗಿದ್ದ ಶ್ರೀಮಂತರಿಗೆ ಧಿಕ್ಕ ಕೂಗುತ್ತಾ ಸಾಗುತ್ತಿತ್ತು, ಹೋದಲ್ಲೆಲ್ಲಾ ಜನರೇ ಅವರ ಅನ್ನ, ಆಶ್ರಯ ಕೊಟ್ಟು ಸಲಹಿದರು. ಸರ್ಕಾರಕ್ಕೆ ಸು ತಿಳಿಯದಂತೆ ರಹಸ್ಯ ಕಾಪಾಡಿದರು. ಲಕ್ಷ್ಮಣನ ಹೆಸರ ಕೇಳಿದರೆ ಜನ ರೋಮಾಂಚಿತರಾಗುತ್ತಿದ್ದರು. ಆತನ ತಂ ಸೇರಲು ಅನೇಕರು ಬರತೊಡಗಿದರು. "ಸೂಕ್ತ ಸಮಯದ ನಮ್ಮದೇ ಪಡೆ ಕಟ್ಟೋಣ ಈ ಪರಂಗಿ ಸರ್ಕಾ ಕಿತ್ತೊಗೆಯೋಣ" ಎಂದು ಹೇಳುತ್ತಿದ್ದ. ಆದರೆ ಇ ಕಾಯಕದಲ್ಲಿ ತೊಡಗಿದ್ದ ದಲಿತ ಕೇರಿಯ ದುಂಡ್ಯಾ ತಂಡ ಸೇರಿ ಮುನ್ನಡೆದ. ಈ ಐವರೂ ಸುತ್ತ ಊರುಗಳಲ್ಲೂ ಸಂಚರಿಸಿದರು. ಅವರ ಬಲೆಯಿಂದ ಯ ಸ್ವಾರ್ಥ ಶ್ರೀಮಂತರೂ ತಪ್ಪಿಸಿಕೊಳ್ಳಲಾಗಲಿಲ್ಲ, ಇ ಜನ ಹೋರಾಟಗಳಲ್ಲಿ ಬ್ರಿಟಿಷ್ ಸರ್ಕಾರ, ಅಧಿಕಾರಿಗ ಮಾತ್ರ ಶತ್ರುಗಳಲ್ಲ, ಜಮೀನ್ದಾರರು, ಕಂಟ್ರಾಕ್ಟರ ಸಾಹುಕಾರರು ಹೀಗೆ ಶೋಷಕರೊಂದಿಗೆ ಶಾಮೀಲಾಗಿ ಎಲ್ಲ ಜನವರ್ಗಗಳು ಶತ್ರುಗಳಾಗಿಯೇ ಪರಿಗಣಿಸಲ್ಪಟ್ಟ ಹೋರಾಟಗಾರರಿಗೆ ಭಾರತೀಯ ಮತ್ತು ಬ್ರಿಟಿಷ್ ಶೋಷ ನಡುವೆ ಯಾವುದೇ ಭೇದ ಕಾಣುತ್ತಿರಲಿಲ್ಲ.

ತಂಡ ಒಂದು ದಿನ ಶಹಬಾದಿನ ಪೂಜಾರಿ ಶರಣ ಮನೆಯಲ್ಲಿ ರಾತ್ರಿ ತಂಗಿತ್ತು, ಲಕ್ಷ್ಮಣ ಶರಣಪ್ಪರ ಮಾತು ಸಾಗಿತ್ತು. ನರಸು, ಸಾಬು, ಗೋಪಾಲಿ ಊಟದ ತೊಡಗಿದ್ದರು. ದುಂಡ್ಯಾ ಊಟ ಮುಗಿಸಿ ಮನೆ ಮುಂದಿನ ಬೇವಿನ ಮರವೇರಿ ಬಂದೂಕು ಬಾ ಮಾಡಿಕೊಂಡು ಕಾವಲು ಕೂತ. ಪಕ್ಕಾ ಮಾಹಿತಿ ಆಧ ಗಾರ್ಮನ್ ಸಾಹೇಬ ತನ್ನ ಪಡೆಯೊಂದಿಗೆ ಬರುವುದ ನೋಡಿ ದುಂಡ್ಯಾ ಸೂಚನೆ ಕೊಟ್ಟ. ಹಿಂದಿನ ಬಾ ಮೂಲಕ ಅವರೆಲ್ಲಾ ತಪ್ಪಿಸಿಕೊಂಡರು. ಆದರೆ ದುಂ ಕೆಳಗಿಳಿಯಲಾಗಲಿಲ್ಲ, ಗಾರ್ಮನ್ ಮನೆಬಾಗಿಲಿಗೆ ಬಂ

ಬಿಟ್ಟು ಹಾರಿಸಿದ ಗುಂಡು ತಪ್ಪಿತು. ಪ್ರತಿಯಾಗಿ ರ್ಗನ್‌ನಿಂದ ಬಂದ ಗುಂಡು ಗುಂಡ್ಯನ ಎದೆ ಸೀಳಿತು. ದೇಹ ಮರದಿಂದ ಕೆಳಬಿತ್ತು. ಅವನು ಧರಿಸಿದ್ದ ಕೂಸಿನ ಬೆಲ್ಟಿನಲ್ಲಿ 'ವೆಂಕಪ್ಪಗೌಡಯಲ್ಲಪ್ಪನಾಯಕ ...ಎಂದು ಬರೆದಿತ್ತು. ಆಗಲೇ ಗೊತ್ತಾಗಿದ್ದು ಸಿಂಧೂರ ...ನಿಗೆ ತೆಗ್ಗಿ ನಾಯಕನ ಸಹಾಯವಿದೆ ಎಂದು.

...ನಂತರ ಸರ್ಕಾರ ತನ್ನ ತಂತ್ರಗಾರಿಕೆ ಬದಲಾಯಿಸಿತು. ...ವನ್ನು ಮುಗಿಸಲು ಮೀರ್ ಸಾಧಿಕ್‌ನನ್ನು ...ಕೊಂಡಿದ್ದು, ಕಿತ್ತೂರಿನ ವಶಕ್ಕಾಗಿ ಮಲ್ಲಪ್ಪಶೆಟ್ಟಿಯನ್ನು ...ದ್ದು, ನರಗುಂದದ ಬಾಬಾಸಾಹೇಬನನ್ನು ಮುಗಿಸಲು ...ಮಾ ಬಾಪು ಬಳಸಿಕೊಂಡಿದ್ದು, ಹಲಗಲಿಯ ...ನ್ನು ಕಾರಬಾರಿಯೊಬ್ಬನ ಸಂಚಿಗೆ ಬಲಿಯಾಗಿಸಿದ್ದು, ...ಳ್ಳಿ ರಾಯಣ್ಣನ ಸೆರೆಹಿಡಿದು ಗಲ್ಲಿಗೇರಿಸಲು ...ನಾಳ ವೆಂಕನಗೌಡನ ಬಳಸಿದ್ದು ಹೀಗೆ ಸಮಯಸಾಧಕ ...ದ್ರೋಹಿಗಳನ್ನೇ ಬಳಸಿ, ವಿಜಯ ಸಾಧಿಸಿದ್ದ ಬ್ರಿಟಿಷರು ...ನನ್ನು ಇಂಥದ್ದೇ ಸಂಚಿಗೆ ಒಳಗಾಗಿಸಿದರು. ತೆಗ್ಗಿ ...ಕನನ್ನು ವಿಚಾರಣೆಗೊಳಪಡಿಸಿ ಲಕ್ಷ್ಮಣನಿಗೆ ...ತುಗಳ ಸರಬರಾಜು ಮಾಡಿದ ಪರಿಣಾಮ ಕುರಿತು ...ಸಿದರು. ಇದರಿಂದ ಹೊರಬರಲು ಅವನನ್ನು ...ಮಕೊಡುವುದು ಇಲ್ಲವೇ ಗುಂಡಿಟ್ಟು ಕೊಲ್ಲುವುದು ...ರ ಸರ್ಕಾರದಿಂದ ಭಾರಿ ಬಹುಮಾನ ಪಡೆದು ...ನಕ್ಕೆ ಒಳಪಡುವುದು. ಆಯ್ಕೆಯನ್ನು ತೆಗ್ಗಿನಾಯಕನಿಗೆ ... ಕಾಲಾವಕಾಶ ಕೊಟ್ಟರು.


...ಗ್ಗಿ ನಾಯಕನ ಆಳು ವಾಲಿಕಾರ ಶಿವಪ್ಪ ಮತ್ತು ...ಾಲಿ ಸೋಮಪ್ಪ ಸಂಚು ರೂಪಿಸಿದರು. ಮಣ್ಣೆತ್ತಿನ ...ಅಮಾವಾಸ್ಯೆಯ ದಿನ ಗೌಡರ ಮನೆಯಿಂದ ಕಪ್ಪರ ...ಮುವ್ವನ ಹರಕೆ ಆ ರಾತ್ರಿಯೇ ಲಕ್ಷ್ಮಣನ ಮುಗಿಸುವ ...ಂದು ತೀರ್ಮಾನಿಸಿದರು. ಗೌಡರಿಂದ ಆ ದಿನದ ...ಕ್ಕೆ ಲಕ್ಷ್ಮಣನಿಗೆ ಕರೆ ಹೋಯಿತು. ಊಟ ...ಡುವವರ ಎದುರಿನ ಬಂಡೆಯ ಕತ್ತಲಲ್ಲಿ ಸೋಮ ...ದೂಕು ಹಿಡಿದು ಅಡಗಿ ಕುಳಿತು ಒಡೆಯುವ ತಂತ್ರ ...ಸಿದರು. ಆ ದಿನ ಮಧ್ಯರಾತ್ರಿ ಲಕ್ಷ್ಮಣನ ತಂಡ ...ದ ಗುಡ್ಡದಿಂದ ಇಳಿದು ತೆಗ್ಗಿಯ ಕಡೆ ಹೊರಟಿತು. ...ಣನ ಕೈಯಲ್ಲಿ ಕೊಡಲಿ, ನರಸು ಎದೆಯಲ್ಲಿ ...ದೂಕು, ಉಳಿದಿಬ್ಬರ ಕೈಯಲ್ಲಿ ಭರ್ಜಿಗಳಿದ್ದವು. ಅಂದು ...ಗಿ ಕಣಿವಿ ದರ್ಗಾದ ಡೋಂಗ್ರಿಪೀರದೇವರ ... ದಾರಿಯಲ್ಲಿ ದರ್ಗಾಕ್ಕೆ ಹೋಗುವ ಭಕ್ತರ ...ಗಾಡಿ ಸಾಲು. ಲಕ್ಷ್ಮಣ "ಇತ್ತೀಚಿಗೆ ಯಾಕೋ ...ಮುದೀ ಕೆಟ್ಟಕನಸು ಕಟ್ಟುತ್ತವೆ, ನಾಳೆ ದರ್ಗಾದೇವರಿಗೆ ...ಊದಿಸಿ ಬರೋಣ" ಎಂದ. ಎಲ್ಲಾ ಹಾಗೆ ...ಯೋಣವೆಂದರು. ಶಿವಪ್ಪ ಬಾಡೂಟ ಬಡಿಸಿದ. ...ಮೂ ಸಾಲಾಗಿ ಕುಳಿತರು. ಉರಿಯುತ್ತಿದ್ದ ಪಂಜನ್ನು ...ಣನ ಮುಂದಿಟ್ಟು, ಶಿವಪ್ಪ ಕತ್ತಲಲ್ಲಿ ಬಂದೂಕು ...ವನಿಗೆ ಅವನ ಮುಖ ಸ್ಪಷ್ಟವಾಗಿ ಕಾಣುವಂತೆ ...ಸಿ, ಕುಡಿಯಲು ನೀರು ತರುತ್ತೇನೆಂದು ಹೇಳಿ ...ಸರಿದ. ಬಂಡೆಗಲ್ಲಿನ ಮರೆಯಿಂದ "ಢಂ" ಎಂಬ ...ಯೊಂದಿಗೆ ಬಂದ ಗುಂಡು ಲಕ್ಷ್ಮಣನ ಎದೆ ಸೀಳಿತು. ...ಯಲ್ಲಿದ್ದ ಅನ್ನ ಹೊರಚೆಲ್ಲಿತು. ಚೀರಿಕೊಂಡು ...ಸುರುಳಿದ ಲಕ್ಷ್ಮಣ "ನಂಬಿಕೆ ದ್ರೋಹವಾಯಿತು. ...ಲ್ಲ ಇಲ್ಲಿಂದ ಓಡಿಹೋಗಿ. ಇಲ್ಲಾಂದ್ರೆ ಪೊಲೀಸರ ... ಸಿಕ್ಕಿಬಿಡುತ್ತೀರಿ.. ಓಡಿಹೋಗಿ.. ನನ್ನೆಲ್ಲಾ ಕೆಲಸಗಳ ... ಸಾಧಿಸಿ.." ಎಂದು ಹೇಳಿದ. ರಕ್ತದ ಮಡು ...ದ್ದ ಅವನನ್ನು ಬಿಟ್ಟೋಡದೆ ಹೆಗಲಿಗೇರಿಸಿಕೊಂಡು ...ಮೂ ಗುಡ್ಡವನ್ನೇರಿ ಓಡತೊಡಗಿದರು.

...ಬೆಳ್ಳಂಬೆಳಗ್ಗೆ ರಕ್ತಸುರಿದ ಜಾಡನ್ನಿಡಿದು ಪೊಲೀಸರು ...ದ ಮೇಲೇರಿ ಬಂದರು. ಲಕ್ಷ್ಮಣನ ದೇಹ ...ಗೊರಗಿತ್ತು. ದೂರದಿಂದ ನೋಡಿದ ಪೊಲೀಸರು ...ಕಿನ ಮಳೆಗರೆದರು. ದೇಹ ನೆಲಕ್ಕೆ ಬಿತ್ತು. ಹತ್ತಿರ ...ಗಿ ನೋಡಿದ ಪೊಲೀಸರಿಗೆ ಜೀವ ಯಾವಾಗಲೋ ...ಗಿತ್ತೆಂಬುದು ತಿಳಿಯಿತು. ದೇಹವನ್ನು ಗಾಡಿಯಲ್ಲಿ ... ಬೀಳಗಿಗೆ ತಂದರು. ಸುತ್ತೆಲ್ಲಾ ಹಳ್ಳಿಗಳಿಂದ ಶವ ...ಡಲು ಭಾರಿ ಜನ ಸೇರಿದರು. ಪೊಲೀಸರು ಮಾತ್ರ ...ರನ್ನೂ ಹತ್ತಿರಕ್ಕೆ ಬಿಡಲಿಲ್ಲ. ಬಳ್ಳೂರ ರಸ್ತೆಯ ಬದಿ ...ು, ಲಕ್ಷ್ಮಣನ ದೇಹ ಮಲಗಿಸಿ ಮಣ್ಣು ಮುಚ್ಚಿದರು. ...ಸಾವಿರದ ಒಂಬೈನೂರ ಇಪ್ಪತ್ತೆರಡು, ಜುಲೈ ...ಳ ಹದಿನೈದನೇ ತಾರೀಖು. ಉಳಿದ ಹುಡುಗರನ್ನು ...ಹಿಡಿದು ಜಮಖಂಡಿ ಊರಹೊರಗೆ ಗಲ್ಲಿಗೇರಿಸ ...ಯಿತು. ಮಹಾರಾಷ್ಟ್ರದ ನೆಲದಲ್ಲಿ ಜನಿಸಿದ ಸಿಂಧೂರ ... ಕನ್ನಡ ನಾಡ ಮಣ್ಣಲ್ಲಿ ಸೇರಿತು. ಪೊಲೀಸರ ...ಲೆಯೊಳಗೆ ದರೋಡೆಕೋರನಾಗಿ, ಪ್ರಭುತ್ವ ...ಯೊಳಗೆ ಬಂಡುಕೋರನಾಗಿ ಬರೆಯಲ್ಪಟ್ಟ ಸಿಂಧೂರ ...ಣ ಜನರ ಎದೆಯೊಳಗೆ ಹುತಾತ್ಮನಾದ. ಜನಪದರ ...ಗೆಯಲ್ಲಿ ಹಾಡಾಗಿ ಅಮರನಾದ.

(ಆಧಾರ: ಲಕ್ಷ್ಮಣ ಬಗೆಗಿನ ಜನಪದ ಸಾಹಿತ್ಯ ...ಧೂರ ಲಕ್ಷ್ಮಣ' ಕಂತಿ ಹನುಮಂತರಾಯ ಮತ್ತು ...ತ್ಯ ಗಂಗೆಯ ಸಾವಿರ ತೊರೆಗಳು' ಎಸ್.ಹಿ. ...ನಾರಾಯಣರಾವ್)

ಸತ್ತ ಸ್ನೇಹದ ಬಗ್ಗೆ ಖುಷ್ವಂತ್ ಸಿಂಗ್ ಬರೆದದ್ದು...

ಸಾರ್ವಜನಿಕ ವಲಯಗಳಲ್ಲಿ ಹೆಸರು -ಕೀರ್ತಿ ಸಂಪಾದಿಸಿದ 'ದೊಡ್ಡವರ' ನಡುವಿನ ಸ್ನೇಹ ಕುತೂಹಲಕಾರಿ. ಅದರಲ್ಲೂ ಪತ್ರಿಕಾರಂಗದ ಮಂದಿಯ ಸ್ನೇಹ-ವಿರಸಗಳು ರಸವತ್ತಾಗಿರುತ್ತವೆ. ಸತ್ಯದ ನೆಲೆಗಟ್ಟಿನಲ್ಲಿ ನಿಂತ ಸಿದ್ಧಾಂತವೇ ಇಲ್ಲಿನ ಜೀವಬಿಂದು. ಅದರಲ್ಲಿ ಉಂಟಾಗುವ ಮನಸ್ತಾಪಗಳು ಗೆಳೆತನವನ್ನೇ ಬಲಿಹಾಕಿಬಿಡಬಲ್ಲವು. ಇದಕ್ಕೆ ಖುಷ್ವಂತ್ ಸಿಂಗ್ ಹಾಗೂ ಅರುಣ್ ಶೌರಿ ಸ್ಪಷ್ಟ ಸಾಕ್ಷಿ. ಶೌರಿಯೊಂದಿಗಿನ ಸ್ನೇಹ ಸತ್ತ ಬಗ್ಗೆ ಖುಷ್ವಂತ್ ಸಿಂಗ್ ಬರೆದದ್ದು ಇಲ್ಲಿದೆ...




"ಒಂದು ಕಾಲದಲ್ಲಿ ಅರುಣ್ ಶೌರಿಯ ಮನೆಗೆ ಆಗಾಗ ಹೋಗಿ ಬರುತ್ತಿದ್ದೆ. ಅವರ ಕುಟುಂಬದ ಪ್ರತಿಯೊಬ್ಬರ ಬಗೆಗೂ ಅತೀವ ಗೌರವ, ಪ್ರೀತಿಯಿತ್ತು. ಈಗಲೂ ಇದೆ. ಶೌರಿಯವರ ತಂದೆಯೆಂದರೆ ತುಸು ಹೆಚ್ಚೇ ಗೌರವ. ಅದಕ್ಕೆ ಕಾರಣ ಅವರು ಬದುಕಿದ ವಿಶಿಷ್ಟ ರೀತಿ. ಆತ 'ಕಾಮನ್ ಕಾಸ್' ಅಂತೊಂದು ಸಂಸ್ಥೆ ನಡೆಸುತ್ತಿದ್ದರು. ಇದರಡಿಯಲ್ಲಿ ದೇಶದ ಸಮಕಾಲೀನ ವಿಚಾರಗಳ ಬಗ್ಗೆ ಆಳವಾದ ಚರ್ಚೆ ನಡೆಸುತ್ತಿದ್ದರು. ವಿಶೇಷವೆಂದರೆ ಹೀಗೆ ಚರ್ಚೆಯಾದ ವಿಚಾರಗಳನ್ನೆತ್ತಿಕೊಂಡೇ ಅವರು ಸುಪ್ರೀಂಕೋರ್ಟ್‌ನಲ್ಲಿ ವಾದ ಮಾಡುತ್ತಿದ್ದರು. ನೆನಪಿರಲಿ, ಅವರು ಇಷ್ಟು ಕ್ರಿಯಾಶೀಲರಾಗಿದ್ದದ್ದು ನಿವೃತ್ತಿಯ ನಂತರದ ದಿನಗಳಲ್ಲಿ. ಇದಲ್ಲದೆ ಆತ ಒಳ್ಳೆಯ ಫೋಟೋಗ್ರಾಫರ್, ಸೂಕ್ಷ್ಮ ಆಲೋಚನೆಯ ಕಲಾವಿದ. ಅಂದಹಾಗೆ ಹೀಗೆ ಭೇಟಿಯಾದ ಸಂದರ್ಭವೊಂದರಲ್ಲಿ ಅವರು ತಮ್ಮ ಎರಡು ಕಲಾಕೃತಿಗಳನ್ನು ನನಗೆ ಉಡುಗೊರೆಯಾಗಿ ಕೊಟ್ಟಿದ್ದರು. ಅದೀಗಲೂ ನನ್ನ ಬಳಿಯಿವೆ. ಆತ ಸ್ನೇಹಿತನ ತಂದೆ ಎಂಬುದರಾಚೆ ನಿಂತು ಆಲೋಚಿಸಿದರೂ ಅವರು ಭಾರತ ರತ್ನ ಪುರಸ್ಕಾರಕ್ಕೆ ಅರ್ಹರು. ಈ ಬಗ್ಗೆ ನನ್ನ ಅಂಕಣವೊಂದರಲ್ಲಿ ಬರೆದಿದ್ದೆ.

ಶೌರಿ ಹೆಂಡತಿಯ ಬಗೆಗೂ ನನಗೆ ಅಭಿಮಾನವಿದೆ. ಈ ದಂಪತಿಗಿದ್ದ ಅಂಗವಿಕಲ ಮಗುವಿನೆಡೆಗೂ ಕಕ್ಕುಲಾತಿಯಿದೆ. ಈ ಮಗುವನ್ನು ನಿಭಾಯಿಸುವುದರಲ್ಲಿ ಶೌರಿಗಿದ್ದ ಶಕ್ತಿ ಆತನ ಹೆಂಡತಿಗಿರಲಿಲ್ಲ. ಆಕೆ ಸಮಚಿತ್ತದ ವಾತ್ಸಲ್ಯಮಯಿ. ನನ್ನ ಒಂದು ಪುಸ್ತಕವನ್ನು ಆಕೆಗೆ ಅರ್ಪಿಸಿದ್ದು ನೆನಪಿದೆ.

ಅದೊಂದು ದಿನ ಇದ್ದಕ್ಕಿದ್ದಂತೆ ಶೌರಿ ಊಟಕ್ಕೆ ಆಹ್ವಾನಿಸಿದರು. ಸಮಯಕ್ಕೆ ಸರಿಯಾಗಿ ಹಾಜರಾದರೆ ಕುಲದೀಪ್ ನಯ್ಯರ್ ಅದಾಗಲೇ ಆಗಮಿಸಿದ್ದರು. ನಾವೆಲ್ಲ ಕಲೆತಾಗ ಮಾತು ಯಾವುದ್ಯಾವುದೋ ದಿಕ್ಕಿನತ್ತ ಪ್ರವಹಿಸುತ್ತಿತ್ತು. ಆ ದಿನದ ಮಾತು ಅಡ್ವಾಣಿಯವರ ರಥಯಾತ್ರೆಯ ವಿಚಾರದಿಂದಲೇ ಆರಂಭವಾಯಿತು. ಈ ವಿದ್ಯಮಾನದ ಬಗ್ಗೆ ನನ್ನ ನಿಲುವು ಸ್ಪಷ್ಟವಿತ್ತು. ಈತನ ರಥಯಾತ್ರೆಯ ಉದ್ದೇಶ ಬಾಬ್ರಿ ಮಸೀದಿ ಧ್ವಂಸ ಮಾಡುವುದಲ್ಲದೆ ಮತ್ತೇನೂ ಅಲ್ಲ.

ಆದರೆ ಶೌರಿ ಮಾತ್ರ "ಅದನ್ನ ಮಸೀದಿ ಅಂತ ಯಾರಂತಾರೆ" ಅಂತ ಹಠಾತ್ತನೆ ಪ್ರಶ್ನೆ ಎಸೆದ. ನನಗೆ ನಿಜಕ್ಕೂ ಶಾಕ್ ಆಯಿತು. ತಕ್ಷಣ ಕುಲದೀಪ್ ನಯ್ಯರ್ "ಪ್ರೊಫೆಸರ್ ಸಾಹಿಬ್ ಅರುಣ್ ಏನಂದ ಕೇಳಿಸ್ಕೊಂಡ್ರಾ" ಅಂದರು. (ನಾನು ಲಾಹೋರ್‌ನ ಕಾನೂನು ಕಾಲೇಜ್‌ನಲ್ಲಿ ಲೆಕ್ಚರರ್ ಆಗಿದ್ದಾಗ ಕಲದೀಪ್ ಮತ್ತು ರಾಜೇಂದರ್ ಸಾಚಾರ್ ನನ್ನ ವಿದ್ಯಾರ್ಥಿಗಳಾಗಿದ್ದರಿಂದಾಗಿ ಅವರಿಬ್ಬರು ನನ್ನನ್ನು ಪ್ರೊಫೆಸರ್ ಸಾಹಿಬ್ ಎಂದು ಸಂಬೋಧಿಸುತ್ತಾರೆ) ನಾನಾಗಲೇ ಅರುಣ್ ಮಾತಿನಿಂದ ಕುದ್ದುಹೋಗಿದ್ದೆ. ನಂತರ ತಡೆಯಲಾರದೆ "ಅರುಣ್ ಜಗತ್ತಿನಲ್ಲಿ ಯಾವುದೇ ಕಟ್ಟಡವನ್ನು ಮೇಲೆರಡು ಗೋಪುರದೊಂದಿಗೆ ಮೆಕ್ಕಾ ಕಡೆ ಮುಖಮಾಡಿ ಕಟ್ಟಿದರೆ ಅದನ್ನು ಮಸೀದಿ ಅನ್ನದಿರಲು ಸಾಧ್ಯವೇ?" ಎಂದು ತುಸು ಆವೇಶದಿಂದಲೇ ಪ್ರಶ್ನಿಸಿದೆ. ಶೌರಿ ನಿರುತ್ತರನಾಗಿದ್ದ.

ಆ ಕ್ಷಣದಿಂದ ನಾವಿಬ್ಬರೂ ಪರಸ್ಪರ ವಿರೋಧದ ಭೂಮಿಕೆಯಲ್ಲೇ ಬದುಕುತ್ತಿದ್ದೇವೆ. ಆತನದ್ದೊಂದು ದಿಕ್ಕು, ನನ್ನದೊಂದು ದಿಕ್ಕು. ನಾನು ಯಾರದ್ದೋ ಸಂಚಿಗೆ ಮನುಷ್ಯಕುಲ ಬಲಿಯಾದಾಗಲೆಲ್ಲಾ ತಲ್ಲಣಿಸಿ ಸೌಹಾರ್ದದ



ಪರ ಇದ್ದೆ. ಆತ ಮಸೀದಿ ಒಡೆದವರ ಜೊತೆಗಿದ್ದ. ಮಸೀದಿ ಕೆಡವಿದವರಿಗೆ ತಕ್ಕ ಶಿಕ್ಷೆಯಾಗಿ ಅದು ಸಂಭಾವ್ಯ ಅನಾಹುತಗಳಿಗೆ ಎಚ್ಚರಿಕೆಯಾಗಬೇಕೆಂಬ ಆಸೆ ನನಗಿತ್ತು. ಶೌರಿ ಆಗಲೂ ಅದಕ್ಕೆ ವಿರುದ್ಧವಾಗಿದ್ದ. ಫಲವೆಂಬಂತೆ ನಮ್ಮಿಬ್ಬರ ಒಡನಾಟ ಶಾಶ್ವತವೆಂಬಂತೆ ಕಡಿದುಬಿತ್ತು.

ತದನಂತರದಲ್ಲಿ ಆತ ಬಿಜೆಪಿ ಜೊತೆ ಸೇರಿದ್ದು, ಕ್ಯಾಬಿನೆಟ್ ದರ್ಜೆ ಸಚಿವನಾದದ್ದೆಲ್ಲ ಪತ್ರಿಕೆಗಳಿಂದ ತಿಳಿದುಕೊಂಡೆ. ಆದರೆ ಆಶ್ಚರ್ಯವಾಗಲಿಲ್ಲ! ಆತ ಅದೇ ಹಾದಿಯಲ್ಲಿ ಹೇಗೆ ಕಳೆದುಹೋದನೆಂದರೆ, ಒಮ್ಮೆ ಡಾ.ಅಂಬೇಡ್ಕರ್ ಬಗ್ಗೆ ಪುಸ್ತಕ ಬರೆದು ದಲಿತರ ಕೋಪಕ್ಕೆ ಗುರಿಯಾದ. ಮುಂಬೈನಲ್ಲಿ ದಲಿತರು ಶೌರಿ ಮೇಲೆ ದಾಳಿಯನ್ನೂ ನಡೆಸಿದ್ದರು.

ಆದರೆ, ಶೌರಿ ಸುಧಾರಿಸಲಿಲ್ಲ. ತನ್ನ ಮೇಲೆ ದಾಳಿಯಾದಂತೆ ಬೇರೆಯವರ ಮೇಲೆ ದಾಳಿ ನಡೆಸಲು ಸಿದ್ಧನಾಗುತ್ತಿದ್ದ. ಇದು ಆತನ ಪ್ರವೃತ್ತಿ. ಇವತ್ತಿಗೂ ಆತನ ಅಂಗವಿಕಲ ಮಗನನ್ನು ನೆನೆಸಿಕೊಂಡಾಗಲೆಲ್ಲಾ ಶೌರಿ ಬಗ್ಗೆ ಪಾಪ ಅನ್ನಿಸುತ್ತೆ. ಆದರಾತನನ್ನು ದೊಡ್ಡ ಮನುಷ್ಯನ ಸ್ಥಾನದಲ್ಲಿಟ್ಟು ನೋಡುವುದು, ಗೌರವಿಸುವುದು ಈ ಕ್ಷಣಕ್ಕೂ ನನ್ನಿಂದ ಸಾಧ್ಯವಾಗದ ಕೆಲಸ.....

ಮಂಟೇಸ್ವಾಮಿ ಪರಂಪರೆಯೂ ಆಧ್ಯಾತ್ಮಿಕ ದಂಗೆಕೋರ ಮಾರ್ಗವೂ

ಲಂಕೇಶರ 'ಸಂಕ್ರಾಂತಿ' ನಾಟಕದಲ್ಲಿ ಉಜ್ಜನನ್ನು ಶಿವಶರಣನನ್ನಾಗಿಸಲೇಬೇಕೆಂಬ ಹಟವಿಡಿದಿರುವ ರುದ್ರನ ಅಸಹಾಯಕತೆ ಮತ್ತು ಹೆಂಡ ಮಾಂಸ ಬಿಟ್ಟು ಶಿವಶರಣನಾಗಲು ಒಪ್ಪದ ಉಜ್ಜ ನಮ್ಮನ್ನು ಕಾಡುವಷ್ಟೇ 'ನನ್ನನ್ನು ಪ್ರೀತಿಸುವಾಗ ಹೊಲೆಯರ ರುದ್ರನಾಗಿದ್ದವ ಬಲಾತ್ಕರಿಸುವಾಗ ಶಿವಶರಣ ರುದ್ರನಾಗಿದ್ದ' ಎಂದು ಹೇಳಿ ಬಸವಣ್ಣನನ್ನೇ ಬೆಚ್ಚಿಬೀಳಿಸಿ ರುದ್ರನ ತಲೆದಂಡಕ್ಕೆ ಕಾರಣವಾಗುವ ಉಷಾ ಕೂಡ ನಮ್ಮನ್ನು ಕಾಡಬಲ್ಲಳು. ಎಲ್ಲ ಕಾಲದ ಮುಳ್ಳಿನ ಮೇಲೂ ನಿಂತು ಪ್ರಶ್ನೆ ಮಾಡಬಲ್ಲ ಹೆಣ್ಣಿನಂತೆ ಕಾಣುವ ಉಷಾ ಹೊಲೆಯರ ರುದ್ರನನ್ನು ಪ್ರೀತಿಸಿ ಶಿವಶರಣ ರುದ್ರನನ್ನು ಕಳೆದುಕೊಳ್ಳುವ ದಿಟ್ಟೆ. ಕೆಲವರ್ಷಗಳ ಹಿಂದೆ ಸಂದರ್ಶನವೊಂದರಲ್ಲಿ "ನಿಮ್ಮ ಜಾತಿಯ ಬಗ್ಗೆ ಕೀಳರಿಮೆ ಇತ್ತಾ? ಇದೆಯಾ?" ಎಂಬ ಪ್ರಶ್ನೆಯೊಂದಕ್ಕೆ ದೇವನೂರ ಮಹಾದೇವ ಅವರು "ಇತ್ತು ಈಗ ಮೇಲರಿಮೆ ಇದೆ. ನನ್ನ ಜಾತಿ ಯಾರನ್ನೂ ಕೊಂದಿಲ್ಲ, ಅವಮಾನಿಸಿಲ್ಲ, ಸುಲಿದಿಲ್ಲ, ತಿಂದಿಲ್ಲ" ಎಂಬ ಉತ್ತರ ನೀಡಿದ್ದರು.

ದೇವನೂರರು ಹೀಗೆ ಉತ್ತರ ಕೊಡುವವರೆಗೂ ಯಾವ ದಲಿತನಿಗೂ ತನ್ನ ಜಾತಿಯನ್ನು ಮೇಲರಿಮೆಯ ಕಣ್ಣುಗಳಿಂದ ನೋಡಬಹುದೆಂಬ ಸ್ಪಷ್ಟ ಆಕಾರಗಳೇ ದಕ್ಕಿರಲಿಲ್ಲ.

ನಮ್ಮ ನಡುವಿನ ಸೂಕ್ಷ್ಮಗಣ್ಣಿನ ಲೇಖಕ ಹುಲಿಕುಂಟೆ ಮೂರ್ತಿ ತಮ್ಮ ಸ್ನಾತಕೋತ್ತರ ಪದವಿಯ ಸಲುವಾಗಿ 'ಮಂಟೇಸ್ವಾಮಿ ಪರಂಪರೆಯಲ್ಲಿ 'ಜಾತಿ' ಕುರಿತ ಅಧ್ಯಯನ'ವನ್ನೇ ತಮ್ಮ ಸಂಶೋಧನೆಯ ವಸ್ತುವಾಗಿಸಿಕೊಂಡಿದ್ದಾರೆ.



ಪರಂಜ್ಯೋತಿ
ಹುಲಿಕುಂಟೆ ಮೂರ್ತಿ
ಪ್ರಕಾಶಕರು:
ಅಂಕ ಪ್ರಕಾಶನ,
ನಂ.955, ಕಾಳಿದಾಸ ನಗರ,
4ನೇ ಮುಖ್ಯರಸ್ತೆ, ಮೂಡಲಪಾಳ್ಯ,
ಬನಶಂಕರಿ 3ನೇ ಹಂತ,
ಬೆಂಗಳೂರು-85,
ಪುಟಗಳು: 79
ಬೆಲೆ: ರೂ. 30
ಪ್ರಥಮ: 2009

ಸಂಶೋಧನೆಯೆಂದರೆ ಸಮುದಾಯವೊಂದು ಕಳೆದುಕೊಂಡ ಹಾಡನ್ನು ಹುಡುಕಿ ಹೊರಡುವುದು. ಇಂಥದೊಂದು ಪ್ರಯತ್ನಕ್ಕೆ ತಾವು ನಿಂತ ನೆಲದಿಂದಲೇ ಶೋಷಿತ ಸಮುದಾಯದ ಸಾಂಸ್ಕೃತಿಕ ನಾಯಕರನ್ನು ಹುಡುಕುವ ಭಾಗವಾಗಿ ಆದಿಮ ಸಂಸ್ಕೃತಿಯ ನೆಲಮೂಲದ ಜಾತಿಯ ಬಾಗಿಲುಗಳಿಂದಲೇ ಲೇಖಕರು ಪ್ರವೇಶಿಸಿದ್ದಾರೆ. ಲೇಖಕರು ಕಟ್ಟಿಕೊಟ್ಟಿರುವ ಈ ಪಠ್ಯ 'ಮಂಟೇಸ್ವಾಮಿ ಕಾವ್ಯ ಧರೆಗೆ ದೊಡ್ಡವರ ಕತೆ, ಮಂಟೇಸ್ವಾಮಿ ಪರಂಪರೆ, ನೀಲಗಾರರು-ಸಾಂಸ್ಕೃತಿಕ ಪದಕೋಶ ಮತ್ತು ಚಿಕ್ಕಲ್ಲೂರು ಜಾತ್ರೆ'ಗಳಂತೆ ವಿಶಾಲ ಚೌಕಟ್ಟಿನ ಕೃತಿಯಲ್ಲದಿದ್ದರೂ ಕೂಡ 'ಪರಂಜ್ಯೋತಿ' ಆ ಕೃತಿಗಳ ದೊಂದಿ ಹಿಡಿದು ತಳ ಸಮುದಾಯಗಳ ಪರಂಪರೆಯೊಂದರ ಜಾತಿ ಕಥಾನಕವನ್ನು ಸರಾಗವಾಗಿ ಹೇಳಿದೆ. ಈ ಕೃತಿಗಳೆಲ್ಲದರಿಂದಲೂ ಪಡೆದ ಸ್ಫೂರ್ತಿ ಮಂಟೇಸ್ವಾಮಿ ಪರಂಪರೆಯನ್ನು ಶೋಷಿತ ಸಮು ದಾಯಗಳೇ 'ಪರಂಜ್ಯೋತಿ'ಯಾಗಿ ಸೃಷ್ಟಿಸಿಕೊಳ್ಳುತ್ತವೆ ಎಂಬುದಕ್ಕೆ ಲೇಖಕರು ಹೆಚ್ಚಿನ ಪುರಾವೆಗಳನ್ನು ಒದಗಿಸಿದ್ದಾರೆ. 'ಯಾವ ಬಸವಣ್ಣ ಅಸ್ಪೃಶ್ಯರಿಗೆ ತಮ್ಮ ಅಸ್ಮಿತೆಯ ಭಾಗವಾಗಿದ್ದ ಆಹಾರ ಮತ್ತು ಆಚರಣೆಗಳನ್ನು ಬಿಟ್ಟು ಬಂದು ಶರಣರಾಗಿ ಎಂದು ಕರೆ ನೀಡಿದನೋ ಆ ಪ್ರಕ್ರಿಯೆಯನ್ನು ಮಂಟೇ ಸ್ವಾಮಿ ಲೇವಡಿ ಮಾಡಿ 'ನಾವು ನಮ್ಮ ಯಾವುದನ್ನೂ ಬಿಡಬೇಕಾಗಿಲ್ಲ; ನಮ್ಮ ಬದುಕಿನ ಮೌಲ್ಯಗಳು ಕೀಳೇನಲ್ಲ; ಅವೇ ನಿಜ ಶ್ರೇಷ್ಠತೆಯನ್ನು ಹೊಂದಿರುವಂತಹವು' ಅದೇ ನಡೆಯಲ್ಲಿ ಈಗಾಗಲೇ ವಿಕಲತೆಗೆ ಒಳಗಾಗಿದ್ದ ಸಮುದಾಯಗಳಿಗೆ ಮರಳಿ ಶಕ್ತಿ ತುಂಬುತ್ತಾರೆ' ಎಂಬ ಕೋಟಿಗಾನಹಳ್ಳಿ ರಾಮಯ್ಯನವರ ಮಾತುಗಳು ಮಂಟೇಸ್ವಾಮಿ ಪರಂಪರೆಯೆಡೆಗೆ ಬೆರಗು ಮೂಡಿಸುತ್ತವೆ.


'ಹೆಂಡ, ಮಾಂಸ ಎಲ್ಲವನ್ನೂ ಉನ್ನತೀಕರಿಸುವ, ಆಧ್ಯಾತ್ಮೀಕರಿಸುವ ಮೂಲಕ ಜಾತಿಪದ್ಧತಿಯ ಅವಮಾನಗಳನ್ನೂ ದಾಟುವ ಪ್ರಯತ್ನವನ್ನು ಮಂಟೇಸ್ವಾಮಿ ಮಾಡುತ್ತಾರೆ. ಜಾತಿ ಒಳಗೆ ಇದ್ದು ಜಾತಿಯಿಂದ ಆಚೆಗೆ ಹೋಗುವ ಒಂದು ಆಧ್ಯಾತ್ಮಿಕ ದಂಗೆಯ ಮಾರ್ಗವನ್ನು ಮಂಟೇಸ್ವಾಮಿ ಪರಂಪರೆ ಹೇಳುತ್ತದೆ' ಎಂಬ ಡಿ.ಆರ್.ನಾಗರಾಜರ ಮಾತುಗಳು ಮಂಟೇಸ್ವಾಮಿ ಪರಂಪರೆಯ ಮರುಹುಡುಕಾಟಕ್ಕೆ ನಮ್ಮನ್ನು ಸಜ್ಜುಗೊಳಿಸಬಲ್ಲವು.

ಪುಸ್ತಕ ಪರಿಚಯ



• ಚಂದ್ರಶೇಖರ್ ಐಜೂರ್

ಬಣ್ಣಗೆಟ್ಟ ಅಮೆರಿಕದ ಡಾಲರ್!



ಅಂತಾರಾಷ್ಟ್ರೀಯ ಅರ್ಥವ್ಯವಸ್ಥೆಯಲ್ಲಿ ಸುಮಾರು ಏಳು ದಶಕಗಳಷ್ಟು ಕಾಲ ಡಾಲರ್ ವಿಶ್ವಾಸಾರ್ಹ ನಾಣ್ಯ ಎನಿಸಿಕೊಂಡು ಮೆರೆಯಿತು. ಭಾರತವೂ ನಮ್ಮ ವಿದೇಶಿ ವ್ಯವಹಾರದಲ್ಲಿ ಡಾಲರ್ ಮಧ್ಯವರ್ತಿಯನ್ನೇ ಮನ್ನಣೆ ಮಾಡಿದ್ದು ಅಮೆರಿಕಾವೂ ಡಾಲರಿನ ವಿನಿಮಯ ಬೆಲೆಯನ್ನು ವಿಪರೀತ ಏರುಪೇರುಗಳಿಲ್ಲದೆ ನಿರ್ವಹಿಸುವುದಾಗಿ ವಾಗ್ದಾನ ಮಾಡಿತ್ತು. ಅಮೆರಿಕ ಸರ್ಕಾರದ ಸಾಲಪತ್ರಗಳು ಅತ್ಯಂತ ವಿಶ್ವಾಸನೀಯವೆಂದು ಹೆಸರು ಪಡೆದಿತ್ತು. ಷೇರುಪೇಟೆಯಲ್ಲಿ ಸಾಲಪತ್ರಗಳು ಹುಂಡಿ ಮುಂತಾದವುಗಳದ್ದೇ ಒಂದು ವ್ಯಾಪಾರವಿದೆ. ಇವುಗಳನ್ನು ನಂಬಬಹುದೇ ಎಂದು ಆರ್ಥಿಕ ಪರಿಸ್ಥಿತಿ ಮುಂತಾದ ಹಲವು ವಿಷಯಗಳನ್ನು ಗಮನಿಸಿ, ಸೂಚ್ಯಂಕ ನೀಡುವ ಕ್ರೆಡಿಟ್ ರೇಟಿಂಗ್ ಎಂಬ ಸಂಸ್ಥೆಗಳಿವೆ. ಇಂಥ ಮೂರು ಸಂಸ್ಥೆಗಳಲ್ಲಿ ಸ್ಟ್ಯಾಂಡರ್ಡ್ ಅಂಡ್ ಪೂರ್ ಎಂಬ ಸಂಸ್ಥೆ ಈಗಷ್ಟೇ ಅಮೆರಿಕ ಸರ್ಕಾರದ ಸಾಲಪತ್ರಗಳ ನಂಬಿಕೆಯ ಸೂಚ್ಯಂಕವನ್ನು ಒಂದು ಮೆಟ್ಟಲು ಕೆಳಗಿಳಿಸಿದೆ. ಈ ಸೂಚ್ಯಂಕಗಳು **AAA** ಎಂಬ ಅತ್ಯುಚ್ಚ ಮಟ್ಟದಿಂದ **AAA, AA+, AA-, A, BBB, BB+, BB-, ... C.** ಎಂದು ಅವರೋಹಣ ಕ್ರಮದಲ್ಲಿ ನೀಡಲಾಗುತ್ತದೆ. ಭಾರತದ್ದು **BB-** ಅಂದರೆ ಪರವಾಗಿಲ್ಲ, ಮಧ್ಯಮಮಟ್ಟ ಅಂತ. ಇದೇನು ಅಷ್ಟು ವಿಶ್ವಾಸಾರ್ಹ ವಿಧಾನವೇ? ಅಂದರೆ ಅದನ್ನು ನಾವು ನಂಬದಿದ್ದರೂ ನಮ್ಮ ವಾಣಿಜ್ಯ ಲೋಕ ನಂಬುತ್ತಲ್ಲ! ಉದಾಹರಣೆಗೆ ಕಳ್ಳ ಹಣಗಳನ್ನು ಕಾಪಾಡುವುದೇ ದಂಧೆಯಾದ ಮಾರಿಷಸ್-ಸ್ವಿಸ್ ಬ್ಯಾಂಕ್‌ಗಳು, ಸೆಂಟ್ ಕ್ವಿಟಿ ದ್ವೀಪ ದೇಶ, ಮುಂತಾದವು **AAA**-ಅತ್ಯುಚ್ಚ ಮಟ್ಟದಲ್ಲಿವೆ! ಈಗ ಅಮೆರಿಕದ ವ್ಯವಸ್ಥೆ ಅದಕ್ಕಿಂತ ಒಂದು ಹಂತ ಕೆಳಗೆ ಅಂದರೆ ಅರ್ಥವಾದೀತು ಭ್ರಷ್ಟಾಚಾರವನ್ನೇ ದಂಧೆಯಾಗಿಸಿಕೊಂಡ ಬಂಡವಾಳ ವ್ಯವಸ್ಥೆಯ ಮೌಲ್ಯಗಳ ರೀತಿನೀತಿ!

ಅಮೆರಿಕ ಸರ್ಕಾರವೂ ಸಾಲ ಮಾಡುತ್ತದೆ. ಬರುವ ಆದಾಯ ನಿರೀಕ್ಷಿಸಿ ಅದು ಹೆಚ್ಚಿದಾಗ ಸಾಲ ತೀರಿಸಿದರಾಯ್ತು. ಸಾರ್ವಭೌಮ ಸರ್ಕಾರ ಸಾಲ ತೆಗೆದರೆ ಏನಂತೆ! ಎನ್ನುವ ಧೋರಣೆ ಇದೆ ಇದರಲ್ಲಿ. ಆದರೆ ಅದಕ್ಕೂ ಒಂದು ಮಿತಿ ಬೇಡವೇ?

ಅಮೆರಿಕದ ವಾರ್ಷಿಕ ಉತ್ಪನ್ನಕ್ಕೆ ಅಂದರೆ ಜಿಡಿಪಿಗೆ ಸರಿಸಮಾನವಾಗಿ ಬಿಟ್ಟಿದೆ ಸರ್ಕಾರದ ಸಾಲ! ಈ ಉತ್ಪನ್ನ ಹೆಚ್ಚುಕಡಿಮೆ ಇಡೀ ಯುರೋಪಿಯನ್ ಒಕ್ಕೂಟದ ವಾರ್ಷಿಕ ಉತ್ಪನ್ನಕ್ಕೆ ಸಮ. ಭಾರತದ ರಾಷ್ಟ್ರೀಯ ಉತ್ಪನ್ನ ಇದರ ಸುಮಾರು ಕಾಲುಭಾಗವಷ್ಟೆ. ಒಂದು ಟ್ರಿಲಿಯನ್ ಅಂದರೆ ಒಂದು ಸಾವಿರ ಬಿಲಿಯನ್. ಒಂದು ಟ್ರಿಲಿಯನ್ ಅಂದರೆ ಒಂದು ಸಾವಿರ ಮಿಲಿಯನ್ - ಮಿಲಿಯನ್ ಅಂದರೆ ಹತ್ತು ಲಕ್ಷ. ಒಂದು ಮಿಲಿಯನ್ ಅಮೆರಿಕನ್ ಡಾಲರ್‌ಗೆ ನಮ್ಮ 4.5 ಕೋಟಿ ರೂ. ಸಮಾನ. ಅಂದರೆ ಅಮೆರಿಕ ಸರ್ಕಾರದ 15 ಟ್ರಿಲಿಯನ್ ಸಾಲದ ಅಗಾಧತೆ ಅರ್ಥವಾದೀತು. ಪ್ರಥಮ ಮಹಾಯುದ್ಧದ ನಂತರ ಅಮೆರಿಕದ ಪಾರ್ಲಿಮೆಂಟು ಸರ್ಕಾರ ಇಂತಿಷ್ಟೇ ಮಿತಿಯೊಳಗೆ ಸಾಲ ತೆಗೆದುಕೊಳ್ಳಬೇಕೆಂದು ಮಿತಿ ನಿರ್ಧರಿಸುತ್ತದೆ. ಅಧಿಕಾರಾರೂಢ ಪಕ್ಷದ ಬಲಾಬಲದ ಮೇಲೆ ಈ ಮಿತಿ ಹೆಚ್ಚಲೂಬಹುದು. ಅಧ್ಯಕ್ಷ ಜಾರ್ಜ್ ಬುಷ್ ಕಾಲದಲ್ಲಿ ಹಲವಾರು ಯುದ್ಧಗಳು ಖರ್ಚು ಹೆಚ್ಚಿಸಿದ್ದವು. ಅದೇ ಸಮಯ ಆತ ತೆರಿಗೆ ದರವನ್ನು ಅಪಾರವಾಗಿ ಶ್ರೀಮಂತರ ಪರವಾಗಿ ಕಡಿತಗೊಳಿಸಿದ. 2008ರಲ್ಲಿ ಅಂತರರಾಷ್ಟ್ರೀಯವಾಗಿ ಕುಸಿದ ಷೇರುಪೇಟೆಯ ಬಿಕ್ಕಟ್ಟಿನ ಸಂದರ್ಭದಲ್ಲಿ ಆಗ ತಾನೇ ಅಧಿಕಾರಕ್ಕೆ ಬಂದ ಅಧ್ಯಕ್ಷ ಒಬಾಮಾ ಒತ್ತಾಯಗಳಿಗೊಳಗಾಗಿ ಅವರ ಷೇರುಪೇಟೆಯ ಪ್ರಮುಖ ಬ್ಯಾಂಕುಗಳು ಅವ್ಯವಹಾರ ನಡೆಸಿ ಮುಳುಗುವುದರಲ್ಲಿದ್ದಾಗ ಅವಕ್ಕೆ ಸರ್ಕಾರದ ಅಪಾರ ಹಣ ನೀಡಿ (ಎರಡು ಮೂರುಟ್ರಿಲಿಯನ್‌ಗಳಷ್ಟು) ಅವನ್ನು ಬದುಕಿಸಿದರು.


ಈ ಎಲ್ಲಾ ದುಂದುವೆಚ್ಚಗಳನ್ನು ಸರಿದೂಗಿಸಲು ಕೊಬ್ಬಿದ ಶ್ರೀಮಂತರ ಮೇಲೂ ತೆರಿಗೆ ಹೇರಲು ಅಥವಾ ತೆರಿಗೆ ವಿನಾಯಿತಿಗಳನ್ನು ತೆಗೆದುಹಾಕಲು ಒಬಾಮ ಯತ್ನಿಸಿ ವಿಫಲನಾದ. ಅವನ ವಿರೋಧ ಪಕ್ಷ ಆತ ಮುಗ್ಗರಿಸಲಿ ಎಂದು ಸಹಕರಿಸುತ್ತಿಲ್ಲ. ಆದರೆ ಅದರ ಪರಿಣಾಮವಾಗಿ ಅರ್ಥವ್ಯವಸ್ಥೆ ಕುಸಿಯುತ್ತಿದೆ. ಷೇರುಪೇಟೆ ಏರುಪೇರಾಗಿದೆ. ಇವರೊಡನೆ ಹೊಕ್ಕಳಿನ ಸಂಬಂಧ ಪಡೆದ ಜಾಗತಿಕ ಅರ್ಥವ್ಯವಸ್ಥೆಗಳೆಲ್ಲ ಇದೇ ಆತಂಕಕ್ಕೆ ತುತ್ತಾಗಿವೆ. ಬಡವರಿಗೆ ಅನುಕೂಲವಾಗುವ ಶಿಕ್ಷಣ ಕ್ಷೇತ್ರ ಆರೋಗ್ಯ ಕ್ಷೇತ್ರಗಳಲ್ಲಿ ವೆಚ್ಚವನ್ನು ಕಡಿದು ಬಜೆಟ್‌ನ ಸಮತೋಲನ ಕಾಪಾಡಿಕೊಳ್ಳಿ ಎನ್ನುತ್ತದೆ ವಿಪಕ್ಷ. ಆದರೆ ಆ ಹೆಜ್ಜೆ ಒಬಾಮ ಮುಂದಿನ ಚುನಾವಣೆಯಲ್ಲಿ ಸೋಲುವಂತೆ ಮಾಡುತ್ತದೆ. ಅಂದರೆ ಅರ್ಥವೇನು? ಖಾಸಗಿ ಕ್ಷೇತ್ರದ ಪರವಾದ ರಿಪಬ್ಲಿಕನ್ ಪಕ್ಷಕ್ಕೂ, ಡೆಮಾಕ್ರಟಿಕ್ ಪಕ್ಷಕ್ಕೂ ಆಂತರಿಕವಾಗಿ ಒಂದು ವಿಶ್ವಾಸವಿದೆ. ತಮ್ಮ ಅರ್ಥವ್ಯವಸ್ಥೆ ಇನ್ನೂ ಪ್ರಬಲವಾಗಿ, ಸುಭದ್ರವಾಗಿದೆ. ಷೇರುಪೇಟೆಯ ತಲ್ಲಣಗಳಿಗೆ ವಿಶಿಷ್ಟವಾಗಿ ಹೆದರಬೇಕಾಗಿಲ್ಲ ಅಂತ!

ಅಮೆರಿಕಾ ಸರ್ಕಾರದ ಹಣಕಾಸು ವಿಷಯದ ವಿಶ್ವಾಸಾಂಕ ಕಡಿಮೆಯಾಗುತ್ತಿದ್ದಂತೆಯೇ ಜಗತ್ತಿನ ಮುಖ್ಯ ಷೇರುಪೇಟೆಗಳೆಲ್ಲಾ ಒಂದೆರಡು ದಿನ ಹಾರಾಡಿದುವು. ನಿನ್ನೆ ಅಮೆರಿಕದ ಫೆಡರಲ್ ರಿಸರ್ವ್ (ನಮ್ಮ ರಿಸರ್ವ್ ಬ್ಯಾಂಕ್‌ನಂಥದ್ದು ಆದರೆ ಖಾಸಗಿ ಒಡೆತನದ್ದು) ಇನ್ನು ಎರಡು ವರ್ಷ ಈಗಿರುವ ಬಡ್ಡಿದರವನ್ನು ಬದಲಾಯಿಸುವುದಿಲ್ಲ ಎನ್ನುವ ಆಶ್ವಾಸನೆ ನೀಡುತ್ತಿದ್ದಂತೆಯೇ ಷೇರುಪೇಟೆಗಳೆಲ್ಲಾ ತಣ್ಣಗಾಗಲು ಪ್ರಾರಂಭಿಸಿದುವು. ಆದರೆ ಮಾರನೆಯ ದಿನವೆ ಯೂರೋಪಿನ ಷೇರುಪೇಟೆ ಅಲ್ಲಿಯದೆ ಸರ್ಕಾರಗಳ, ಅರ್ಥವ್ಯವಸ್ಥೆಯ ದಿವಾಳಿತನವನ್ನು ಪ್ರತಿಫಲಿಸುತ್ತಾ ಕುಸಿದವು. ಇದಕ್ಕೆ ಪ್ರತಿಯಾಗಿ ಅಮೆರಿಕದ ಷೇರುಪೇಟೆ ಪುನಃ ಕುಸಿದು, ಈಗ ವಿಶ್ವದ ಮತ್ತು ಭಾರತದ ಸರದಿ. ಇದೊಂದು ಸಟ್ಟಂ ಜೂಜು ಲೋಕ ಷೇರುಪೇಟೆಯದು! ಅಂದರೆ ನಮ್ಮ ನಿಮ್ಮಂಥ ಸಾಧಾರಣ ಜನಗಳು ಈ ಷೇರುಪೇಟೆಯ ಏರುಪೇರು ಸುದ್ದಿಗಳಿಗೆ ವಿಪರೀತ ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಹೌದು ಒಂದಷ್ಟು ಹೆದರಿಕೆ ಇತ್ತು. ಆ ಹೆದರಿಕೆಯಿಂದಾಗಿಯೇ ಯಾವ ಡಾಲರೂ ಬೇಡ, ಪೌಂಡೂ ಬೇಡ ಚಿನ್ನದ ಮೊರೆ ಹೋಗೋಣ ಅಂದಾಗ ಅದರ ಬೆಲೆ ಗಗನಕ್ಕೇರಿದ್ದು. ಹೆದರಿಕೆಯಿದ್ದದ್ದೂ ಒಂದಿಷ್ಟು ಉತ್ಪ್ರೇಕ್ಷೆಯ ಪ್ರತಿಕ್ರಿಯೆಯಿಂದ. ಸರ್ಕಾರ ತೆರಿಗೆ ಹೆಚ್ಚಿಸಿ ಆದಾಯ ಹೆಚ್ಚಿಸಿಕೊಳ್ಳದೆ, ಬಡವರಿಗೆ ನೀಡುವ ಪರಿಹಾರಗಳನ್ನು ಕಡಿತಗೊಳಿಸಿದಾಗ ಗ್ರಾಹಕ ಮಾರುಕಟ್ಟೆ ಕುಸಿದು, ಉತ್ಪಾದನೆ ಕುಗ್ಗಿ ನಿರುದ್ಯೋಗ ಉಂಟಾದೀತೆ? ಅದೇ ಕಾರಣ ಹೊಸ ಉದ್ಯಮಗಳು ಇಲ್ಲದೆ - ವಿಕಾಸವಿಲ್ಲದೆ ಹೊಸ ಉದ್ಯೋಗಗಳು ಉಂಟಾಗದೇ ಹೋದರೆ? ಭಾರತದ ಮಟ್ಟಿಗೆ ನಮ್ಮ ಹುಡುಗರು ಅಮೆರಿಕದಲ್ಲಿ ಕೆಲಸ ಮಾಡುತ್ತಿರುವವರು ಕೆಲಸ ಕಳೆದುಕೊಂಡು ಮನೆಗೆ ಹಿಂತಿರುಗಿದರೇ? ಹೊಸ ಇಂಜಿನಿಯರಿಂಗ್ ಪದವೀಧರರು ಅಮೆರಿಕಕ್ಕೆ ಹೋಗಲಾರದೆ ಹೋದರೇ? ನಮ್ಮಲ್ಲಿ ಹೂಡಿಕೆಮಾಡುವ ಅರ್ಥವ್ಯವಸ್ಥೆಗಳೇ ಬಡವಾದ ಕಾರಣ, ಭಾರತದ ಒ... ಅಂತರರಾಷ್ಟ್ರೀಯ ಬಂಡವಾಳ ಹೂಡಿಕೆ ನಿಂತು ಹೋದ... ಇವೆಲ್ಲ ಶಂಕಿತಾ ಆತಂಕಗಳು.

ವಾಸ್ತವದಲ್ಲಿ ಯುರೋಪ್, ಬ್ರಿಟನ್, ಜಪಾನ್ ಅಂ... ಜಗತ್ತಿನ ಶ್ರೀಮಂತ ಬಂಡವಾಳ ಅರ್ಥವ್ಯವಸ್ಥೆಗಳ... ಕುಸಿದಿವೆ. ಯಾರಾದರೂ ಬಂಡವಾಳ ಹೂಡಬೇಕಾ... ನಮ್ಮಂತಹ ಇನ್ನು ಅಭಿವೃದ್ಧಿಶೀಲವಾದ ವ್ಯವಸ್ಥೆಯಲ್ಲಿ ಮ... ಸಾಧ್ಯ. ಈಗಲೂ ಡಾಲರೇ ಹೆಚ್ಚು ನಂಬಲರ್ಹ. ಈಗ... ಅಮೆರಿಕದ ಜನ ಸರಕುಗಳನ್ನು ಬೇಡಿದರೇನೇ ನ... ಉದ್ಯಮಗಳು ರಫ್ತುಮಾಡಲು ಸಾಧ್ಯ. ಬಡ್ಡಿದರವ... ಒಂದೆರಡು ವರ್ಷ ಹೆಚ್ಚಿಸುವುದಿಲ್ಲ ಎಂದಿರುವುದರಿ... ಅಮೆರಿಕದ ಅರ್ಥವ್ಯವಸ್ಥೆ ಚೇತರಿಸಿಕೊಳ್ಳುವ ಸಾಧ್ಯತೆ... ಹೆಚ್ಚು. ಅಮೆರಿಕದ ಸಾಲಪತ್ರಗಳ ಬಗೆಗಿನ ಹೆದ... ಏನು? ನಾವು ಅವರ ಡಾಲರ್ ಪತ್ರಗಳಲ್ಲಿ ಹೂ... ಮಾಡಿದ್ದೇವೆ. ಅದನ್ನು ನಾವು ಬೇಕೆಂದಾಗ ದಿವಾಳಿಯಾ... ಅಮೆರಿಕ ಸರ್ಕಾರ ಹಿಂದಿರುಗಿಸದೇ ಹೋದರೆ ಎನ್ನು... ಭಯ ನಿರಾಧಾರವಾದುದು. ಅವರ ಇಡೀ ಸಾಲವ... ಯಾರೂ ಒಂದೇ ದಿನದಲ್ಲಿ ಹಿಂದಿರುಗಿಸಲು ಹೇಳುವುದಿ... ಹಾಗೂ ಅದು ಸಾಮಾನ್ಯವಾಗಿ ಅಮೆರಿಕದ ಮಾರುಕಟ್ಟೆಯ... ನಾವು ಕೊಂಡುಕೊಳ್ಳುವ ಸರಕುಗಳಿಗೆ ಬಳಕೆಯಾಗುತ್ತ... ಇರುತ್ತದೆ. ಭಾರತ ಕೇವಲ 50 ಬಿಲಿಯನ್ ಡಾಲರ... ಅಮೆರಿಕದ ಸಾಲ ಪತ್ರ ಪಡೆದಿದೆಯಷ್ಟೇ.

ವಾಸ್ತವವೆಂದರೆ ಅಮೆರಿಕದ ಅರ್ಥವ್ಯವಸ್ಥೆ ಪ್ರಶ್ನಾತೀ... ಸುಭದ್ರವೆಂಬ ಮೆರಗು ಕಳೆದು ಅದರ ಡಾಲ... ಕಾಂತಿಹೀನವಾಗಿದೆ ಅಷ್ಟೆ. ಎಲ್ಲರ ಪರಿಸ್ಥಿತಿಯೂ ಹ... ಇರುವುದರಿಂದ ಅದೇನೂ ವಿಶೇಷವಲ್ಲ. ಹಾಗೆಯ... ಪದೇಪದೆ ನೀವು ಕೇಳುವ ಪದ 'ಅವರ್ ಫಂಡಮೆಂಟ... ಆರ್ ಸ್ಟ್ರಾಂಗ್' ಅಂದರೆ ಅವರ ಕೈಗಾರಿಕೆಯ ಉತ್ಪನ್ನಗ... ಇಂದಿಗೂ ಅವುಗಳ ಹೆಚ್ಚಿನ ತಂತ್ರಜ್ಞಾನಾಂಶದಿಂದ... ಎಲ್ಲರಿಗೂ ಬೇಕೇಬೇಕು. ಬಹುಶಃ ಇನ್ನು ಮುಂದೆ ಅಮೆ... ಸರ್ಕಾರ ಅಂತರರಾಷ್ಟ್ರೀಯವಾಗಿ ಹೊಸಹೊಸ ಯುದ್ಧಗ... ಸಜ್ಜಾಗುವುದನ್ನು ಕಡಿಮೆ ಮಾಡೀತು. ಈಗ ಅ... ಬಹುಮುಖ್ಯವಾದ ಮಿಲಿಟರಿ ಮಾರಕಾಸ್ತ್ರಗಳಿಗೂ ಬೇ... ಕಡಿಮೆಯಾಗುತ್ತಿದೆ. ನಮ್ಮ ಕೇಂದ್ರ ಸರ್ಕಾರ ಅಮೆರಿ... ಸೇವಕನಾಗಿ ನಟಿಸುತ್ತಿರುವುದರಿಂದ ಇಂದೂ ನಮ... ಬೇಡವಾದ ಅವರ ವಿಮಾನ, ಮಾರಕಾಸ್ತ್ರಗಳ... ಬಲವಂತವಾಗಿ ಖರೀದಿಸುತ್ತಿದ್ದೇವೆ. ಇದರಿಂದ ಅವ... ಒಂದಿಷ್ಟು ಉದ್ಯೋಗ ಸೃಷ್ಟಿಯಾಗುತ್ತದಷ್ಟೇ. ಇ... ಹಾಗಿರಲಿ, ಈ ಇಡೀ ಗದ್ದಲ ಅಮೆರಿಕ ಸರ್ಕಾರದ ಆರ್ಥಿ... ಸ್ವಾಸ್ಥ್ಯದ ಆರೋಗ್ಯಕ್ಕೆ ಜಖಂ ಆಗಿರುವುದರ ಬಗ್ಗೆ ನಾವೇನ... ಆತಂಕಪಡಬೇಕಾಗಿಲ್ಲ. ಎಲ್ಲವೂ ಖಾಸಗಿಯಾಗಿಯ... ಇರಬೇಕೆಂಬ ಅಲ್ಲಿಯ ಜನಕ್ಕೆ ಇದರ ಬಗ್ಗೆ ಅಷ್ಟು ಚಿ... ಇದ್ದಹಾಗೆ ಇಲ್ಲ. ಹೌದು ಜಗತ್ತಿನ ಅತ್ಯಂತ ಶ್ರೀಮ... ದೇಶದಲ್ಲಿ ಶೇ. 12ರಷ್ಟು ಜನ ಬಡತನ ರೇಖೆಗೆ ಕೆ... ಇದ್ದಾರೆ. ಹಾಗಿರುವುದು ಸರಿ ಎನ್ನುತ್ತದೆ ಬಂಡವಾಳ ವ್ಯ... ನಮ್ಮ ಸರ್ಕಾರವೂ ಪರೋಕ್ಷವಾಗಿ ಹೀಗೆ ಹೇಳಲಾರಂಭಿಸಿ... ನಾವು ಇದರ ಬಗ್ಗೆ ಮಾತ್ರ ಎಚ್ಚರ ವಹಿಸಬೇಕು.


-ಕೆ.ಎಸ್.ಪಾರ್ಥಸಾರ...



ದೀಪಗಳು ನಂದಿ ಹೋದಂದಿನಿಂದ
ಧೂಳ ಕೆದರಿ, ಕೆದರಿ ಹುಡುಕುತ್ತಿದ್ದೇನೆ
ಎಲ್ಲಿ ಹೋದವೊ ನನ್ನೆರಡು ಕಣ್ಣುಗಳು?
ಎಲ್ಲ ಬಲ್ಲ ನೀನೇ ಹೇಳು. ನಾನು ಯಾರು?
ಧಮನಿ ಧಮನಿಯಲಿ ಧುಮುಕಿದಂತಿದೆ
ನಿನ್ನ ಬಯಕೆ, ನಿನ್ನ ನೆನಪ ಸುಳಿಗಳ ಹೊತ್ತ
ಯಾವುದೋ ಹಲಾಹಲದಲೆಅಲೆ ಪ್ರವಾಹ.
ಯಾವ ಅಲೆಯಲ್ಲಿ ಕರಗಿ ಹೋಯಿತೋ
ನನ್ನ ಹೃದಯ, ಯಾರಿಗೆ ಗೊತ್ತು!
ಈ ಗಳಿಗೆ ಈಜಿ ಬಿಡು,
ಮತ್ತೆ ಚಾಚಿ ಬಂದೀತು ಆ ದಡದಾಚೆಯ
ಲೋಕದಿಂದ ಮಿಂಚಿನ ಬೆಳಕ ಬೆರಳು.
ಹೆಕ್ಕಿ ತಂದೀತು ನನ್ನ ಕಳೆದು ಹೋದ
ಕಣ್ಣುಗಳ ಬದಲಿ, ಕರಿ ರಾತ್ರಿಯ
ಕುಡಿದು ಹೊಳೆವ ಹೊಸ ಮಣಿಯ.
ಈ ಗಳಿಗೆ ಈಜಿ ಬಿಡು, ಅಲೆ ನದಿಯ ಆಳ.
ಅಗ್ನಿಯಲಿ ಬೆಂದು ಹಾಲಾಹಲದಿ ಮಿಂದ
ನನ್ನ ಹೃದಯ ಕಂಡೀತು ಗಟ್ಟಿ ದಡವ.
ಹೊಸ ನೋಟ ಹೊಸ ಹೃದಯ ಹೊತ್ತು
ಮತ್ತೆ ಕಟ್ಟಿಯೇನು ಚೆಲುವ ಬಣ್ಣಿಸುವ,
ಪ್ರೀತಿಯರ್ಥ ಅರಸುವ ಕಾವ್ಯ

ಉರ್ದು ಮೂಲ: ಫೈಯದ್
ಕನ್ನಡಕ್ಕೆ: ಶ್ರೀ

ಭ್ರಷ್ಟಾಚಾರ ವಿರೋಧಿ ಜಾಥಾಕ್ಕೆ ಜೊತೆಯಾಗಿ ಬನ್ನಿ...



ಬಿಜೆಪಿಯ ಬ್ರಹ್ಮಾಂಡ ಭ್ರಷ್ಟಾಚಾರ ಕರ್ನಾಟಕ ಆಡಳಿತ ವ್ಯವಸ್ಥೆಯನ್ನೇ ಬುಡಮೇಲು ಮಾಡಿದೆ. ಇಲ್ಲಿನ ನೆಲ,ಜಲ,ಸಂಪತ್ತುಗಳನ್ನೆಲ್ಲಾ ದುಷ್ಟ ನಾಯಕರು, ಅಧಿಕಾರಿಗಳು ನುಂಗಿ ನೊಣೆಯುತ್ತಿದ್ದಾರೆ. ಲೋಕಾಯುಕ್ತರ ಗಣಿ ಅಕ್ರಮ ಸಂಬಂಧಿತ ವರದಿಯ ಪರಿಣಾಮವಾಗಿ ಮುಖ್ಯಮಂತ್ರಿಯ ತಲೆದಂಡವಾಗಿದೆ. ಆದರೆ ಯಾವುದೇ ಬದಲಾವಣೆಯಾಗಿಲ್ಲ, ಕಳ್ಳಕಾಕರನ್ನೇ ನಾಯಕರೆಂದು ಒಪ್ಪಿಕೊಳ್ಳುವ ಅನಿವಾರ್ಯ ಭಾರವೊಂದನ್ನು ಭಾರತೀಯ ಜನತಾ ಪಾರ್ಟಿ ಒತ್ತಾಯಪೂರ್ವಕವಾಗಿ ಕನ್ನಡಿಗರ ಎದೆ ಮೇಲೆ ಹೇರಿಬಿಟ್ಟಿದೆ.

ಹಾಗಾದರೆ ಈ ನೆಲದ ಜನಸಾಮಾನ್ಯರ ಒಡಲ ಇಂಗಿತವೇನು ಅಂತ ತಿಳಿಯಬೇಕೆಂದರೆ, ಶಿಥಿಲಗೊಳ್ಳುತ್ತಿರುವ ಪ್ರಜಾಪ್ರಭುತ್ವವನ್ನು ಮತ್ತೆ ಕಟ್ಟಿ ನಿಲ್ಲಿಸಬೇಕೆಂದರೆ ಹೋರಾಟಗಳು ರೂಪುಗೊಳ್ಳುವುದು ಅನಿವಾರ್ಯ. ಇದನ್ನು ಮನಗಂಡಿರುವ ಎಐಎಸ್‌ಎಫ್ ಸಂಘಟನೆ ವಿವಿಧ ಸಂಘಸಂಸ್ಥೆಗಳ ಸಹಯೋಗದೊಂದಿಗೆ ಜಾಥಾವೊಂದ... ಆಯೋಜಿಸಿದೆ. 'ಭ್ರಷ್ಟಾಚಾರ ಮುಕ್ತ ರಾಜ್ಯಕ್ಕಾಗಿ ವಿದ್ಯಾರ್ಥಿ ಯುವಜನರ ಜಾಥಾ' ಇದೇ ಆಗಸ್ಟ್ 9 ರಂದು ಬೆಂಗಳೂರಿನ ಫ್ರೀ... ಪಾರ್ಕ್‌ನಲ್ಲಿ ಉದ್ಘಾಟನೆಗೊಂಡಿದೆ. ಹತ್ತರಂದು ಮಂಡ್ಯ ತಲುಪಿರುವ ಜಾಥಾ ಪ್ರತಿನಿತ್ಯ ಒಂದೊಂದು ಊರು ಪಟ್ಟಣಗ... ಪ್ರಯಾಣಿಸಲಿದೆ.

12ರ ಬೆಳಗ್ಗೆ ಹಾಸನ ನಗರ ಹಾಗೂ ಮಧ್ಯಾಹ್ನ ಸಕಲೇಶಪುರದಲ್ಲಿ, ತಲುಪಲಿರುವ, ಆ ಜಾಥಾ ತದನಂತರ ಕ್ರಮವ... ಮೂಡಿಗೆರೆ, ಚಿಕ್ಕಮಗಳೂರು, ತರೀಕೆರೆ, ಭದ್ರಾವತಿ, ಶಿವಮೊಗ್ಗ, ದಾವಣಗೆರೆ, ಹಾವೇರಿ, ಹುಬ್ಬಳ್ಳಿ, ಧಾರವಾಡ, ಬೆಳ... ಗುಲ್ಬರ್ಗಾ, ಬಳ್ಳಾರಿ, ಹಂಪಿ, ಹೊಸಕೋಟೆ, ಕೂಡ್ಲಿಗಿ, ಚಿತ್ರದುರ್ಗ, ಹಿರಿಯೂರು, ತುಮಕೂರು ತಲುಪಿ ಆ. 29ರವರೆಗೆ ಮುಂದುವರೆಯಲ... ತದನಂತರ 26 ರಂದು ಸಂಗ್ರಹಿಸಿದ ಮಾಹಿತಿಯೊಂದಿಗೆ ರಾಜ್ಯಪಾಲರನ್ನು ಭೇಟಿಯಾಗಿ ಮನವಿ ದಾಖಲೆ ಸಲ್ಲಿಸಲಾಗುತ್ತದೆ.

ಈ ಜಾಥಾಕ್ಕೆ ಪ್ರತೀ ಊರಿನ ಸ್ಥಳೀಯರೂ ಸಹಕರಿಸಿ ಪಾಲ್ಗೊಂಡು ಭ್ರಷ್ಟಾಚಾರದ ವಿರುದ್ಧದ ಯಾಗದಲ್ಲಿ ಪಾಲ್ಗೊಳ್ಳಬೇ... ಆಸಕ್ತರು ಈ ಕೆಳಕಂಡ ಮೊಬೈಲ್ ನಂಬರಿಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಜ್ಯೋತಿ ಸುಂದರೇಶ್: 9448171672 ಎ.ಎಸ್. ಮೋಹನ್: 9448759270 ಸಂತೋಷ್: 9686746686

...ಡಕಾಯಿತ್ರನ್ನೆಲ್ಲ ಪರಗಿಟ್ಟು ಜೇಬುಗಳ್ರ ಮಂತ್ರಿ ಮಾಡಿದನಂತೆ!

...ಯಾವುದೊ ಅರ್ಥೈಸಲಾಗದ ಉತ್ಸಾಹದಲ್ಲಿ ...ರಪ್ಪನ ವೃತ್ತಾಂತವನ್ನು ಮನಸೋ ಇಚ್ಛೆ ಮಾತನಾಡಿದ ...ಕ್ಷಣ ಹೊತ್ತಿನ ನಿಶ್ಯಬ್ದದ ನಂತರ,

"...ಅಂತೂ ಹೋದನಲ್ಲ ಬುಡತ್ತಗೆ" ಎಂದ ಕಾಳಮಾವ ...ವಾಗಿ.

...ಯ ಲು ಸೀ ಮೆ

ಕಪ್ಪೆಪುರಾಣ

▶ಬಿ. ಚಂದ್ರೇಗೌಡ

"...ಎಲ್ಲೊಗಿದ್ದನೊ ಮಾವ? ಸದಾನಂದನ ಸಂಪುಟ ...ಡಿದ್ರೆ ಎಡೂರ ಎತ್ತಿನಂಗೆ ಅಲ್ಲೇ ಸುತ್ತುತಾ ಅವುನೆ" ... ಉಗ್ರಿ.

"...ಸುತ್ತಿದ್ರೂ ಮುಖ್ಯಮಂತ್ರಿಗಿರಿ ಹೋಗ್ಯದಲ್ಲಾ."

"...ಹೋಗ್ಯದೆ ಸರಿ. ಅವುನ ಕಡಿಯೋರ್‍ನೆಲ್ಲ ಮಂತ್ರಿಗಳಾಗಿ ...ೀ ಖಾತೆ ಮಡಿಕಂಡು ಮೈರೀತಾ ಅವುರೆ. ಒಂದು ...ಸುದ್ದಿ ಏನಪ್ಪಾ ಅಂದ್ರೆ ಡಕಾಯಿತರು ಮಂತ್ರಿಗಳಾಗಿಲ್ಲ ...ಜೇಬುಗಳ್ಳಾದ್ರು!"

"...ಡಕಾತಿಗಳ್ಯಾರ್ಲ?"

"...ಅದೆ ರೆಡ್ಡಿ, ರಾಮುಲುಗಳು ಡಕಾತಿಗಳು ಅಂತ ...ನಿನೇ ಹೇಳಿದ್ದನಂತೆ. ಇನ್ನುಳದೋರು ...ಬುಗಳ್ರಂತೆ."

"...ಸರಿಯಾಗೇ ಹೇಳ್ಯವುನೆ ಬುಡ್ಲ. ಆ ನನ ಮಕ್ಕಳ ...ನೋಡಿದ್ರೆ ಮಿನಿಟ್ರು ತರ ಕಾಣತಿದ್ವೇನ್ಲ. ...ಕಳ್ಳು ಸೂಳೆ ಮಕ್ಕಳಿದ್ದಂಗಿದ್ರು ಮಂತ್ರಿಗಳಾಗದು ...ಮರೆತು ತಿನ್ನಕ್ಕೆ ಅನ್ನಕಂಡಿದ್ರು."

"...ಆ ಪೈಕಿ ಒಬ್ಬ ಮಗನ ಜೊತೆ ಜೈಲಿಗೋದ ...?" ಎಂದ ವಾಟಿಸ್ಸೆ ಬಂದ.

"...ಅದ್ಯಾಕ್ಲ ನೆಟ್ಟಗೆ ಬರದೆ ಕುಣಕಂಡು ಬತ್ತಾಯಿದ್ದೆ. ...ಬರದು ಜಾಸ್ತಿಯಾಯ್ತೆ?" ಎಂದಳು ಜುಮ್ಮಿ.

"...ಈ ಟೈಮಲ್ಲಿ ಕುಣದಾಡಕ್ಕೆ ಜಾಸ್ತಿ ಕುಡಿಯೋ ...ಬೇನೇ ಇಲ್ಲ ಕಣಕ್ಕ. ಸುಮ್ಮನೆ ಕಟ್ಟಾ ಸುಬ್ರಮಣ್ಯ ...ಮಗನ್ನ ನೆನುಸಿಗಂಡ್ರೆ ಸಾಕು ನ್ಯಗದಾಡದಂಗಾಯ್ತದೆ."

"...ಆ ನನ ಮಕ್ಕಳ್ಯಾಕೆ ಜೈಲಿಗೋದುರ್ಲ?" ಎಂದ ...ಮಾವ.

"...ಆ ನಿನ್ನ ಮಕ್ಕಳು ದೊಡ್ಡಪ್ಪ, ಇಟಾಸ್ಕ್ ಅನ್ನೊ ಕಂಪನಿಗೆ ಮುನ್ನೂರು ಚಿಲ್ಲರೆ ಯಕರೆ ಜಮೀನು ಕೊಡುವಾಗ ಯಂಬತ್ತೇಳು ಕೋಟಿ ರೂಪಾಯಿ ಲಂಚ ತಗಂಡಿದ್ರು. ಮೂಲತಃ ಯವಾರಸ್ಥರಾಗಿದ್ರು ಪ್ರೂಲಿಶ್ ಫೆಲೋಗಳಾದ್ರಿಂದ ಈ ದೇಶದಲ್ಲಿ ಕೋರ್ಟದೆ, ಸಂವಿಧಾನ ಅದೆ, ಲೋಕಾಯುಕ್ತ ಅಂತ್ಲೂ ಅದೆ, ಅಲ್ಲಿ ಸಂತೋಷ್ ಹೆಗಡೆ ಅನ್ನೊ ಜಡಜು ಕುಂತವುರೆ ಅನ್ನೋದೇ ಗೊತ್ತಿಲ್ಲದ ನಿನ್ನ ಮಕ್ಕಳು ದೋಡಪ್ಪ" ಎಂದು ವಾಟಿಸ್ಸೆ. ನಿನ್ನ ಮಕ್ಕಳು ಎಂದ ಸಂಭೋದಿಸಿದ್ದಕ್ಕೆ ಸಿಟ್ಟುಗೊಂಡ ಕಾಳಮಾವ,

"ನನ್ನ ಮಕ್ಕಳು ಅಂತ ಯಾಕ್ಲ ಅಂತೀ?" ಎಂದ.

"ನೀನೇಳಿದ್ನೆ ನಾನು ಕೋಟ್ ಮಾಡಿದೆ ದ್ವಡಪ್ಪ, ಅವುರೇನು ಕಡಮೆ ಅಪ್ಪ ಮಗಲ್ಲ, ಸಂತೋಷ್ ಹೆಗ್ಡೆ ಮನಿಗೋಗಿ 'ನಾವು ತುಂಬ ಒಳ್ಳೆ ಜನ ಸಾರ್, ದೈವಭಕ್ತರು, ನಮಿಗೆ ಒಳ್ಳೆದು ಮಾಡಿ' ಅಂತ ಕೇಳಿಕಂಡಿದ್ರು. ಅದಕೆ ಸಂತೋಷ್ ಹೆಗ್ಡೆ 'ನೀವು ಒಳ್ಳೆಯವರಾಗಿದ್ರೆ ನಿಮಗೆ ಒಳ್ಳೆದಾಗತ್ತೆ ಹೋಗಿ' ಅಂದಿದ್ರು. ನಾಯ್ಡು ಆ ಮಾತ ನಂಬಿಕಂಡು ಆರಾಮಾಗಿದ್ದ. ಆದ್ರಿವತ್ತು ಪರಪ್ಪನ ಅಗ್ರಾರದ ಜೈಲಲ್ಲಿ ಪರಪರಾಂತ ಕೈರಕಂಡು ಅಳತಾ ಕುಂತವುನೆ. ಇದಕೇನೇಳ್ತೀ?"

"ಕೋಟ್ಯಂತರಪಾಯಿ ಆಸ್ತಿ ಮನೆ ಇದ್ರು ಜೈಲಲ್ಲಿ ಮನಿಗ್ಯವುನೆ ಅಂದ್ರೆ ಆಶ್ಚರ್ಯ ಕಣೊ ವಾಟಿಸ್ಸೆ" ಎಂದ ಉಗ್ರಿ.

"ನನ್ನಾಶ್ಚರ್ಯ ಏನು ಗೊತ್ತೇನೊ ಉಗ್ರಿ, ಕಟ್ಟಾ ಸುಬ್ರಮಣ್ಯ ನಾಯಿಡು ಅಂತ ಕ್ಯಲಸ ಮಾಡುವಾಗ ಮಂತ್ರಿಯಾಗಿದ್ದ. ಅದೂ ಎಡೂರಪ್ಪನ ಸಂಪುಟದಲ್ಲಿ. ಆ ಎಡೂರಪ್ಪ ಸರಿಯಾಗಿದ್ರೆ ಅವುನ ಮಂತ್ರಿಗಳು ಇಂತ ದರೋಡೆ ಮಾಡಕ್ಕಾಯಿತ್ತಾ? ಮುಖ್ಯಮಂತ್ರಿನೆ ಕಳ್ಳಾದಾಗ ಮಂತ್ರಿಗಳು ಕಳ್ಳರ ಕಳ್ಳಾಯ್ತರೆ! ಅದ್ಕೆ ನೋಡು ಕಟ್ಟಾ ನಾಯ್ಡು ಮಗನ ಜೊತೆ ಜೈಲಿಗೋದ ದಿನವೇ ಯೆಡೂರಪ್ಪನಿಗೂ ಸಮನ್ಸ್ ಬಂದಿದೆ. ಜೊತೆಗೆ ನಮ್ಮ ಕುಮಾರಣ್ಣ ಅಂಡ್ ಮಿಸಸ್‌ಗೂ ಕೋರ್ಟು ಸಮನ್ಸ್ ಬಂದದೆ."

"ಅವುನಿಗ್ಯಾಕ್ ಬಂದದ್ಲ?" ಎಂಬ ಕಾಳಮಾವನ ಪ್ರಶ್ನೆಯಲ್ಲಿ ಅಸಹನೆಯಿತ್ತು.

"ಅವುನಿಗೂ ಗಣಿಧೂಳು ಅಂಟಿಗಂಡದೆ ದ್ವಡಪ್ಪ. ಅದೂ ಅಲ್ದೆ ಅವುನ್ಯಾವನಿಗೋ ಬೆಂಗಳೂರಲ್ಲಿ ಭೂಮಿ ಕೊಟ್ಟು ಒಂದು ಸೈಟು ಈಸಗಂಡಿದ್ದನಂತೆ."

"ಅಂಗರವುನೂ ಸಿಗಾಯ್ಕಂಡ ಬುಡು."

"ಸಿಗಾಯ್ಕಳದೇನು, ಯಾವತ್ತು ಅನಿತಕ್ಕನ್ನ ನೆಗ್ಲೆಟ್ ಮಾಡಿ ರಾಧಿಕನಾ ಹಿಂದೆ ಹೋದ್ನೊ ಅವತ್ತೇ ಸಿಗಾಯ್ಕಂಡವುನೆ. ಅದ್ಕೆ ದ್ಯಾವೇಗೌಡ ರೇವಣ್ಣನ್ನ ಮುಂದಕೆ ನೂಕ್ತಾಯಿದ್ದನಂತೆ."

"ಅಂಗರಿವುನಿಗೋಲಿಸಿದ್ರೆ ಅವುನೆ ಪರವಾಗಿಲ್ಲ" ಎಂದ ಸೀರ.

"ಪರವಾಗಿಲ್ಲ ಅಂತ ಏನು ಇಲ್ಲಾ ಚಿಗಪ್ಪ, ಇದೇ ನಮ್ಮ ಕಾಳ ದೊಡ್ಡಪ್ಪ ಅಣ್ಣ ನೀನು ತಮ್ಮ, ಈ ತರ ಅದೂ ಒಂದು ಸಂಬಂಧ."

"ಎಡೂರಪ್ಪೇನು ಮಾಡ್ತ ಅವುನ್ಲ ಈಗ?" ಎಂದಳು ಜುಮ್ಮಿ.



"ಏನು ಮಾಡಬೇಕು ಅಂತ ಅವುನಿಗೇ ಗೊತ್ತಾಗ್ತಾಯಿಲ್ಲ ಕಣಕ್ಕ. ಅದ್ಕೆ ವಾರದಲ್ಲಿ ಯರಡಸತಿ. ಸಿದ್ದಂಗೆ ಸ್ವಾಮಿತಕ್ಕೆ ಬಂದು, ದಿವಂಗತರಿಗೆ ಊವು ಶಾಲು ಹಾಕೊ ತರದ ಕೆಲಸ ಮಾಡಿ, 'ಸ್ವಾಮಿ ನಾನೊಂದು ಬೆಂಜ್ ಕಾರ ತಗಂಡಿದ್ದಿನಿ. ಬನ್ನಿ ಅದರಲ್ಲೊಂದು ರವುಂಡಾಕಿ' ಅಂದನಂತೆ. ಸ್ವಾಮಿ ಹೋಗಿ ರವುಂಡಾಕಿದನಂತೆ."

"ಆ ಸ್ವಾಮಿಗೆ ಬಂದಿರೊ ತೆವುಲು ನೋಡಯ್ಯ ಬ್ಯಾಡ ಅನ್ನಕ್ಕಾಗಲಿಲವೆ?" ಎಂದ ಸೀರ.

"ಅದ್ಯಂಗನ್ನಕ್ಕಾಯ್ತದೆ ಚಿಗಪ್ಪ, ಈಗ ಇದ್ದಕ್ಕಿದ್ದಂಗೆ ಈ ಉಗ್ರಿ ಒಂದು ಅಂಬಾಸಿಡರ್ ಕಾರ್ ತಂದು 'ಬಾ ಮಾವ ಒಂದು ರವುಂಡಾಕನ' ಅಂದ್ರೆ ನೀನು ಓಡೋದಿ ಹತ್ತಿಗಳದಿಲವೆ. ಅಂಗೇ ಸಿದಗಂಗೆ ಸ್ವಾಮಿ ಹೋದ್ರು."

"ಅಂಬಾರ್‌ಸೆಟ್ರು ಕಾರು ಅಂದ್ರೆ ಅದ್ಯಾವುದ್ಲ ಚನಾಗಿದ್ದತೆ?" ಎಂದಳು ಜುಮ್ಮಿ.

"ಅಹ್, ನಮ್ಮ ಜುಮ್ಮಕ್ಕನ ಕುತೂಹಲ ನೋಡಪ್ಪ, ರೈತಾಪಿ ಜನ ಗಾಡಿ ಬಗ್ಗೆ ಯೋಚನೆ ಮಾಡದು ಬುಟ್ಟು ಕಾರಿನ ವಿಷಯದಲ್ಲಿ ತಲೆ ಕೆಡಿಸಿಗಂಡವುರೆ ಅಂದ್ರೆ ರಿಯಲಿ ವಂಡುಪುಲ್. ಅಂಬಾಸಿಡರ್ ಕಾರು ಅಂದ್ರೆ ಏನು ತಿಳಕಂಡಿದ್ದಿಯಕ್ಕಾ? ಐವತ್ತು ವರ್ಷ ಇಂಡಿಯಾದ ಸಿನುಮಾಗಳಲ್ಲಿ ಆಕ್ಟಿಂಗ್ ಮಾಡ್ಯದೆ. ಆ ತುದಿಲಿ ರಾಷ್ಟ್ರಪತಿಯ ಗಣರಾಜ್ಯೋತ್ಸವದ ಫೀಲ್ಡಿಗೆ ಕರಕಂಡು ಬರದರಿಂದ ಹಿಡದು, ಈ ತುದಿಲಿ ಕರೀಂ ಸಾಬರ ಹುಣಸೇ ಹಣ್ಣಿನ ಮೂಟೆನೂ ಹೊರತಾ ಅದೆ. ಬಟ್ ಕಲರ್ ಚೇಂಜ್ ಅಷ್ಟೆ. ಆ ಕಾರಿನೆದ್ರಿಗೆ ಬೆಂಜ್ ಏನೇನು ಅಲ್ಲ, ಅಂತಾ ಕಾರಲ್ಲಿ ಸಿದಗಂಗೆ ಸ್ವಾಮಿ ಸಾಯೋ ಕಡೆಸತಿ ರವುಂಡ್ ವಡಿತರೆ ಅಂದ್ರೆ ಏನೇಳನ?"

"ಅದಕಿಂತ್ಲುವೇ ಎಡೂರಪ್ಪ ಕೂತಿಗಳಿ ಸ್ವಾಮಿ ಅಂತ ಕರದಾಗ ಅರವತ್ತು ಲಕ್ಷ ರೂಪಾಯಿ ಕಾರ ಯಂಗೆ ತಗಂಡೇ? ದುಡ್ಡ್ಯಾರದು? ಅಂತ ಆ ಸ್ವಾಮಿ ಕೇಳಬಾರದೇನೊ. ಇಂಥೋನ ಜ್ವತೆ ಕಾರಲ್ಲಿ ಓಡಾಡಿದ್ರೆ ನನ್ನ ಮರಿಯಾದಿ ಏನು ಅಂತ ಯೋಚನೆ ಮಾಡದು ಬ್ಯಾಡವೆ? ಎಡೂರಪ್ಪ ಬೆಂಜ್ ಕಾರಲ್ಲಿ ಸಿದ್ದಗಂಗೆ ಸ್ವಾಮಿ ಕುಂಡ್ರಿಸಿಗಂಡು ಸುತ್ತಾಕುವಾಗ ಆ ಕಡೆ ಶಿಕಾರಿಪುರದಲ್ಲಿ ರೈತ ಮಾಡಿರೊ ಸಾಲ ತೀರಸಕ್ಕಾಗದೆ ನ್ಯಾಣಾಯ್ಕಂಡು ಸತ್ತನಂತೆ" ಎಂದ ಉಗ್ರಿ.

"ಅದಕು ಇದಕು ಏನೊ ಸಮಂದ ಉಗ್ರಿ? ಇದು ನನ್ನ ಕ್ವಸ್ನೆ ಅಲ್ಲ. ಎಡೂರಪ್ಪನ ಪ್ರಶ್ನೆ."

"ಸಾಯದನ್ನೆ ಮರತು ನೂರಾರು ವರ್ಷ ಬದುಕಿರೊ ಸ್ವಾಮಿ ತನ್ನ ದಿವ್ಯದೃಷ್ಟಿಯಿಂದ ಅದನ್ನೆಲ್ಲಾ ತಿಳಕಂಡು 'ಎಡೂರಪ್ಪ, ಅಧಿಕಾರ ಕಳಕಂಡೆ ಅಂತ ಅಳಬ್ಯಾಡ. ಹೋಗು, ಶಿಕಾರಿಪುರಕ್ಕೋಗು. ನಿನ್ನ ದೆಸಿಂದ ಸರಕಾರವೇ ಇಲ್ದಂಗಾಗಿ ಬಾರ್‍ಲಳಿದ ಯರ್‍ರಿ ಕೋಟೆಲಿ ಹತ್ತು ಜನ ಹೊಡದಾಕಿದರಂತೆ. ಹರಿಜನರಿಗೆ ಬೆಂಕಿ ಹಚ್ಚಿ ಸಾಯಿಸಿದ ಜಾಗ ಅದು. ಅಲ್ಲಿಗೋಗು' ಅನ್ನಬೇಕಾಗಿತ್ತು ಕಣೊ."

"ಸತ್ತಿರೋರು ಲಿಂಗಾಯಿತರಲ್ಲವಲ್ಲೊ?"

"!?"

ಒಂದೆಡೆ ಕೂತು ನೋಡಿದಾಗ.....


...ನಾನು ಈಚೆಗೆ ಪುಸ್ತಕಗಳ ಬಗ್ಗೆ ಬರೆಯುತ್ತಿರುವುದನ್ನು ...ರ್ಶಿಸಲೇಬೇಕೆಂದು ಹಟತೊಟ್ಟವನೊಬ್ಬ ಏನೇನೋ ಹೇಳುತ್ತಿದ್ದ. ...ನು ಅವನ ಅನಿಸಿಕೆಗಳನ್ನು ಕೇಳುತ್ತಾ ಕೂತಿದ್ದೆ. ಆತ ಒಂದು ...ಇಷ್ಟಪಡುತ್ತಾ ಮಾತಾಡಿದ. ನಾನು ಈ ಕೃತಿಯನ್ನು ಟೀಕಿಸುತ್ತಾ ...ಮಾತಾಡಿದೆ. ಆಗ ಇಬ್ಬರೂ ಸೇರುವ ಜಾಗವೇ ಇಲ್ಲವೆನ್ನಿಸಿತು. ನಾನು ಹೇಳಿದೆ. ನಿನಗೆ ಆ ಕೃತಿಯನ್ನು ಓದುವುದು ...ತ್ತು ಅದರಲ್ಲಿಯ ವಿಷಯಗಳನ್ನು ಅರಗಿಸಿಕೊಳ್ಳುವುದು ಬಹುಮುಖ್ಯ ವಿಷಯವಾಗಿದ್ದರೆ ನಿನ್ನ ಈ ಬಗೆಯ ...ದದಿಂದ ಏನೂ ಆಗುವುದಿಲ್ಲ, ನನ್ನ ಖಂಡನೆಯಿಂದಲೂ ಉಪಯೋಗವಿಲ್ಲ, ಪುಸ್ತಕಗಳನ್ನು ಕೇವಲ ರಂಜನೆಗೆ ...ದದೆ ಇಲ್ಲಿ ಬದುವುದಕ್ಕೆ ಅನಿವಾರ್ಯ ಕ್ರಿಯೆಯಾಗಿ ಓದಿದರೆ ನೀನು ಈ ಕೃತಿಯ ಜೀವಕಳೆಯ ಬಗ್ಗೆ ...ರೆಯಾಗಿಯೇ ಮಾತಾಡುತ್ತಿದ್ದೆ ಅಂದೆ. ಇಬ್ಬರೂ ಯೋಚಿಸುತ್ತಾ ಕೂತೆವು.

...ವಿಮರ್ಶಕ ಪುಸ್ತಕಗಳನ್ನು ಓದಿ ಅಭಿಪ್ರಾಯಗಳನ್ನು ಹೇಳುವವ ಮಾತ್ರ ಆಗಿ ಉಳಿದರೆ ಆತ ಕೃತಿಕಾರನಷ್ಟು ...ಮುಖ್ಯನಲ್ಲ; ಇನ್ನೊಬ್ಬರ ಕೃತಿಯನ್ನು ಅವಲಂಬಿಸಿಯೇ ಬದುಕುವವನು. ಸಾವಿರಾರು ವರ್ಷದಿಂದ ಸಾಹಿತ್ಯ ಮತ್ತು ...ಮರ್ಶೆ ಎರಡೂ ಬಂದಿದ್ದರೂ ಕಾಳಿದಾಸನ ಶಾಕುಂತಲವೋ ಶೇಕ್ಸ್‌ಪಿಯರ್‌ನ ...ಗ್‌ಲಿಯರೋ ಉಳಿದು ಅವುಗಳ ಮೇಲೆ ಬರೆದವರೆಲ್ಲ ಚರಿತ್ರೆಯ ಕಸದಬುಟ್ಟಿ ...ವಿದ್ದಾರೆ. ಆದರೆ ಶೇಕ್ಸ್‌ಪಿಯರ್ ಕುರಿತು ಬರೆದ ಜಾನ್‌ಸನ್ ತರಹದವರು ...ಮಾತ್ರ ರಸಿಕರ ನೆನಪಿನಲ್ಲಿದ್ದಾರೆ. ಕೋಲರಿಡ್ಜ್ ಇವತ್ತು ತಾನು ಪದ್ಯ ಬರೆದಷ್ಟೇ ...ಗೆಳೆಯ ವರ್ಡ್ಸ್‌ವರ್ತ್‌ನ ಬಗ್ಗೆ ಬರೆದದ್ದಕ್ಕೆ ಓದಲ್ಪಡುತ್ತಾನೆ. ಇದು ಕೇವಲ ...ದು ಒಳ್ಳೆಯದು. ಇದು ಕೆಟ್ಟದು, ಇದು ಪರವಾಗಿಲ್ಲ ಎಂಬ ಅಭಿಪ್ರಾಯದಿಂದ ...ದ್ದಲ್ಲ, ಇದನ್ನು ನಾವು ಕೆಲವು ಅತಿರೇಕಗಳಿಗೆ ಹೋಗಿ ನೋಡಿದಾಗ ತಿಳಿಯುತ್ತದೆ. ...ರ್ತರ್ ಎಂಬ ತತ್ವಜ್ಞಾನಿಗೆ ಜಾನ್ ಜೀನೆಯ ಬಗ್ಗೆ ಬರೆಯುವುದು ಕೇವಲು ...ಮಾತ್ರವಲ್ಲ, ತನ್ನ ಸ್ವಂತ ಕೃತಿ ಬರೆದಷ್ಟೇ ಮುಖ್ಯ ಕ್ರಿಯೆ. ಜೀನೆಯನ್ನು ಸಂತ ...ನೆಯನ್ನಾಗಿಸಿದ; ಜೀನೆ ಎಂಬ ಕೊಲೆಗಾರನ ತೀವ್ರತೆಯಲ್ಲಿನ ಅರ್ಥಕ್ಕಾಗಿ ...ಡುಕಿದ. ಶೇಕ್ಸ್‌ಪಿಯರ್ ಮೇಲೆ ಬರೆಯುವ ಜಾನ್‌ಸನ್ ತನ್ನೆಲ್ಲ ಪೂರ್ವಗ್ರಹಗಳನ್ನು ...ಟ್ಟುಕೊಂಡರೂ ಶೇಕ್ಸ್‌ಪಿಯರ್ ಜೀವಕ್ಕೆ ಹೇಗೆ ಅಗತ್ಯ ಎಂದು ಶೋಧಿಸಿದ. ...ಅರ್ಥದಲ್ಲಿಯೇ ಸಾಹಿತಿ ಮತ್ತು ಸಾಹಿತ್ಯವಿಮರ್ಶಕ ಇಬ್ಬರೂ ಸಮಾನರು. ...ತ್ರಗಳ ಮೇಲೆ ಬರೆದ ಕವಿಯಂತೆಯೇ ಕವಿಯ ಹಕ್ಕಿಯನ್ನು ವಿವರಿಸಿದವನು ...ಮುಖ್ಯ, ಇದರಿಂದಾಗಿ ನಾನು ನಮ್ಮ ಸಮಕಾಲೀನರ ಅಥವಾ ಹಳಬರ ಒಂದು ...ಅಥವಾ ಪದ್ಯ ತೆಗೆದುಕೊಂಡು ಪರಿಶೀಲಿಸುವುದು ಯಾವುದೇ ಒಂದು ...ನಸದ ವಸ್ತುವನ್ನು ಕುರಿತು ಧ್ಯಾನಿಸಿದಷ್ಟೇ ಮುಖ್ಯ. ಆದ್ದರಿಂದಲೇ ನಾನು ...ಮರ್ಶೆ ಬರೆದಾಗ ನನ್ನ ಬಗ್ಗೆಯೇ ಬರೆದುಕೊಳ್ಳುತ್ತಿದ್ದೇನೆ; ಈ ಬಂದು ಕವನ ...ದ ಮೇಲೆ ಯಾವ ಪರಿಣಾಮ ಬೀರಿದೆ ಎಂದು ನೋಡಿಕೊಳ್ಳುತ್ತಿದ್ದೇನೆ.



ನಮ್ಮಲ್ಲಿಗೆ ಬಹಳ ತರಹದ ಪುಸ್ತಕಗಳು ವಿಮರ್ಶೆಗಾಗಿ, ಅಭಿಪ್ರಾಯಕ್ಕಾಗಿ ಬರುತ್ತವೆ. ಒಂದು ಸಲ ಗೋವಿಂದ ಪೈಯವರ ಲೇಖನಗಳನ್ನೊಳಗೊಂಡ ಸಾವಿರಾರು ಪುಟದ ಪುಸ್ತಕ ಬಂತು. ಅನೇಕರು ಸೇರಿ ತಂದಿರುವ ಪುಸ್ತಕ; ಗೋವಿಂದ ಪೈಯವರನ್ನು ಕುರಿತು ಪ್ರೀತಿ, ಗೌರವ ಇರುವವರು ಪ್ರಕಟಿಸಿರುವ ಪುಸ್ತಕ. ಅಪಾರ ಬೆಲೆ ಉಳ್ಳದ್ದು, ಅವರು ನಮಗೆ ಪುಸ್ತಕವನ್ನು ಅವಲೋಕನಕ್ಕಾಗಿ ಕಳಿಸಿದ್ದಕ್ಕಾಗಿಯಾದರೂ ಆ ಬಗ್ಗೆ ನಾಲ್ಕು ಮಾತು ಬರೆಯುವುದು ನಮ್ಮ ಕರ್ತವ್ಯ. ಹಾಗೆಂದು ನಾನು ಪುಟ್ಟ ಟಿಪ್ಪಣಿ ಬರೆದೆ. ಹಾಗೆಯೇ ಕತೆ, ಕಾದಂಬರಿ, ಕವನಗಳ ಪುಸ್ತಕಗಳು ಬಂದರೆ ಅವುಗಳಲ್ಲಿ ಒಳ್ಳೆಯವು, ಕೆಟ್ಟವು, ಅಪಾಯಕಾರಿಯಾದವು ಅವುಗಳನ್ನು ನೋಡಿ ಹೇಳಬೇಕಾದ್ದು ನಮ್ಮ ಕರ್ತವ್ಯ.

ನಾನೀಗ ಕೂತಲ್ಲೇ ಕೂತಿರುವ ಮನುಷ್ಯ; ಓದುತ್ತಾ ಸ್ವಲ್ಪ ದೂರದಲ್ಲಿ ಅಡ್ಡಾಡುತ್ತಾ, ನಾನೇಕೆ ಬದುಕಿದ್ದೇನೆ, ಇದೆಲ್ಲದಕ್ಕೆ ಉದ್ದೇಶವಿದೆಯೇ ಎಂದು ನೋಡುತ್ತಿರುವ ಮನುಷ್ಯ, ನನ್ನ ನೆನಪುಗಳು, ಇವತ್ತಿನ ಗ್ರಹಿಕೆಗಳು, ಪುಸ್ತಕಗಳು, ಚಿತ್ರ, ಹಾಡುಗಳು–ಎಲ್ಲಕ್ಕೆ ಮನತೆರೆದು ಕೂರಲು ನನಗೆ ಇಷ್ಟ. ಇದೆಲ್ಲದರ ಒಂದು ಪುಟ್ಟ ಪರಿಣಾಮ ನನ್ನ ಪುಸ್ತಕಾವಲೋಕನಗಳು. ಅವು ಮಹಾ ವಿಮರ್ಶೆಗಳಲ್ಲ; ಆದರೆ ಸ್ಪಷ್ಟವಾಗಿ, ಸರಳವಾಗಿ ನೀಡಿದ ಗ್ರಹಿಕೆಗಳು. ಹೀಗೆ ನೋಡುವಾಗ ಚಿತ್ರವಿಚಿತ್ರ ವಿಷಯಗಳು ನನಗೆ ಎದುರಾಗಿವೆ. ಒಬ್ಬ ತುಂಬ ಜಾಣನಾಗಿ, ಚಿತ್ರವತ್ತಾಗಿ ಬರೆಯುತ್ತಾನೆ; ಆದರೆ ಆತ ಬರೆಯುತ್ತಿರುವುದೆಲ್ಲಾ ಡೋಂಗಿ ಅನ್ನಿಸುತ್ತದೆ. ಇನ್ನೊಬ್ಬ ಅಸ್ತವ್ಯಸ್ತವಾಗಿ ಮಂಕುಹಿಡಿದ ಮಗುವಿನಂತೆ ಮಾತಾಡುತ್ತಾನೆ. ಮತ್ತೊಬ್ಬ ಬಹಳ ಚಾಲೂಕಾಗಿ ಬರೆದಿದ್ದಾನೆ; ಆದರೆ ಆತ ಮುಖ್ಯ ಲೇಖಕನೋ ಅಲ್ಲವೋ ಗೊತ್ತಾಗುತ್ತಿಲ್ಲ, ಲಕ್ಷಾಂತರ ಧ್ವನಿಗಳಲ್ಲಿ ಕೆಲವು ಮಾತ್ರ ಮುಖ್ಯವೆನಿಸುತ್ತವೆ; ಈ ಜೀವಕ್ಕೆ ಮುಖ್ಯ ಅನ್ನಿಸುತ್ತವೆ. ಹೇಗೆ ಮುಖ್ಯ ಎಂದು ನೋಡಿದರೆ ಅದು ಒಂದು ರೀತಿಯ ವಿಮರ್ಶೆ.



ಈ ಬಗ್ಗೆ ಹೇಳುವುದು ಇನ್ನೂ ಇದೆ! ಜಾಗವಿಲ್ಲ. ಇವತ್ತಿಗೆ ಸಾಕು.

–ಸೆಪ್ಟೆಂಬರ್ 27, 1995

ಗೌಡರಿಗೆ ಸಾಬರ ದೆವ್ವದ ಕಾಟ ಇರಬೇಕು

'ಮನೆ ಖಾಲಿ ಇದೆಯ?'

'ಎಂತಹ ಮನೆ ಬೇಕು?'

'ದೆವ್ವದ ಮನೆ!'

ಆಶ್ಚರ್ಯ ಪಡುವಂತಹದ್ದೇನೂ ಇಲ್ಲ. 'ದೆವ್ವದ ಮನೆ' ಇರದ ನಗರ ಪಟ್ಟಣಗಳೇ ಇಲ್ಲ ಅನ್ನಬಹುದು. ಅನಾದಿಕಾಲದಿಂದಲೂ ದೆವ್ವಗಳು ಆಶ್ರಯ ಪಡೆದಿದ್ದ ಸ್ಮಶಾನಗಳು ಭೂಗಳ್ಳರ ಉದರ ಸೇರಿವೆ; ಆಹ್ಲಾಯಮಾನವಾದ ಹುಣಿಸೆ ಮರಗಳು 'ಅಭಿವೃದ್ಧಿ' ಭರಾಟೆಯಲ್ಲಿ ಮಾಯ ಆಗಿವೆ. ಪಾಪ ಅವಕ್ಕೆ ನೆಲೆಯೇ ಇಲ್ಲದ ಹಾಗಾಗಿದೆ. ಅವು ತಾನೆ ವಾಸಿಸಲು ಒಂದು ಜಾಗ ಅಂತ ಇರಬೇಕಲ್ಲ? ಯಾವುದೋ ಒಂದು ಮನೆ ಹುಡುಕಿಕೊಳ್ಳುವುದು ಅನಿವಾರ್ಯವಾಗುತ್ತದೆ. ಅಂತಹ ಮನೆಯ ತಲಾಷಿಯಲ್ಲಿದ್ದರು ಅವರು.

'ದೆವ್ವದ ಮನೆ' ಕೇಳುತ್ತಿರುವ ಮನುಷ್ಯ ಏನಾದರೂ ದೆವ್ವಗಳ ಕುರಿತು ಸಂಶೋಧನೆ ನಡೆಸುತ್ತಿರಬಹುದಾ? ದೆವ್ವಗಳ ವಶೀಕರಣ ವಿದ್ಯೆ ಏನಾದರೂ ಕರಗತ ಮಾಡಿಕೊಂಡಿದ್ದಾನಾ? ಇದು ಯಾವುದೂ ಇಲ್ಲವಂತೆ. ಸಾಮಾನ್ಯವಾಗಿ ದೆವ್ವಗಳು ಎಲ್ಲರ ಕಣ್ಣಿಗೂ ಬೀಳುವುದಿಲ್ಲ, 'ದೆವ್ವಗಣ್ಣು' ಇದ್ದವರಿಗೆ ಮಾತ್ರ ಕಾಣಿಸಿಕೊಳ್ಳುತ್ತವಂತೆ. ಅವರಿಗೆ ಅದೂ ಇದ್ದ ಹಾಗಿಲ್ಲ, ಯಾಕೆಂದರೆ ಅವರು ಇದುವರೆವಿಗೂ ದೆವ್ವವನ್ನೇ ನೋಡಿಲ್ಲವಂತೆ! ಆದರೂ ದೆವ್ವ ಗಣಿ ಇದೆ ಎಂದು ಅವರು ನಂಬಿದ್ದಾರೆ. ಅಂತಹವರು ಯಾವ ಯಾವ ಮನೆಗಳಲ್ಲಿ ದೆವ್ವಗಳು ವಾಸಿಸುತ್ತಿವೆ ಎಂಬುದರ ಕುರಿತು ಮಾಹಿತಿ ನೀಡಬೇಕು; ಅವು ಜನಜನಿತವಾಗಬೇಕು. ಆಗ ನೋಡಿ ಅವರಿಗೆ ಆನಂದವೋ ಆನಂದವಂತೆ! ಏಕೆಂದರೆ 'ದೆವ್ವದ ಮನೆ' ಇದ್ದರೆ ಕಡಿಮೆ ಬಾಡಿಗೆಗೆ ಅನುಕೂಲಕರ ಮನೆ ದೊರಕಬಹುದು ಎಂಬ ದೂರದ ಆಸೆಯಂತೆ!

'ಇಲ್ಲೊಂದು ಇದೆ. ಇನ್ನೇನು ಖಾಲಿಯಾಗಬಹುದು.'


'ಯಾವುದು?'

'ಅನುಗ್ರಹ!'

ಸುಳ್ಳು ಹೇಳಿರಲಿಲ್ಲ, ಅದು ಮುಖ್ಯಮಂತ್ರಿಗಳ ಅಧಿಕೃತ ನಿವಾಸ ನಿಜ. ಅದರೊಳಕ್ಕೆ ದೆವ್ವ ಹೊಕ್ಕಿದೆಯಂತೆ!

ದೆವ್ವದ ಪ್ರಭಾವವೇ ಇರಬೇಕು. ಆ ಮನೆಯಲ್ಲಿ ಇದುವರೆವಿಗೆ ವಾಸಿಸಿದ ಯಾರಿಗೂ ನೆಮ್ಮದಿ ಇರಲಿಲ್ಲ, ಅಲ್ಲಿ ವಾಸಿಸಿದ ಯಾವ ಮುಖ್ಯಮಂತ್ರಿಯೂ ಪೂರ್ಣಾವಧಿ ಅಧಿಕಾರ ನಡೆಸಲು ದೆವ್ವ ಬಿಟ್ಟಿರಲಿಲ್ಲ. ಎಸ್.ಎಂ. ಕೃಷ್ಣ ವಾಸ್ತುಶಾಸ್ತ್ರದ ಪ್ರಕಾರವೇ 'ಅನುಗ್ರಹ'ವನ್ನು ಬದಲಾಯಿಸುವ ಅನುಗ್ರಹ ತೋರಿದ್ದರು. ಪೂರ್ಣಾವಧಿ ಅಧಿಕಾರವನ್ನು ಚಲಾಯಿಸಿದ್ದರು ಎಂಬುದೂ ಸತ್ಯವೇ. ಆದರೆ ಅವರಿಗೆ ನೆಮ್ಮದಿ ಸಿಕ್ಕಿತ್ತೆ? ಖಂಡಿತವಾಗಿಯೂ ಇಲ್ಲ. ಅವರ ಆಳ್ವಿಕೆಯಲ್ಲಿ ಸತತವಾಗಿ ಮೂರು ವರ್ಷ ಬರಗಾಲ ಬಡಿಯಿತು; ರಾಜ್‌ಕುಮಾರ್ ಅಪಹರಣ ಆಯಿತು; ಕಾವೇರಿ ನೀರು ಸುಸ್ತು ಮಾಡಿತು. ವಾಸ್ತುಶಾಸ್ತ್ರ ಎಂಬ ಶಾಸ್ತ್ರವೇ ದೆವ್ವ ಶಾಸ್ತ್ರದ ಕಾಲ ಬಳಿ ಬಿದ್ದಿತ್ತು!

ಆ ದೆವ್ವ ಅನ್ನೋದು ವಾಸ್ತುಶಾಸ್ತ್ರಪ್ರಿಯ ಕೃಷ್ಣ ಅವರಿಗೇ ಹಿಂಗೆ ಅಟಕಾಯಿಸಿಕೊಳ್ತಲ್ಲ ಕುಮಾರಣ್ಣರಿಗೆ ಹಣ್ಣುಗಾಯಿ ನೀರುಗಾಯೀನೆ ಮಾಡಿತು. ಸರೊತ್ತಿನಲ್ಲಿ ಭಾರವಾದ ಏನನ್ನೋ ಎತ್ತಿ ಹಾಕ್ತಿತ್ತು. ಆ ಶಬ್ದಕ್ಕೆ ಕುಮಾರಣ್ಣೋರು ಬೆಚ್ಚಿ ಬೆವತು ಹೋಗೋರಂತೆ. ಇದು ಸಾಲದು ಅಂತ ಅವರ ಹೆಸರಿಡಿದು ಕೂಗದಂತೆ. ಅವರಿಗೆ ಮೊದಲೇ ತಿಳಿದಿತ್ತಲ್ಲ ಇದೆಲ್ಲ ಆ ದೆವ್ವದ ಕಾಟವೇ ಅಂತಾವ, ಅದ್ಯೇ ಕೇಳಿಸಿದ್ರೂ ಕೇಳಿಸ್ದೋರಂಗೆ ಮನಿಕ್ಕತ್ತಿದ್ರಂತೆ. ಆ ಹಾಳು ಬಸ್ತಿ ದೆವ್ವ ಅವರಿಗೊಬ್ಬರಿಗೇ ಅಲ್ಲ ಹಿಂಗೆಲ್ಲ ಕಾಟ ಕೊಡ್ತಿದ್ದದ್ದು. ಇರೋ ಒಬ್ಬಳೆಂಡ್ತಿ ಮಗನ್ನೂ ಹಂಗೇ ಮಾಡ್ತಿತ್ತಂತೆ. ಅಣ್ಣಾವರೇನೋ ತಿಳಿದವರು. ಅದು ಏನು ಟ್ರಿಕ್ ಮಾಡಿದರೂ ಕ್ಯಾರೆ ಮಾಡ್ತಿರಲಿಲ್ಲ ಅನ್ನಿ. ಆದ್ರೆ ಏನೂ ಅರೀದ ಹೈದ ' ಇತ್ತಲ್ಲ ಅದ್ಯೇನು ತಿಳಿದಾತು



ಪಾಪ. ಅದರ ಹೆಸರಿಡ್ಡೂ ಕೂಗಾದಂತೆ. ಒಂದೊಂದ್ಸಲ ಹೆಣ್‌ಫ್ರೆಂಡ್ಸ್ ಕರೆದಂತೆ. ಇನ್ನೊಂದ್ಸಲ ಗಂಡ್ಸು ಫ್ರೆಂಡ್ಸ್ ತರ ಕೂಗದಂತೆ. ಆ ಅರೀದ ಹೈದ 'ಓ ಫ್ರೆಂಡ್ಸ್ ಬಂದವ್ರೆ' ಅನ್ಕಂಡು ಹೋಗೇ ಬುಡೋದಂತೆ. ಮನೆಯವರಿಗೇನೋ ಆ ಹೈದ ಯಾಕಂಗೆ ಹೋಗದೆ ಅನ್ನೋದು ತಿಳ್ದಿತ್ತು. ಆದರೆ ಜನಕ್ಕೆ ತಿಳೀಬೇಕಲ್ಲ, ಹೊತ್ತಲ್ಲದ ಹೊತ್ನಲ್ಲಿ ಬೀದಿಬೀದಿ ಅಲೀತ ಬದ್ದದಲ್ಲ ಪೋಕ್ರಿ ಬಡ್ಡೆತ್ತುದು ಅನ್ನೋರಂತೆ. 'ಚಿನ್ನದಂತ ಮಗೀಗೆ ಹಿಂಗೆಲ್ಲ ಅಂತಾರಲ್ಲ' ಅಂತ ಹೆತ್ತ ಕರುಳಿಗೆ ಬಾರಿ ನೋವಾಗದಂತೆ. ತಡೀಲಾರ್ದೆ 'ಆ ಹುಡುಗನದೇನೂ ತಪ್ಪಿಲ್ಲ ಕಣ್ರೀ. ಇದೆಲ್ಲ ಆ ಹಾಳಾದ ದೆವ್ವದ ಕಾಟ' ಅಂದ್ರೂ ಯಾರೂ ನಂಬ್ತಾನೆ ಇರಲಿಲ್ಲವಂತೆ. ಅದ್ಯಾವುದೋ ಮಠದಿಂದ ಹಸ ತಂದು ಮನೆ ಒಳಕ್ಕೆ ನುಗ್ಗಿಸಿದ್ರೂ ಏನೂ ಪ್ರಯೋಜನ ಆಗಲಿಲ್ಲವಂತೆ. ಅದರ ಕಾಟ ನಿಲ್ಲಲೇ ಇಲ್ಲವಂತೆ. ಇಷ್ಟೆಲ್ಲ ನೋವುಂಡ ಕುಮಾರಣ್ಣೋರು ಇಪ್ಪತ್ತು ತಿಂಗಳಿಗೇ ಅಳ್ತಾ ಅಳ್ತಾ ಕುರ್ಚಿ ಖಾಲಿ ಮಾಡೋಹಂಗೆ ಮಾಡ್ತಂತೆ ಆ ಹಾಳು ಬಸ್ತಿದೆವ್ವ.

ಆಮೇಲೆ ಬಂದ್ರಲ್ಲ ಯಡ್ಯೂರಪ್ನೋರು. ಬಲೇ ಹುಷಾರಿ ಮನುಷ್ಯ ಅಲ್ವ. ಇದ್ನೆಲ್ಲ ತಿಳ್ಕಂಡಿದ್ರು. 'ಅನುಗ್ರಹ'ದ ಕಡೆ ತಲೆ ಹಾಕೂ ಮಲಗಲಿಲ್ಲ, ಅದ ಉಪಾಯವಾಗಿ ವಿ.ಎಸ್. ಆಚಾರ್ಯರ ಕೊರಳಿಗೆ ಕಟ್ಟಿದ್ರು. ಮುಖ್ಯಮಂತ್ರಿ ಆಗದಿದ್ದರೇನು ಅವರು ಇರಬೇಕಾದ ಮನೇಲೆ ಇದ್ದೀನಲ್ಲ ಅಂತ ಖುಷಿ ಖುಷಿಯಾಗೇ 'ಅನುಗ್ರಹ' ಸೇರಿಕೊಂಡರು. ಹಿಂದಿನ ಕತೆ ಎಲ್ಲ ಗೊತ್ತಿರಲಿಲ್ಲ ಅಂತ ಅಲ್ಲ, ಎಲ್ಲವೂ ತಿಳಿದಿತ್ತು, ಆದರೆ ಜನಿವಾರ ಎಂಬ ಬ್ರಹ್ಮಸೂತ್ರ ಇತ್ತಲ್ಲ. ಜನಿವಾರ ಹಾಕಿಕೊಂಡಿದ್ರೆ ಅವರ ಹತ್ತಿರಾನೂ ದೆವ್ವ ಸುಳಿಯೋಲ್ಲ ಎನ್ನುವ ಮಾತಿದೆ. ಆ ಧೈರ್ಯ ಇರಬೇಕು ಆಚಾರ್ಯರಿಗೆ. ಆದರೇನಾಯ್ತು ಅಂತೀರಿ? ಜನಿವಾರ ಆಚಾರ್ಯರು ಅನುಗ್ರಹ ಸೇರಿದ ಹದಿನೈದು ದಿನಕ್ಕೆಲ್ಲ ಓಡಿಹೋಗಂಗೆ ಮಾಡ್ತಂತೆ. ಜನಿವಾರಕ್ಕೇ ನೀರು ಕುಡಿಸ್ತು ಅಂದ್ರೆ ಅದಿನ್ನೆಷ್ಟು ಪವರ್‌ಫುಲ್ ದೆವ್ವ ಅಂತೀನಿ.

ದೆವ್ವಗಳಿಗೂ ನೀತಿನಿಯತ್ತು ಅನ್ನುವುದು ಇರುತ್ತದೆ. ಯಾರ ಮನೆ ಅಂದರೆ ಅವರ ಮನೆಯನ್ನು ಸೇರಿಕೊಳ್ಳುವುದಿಲ್ಲ, ದೆವ್ವ ಆಗೋರು ಆಕಸ್ಮಿಕವಾಗಿ ಸಾವು ಬಂದೋರು. ಅಂತಹವು ತಮ್ಮ ಮನೆಯಲ್ಲೇ ವಾಸಿಸಲು ಬಯಸುತ್ತವೆಯೇ ಪರಂತು ಬೇರೆ ಮನೆಯ ಆಶ್ರಯ ಪಡೆಯಲು ಇಚ್ಛಿಸುವುದಿಲ್ಲ, ಇಂತಹ ನೀತಿ ನಿಯತ್ತನ್ನು ಪಾಲಿಸುವ ದೆವ್ವಗಳು 'ಅನುಗ್ರಹ'ವನ್ನೇ ಯಾಕೆ ತಮ್ಮ ವಾಸಸ್ಥಾನ ಮಾಡಿಕೊಂಡವು? ಇಲ್ಲಿಯೂ ಯಾರಾದರೂ ಆಕಸ್ಮಿಕ ಮರಣ ಹೊಂದಿದ್ದರಾ ಅಂದರೆ ಅಂತಹ ಘಟನೆ ಯಾವುದೂ ನಡೆದದ್ದು ಇಲ್ಲವಂತೆ. ತಿಳಿದೋರು ಇದ್ರಲ್ಲ ಇದ್ನೆಲ್ಲ ಲೆಕ್ಕಾಚಾರ ಹಾಕಿದ್ರಂತೆ. ಎಲೆಲಾ ಇಲ್ಲಿಗೆ ಎಲ್ಲಿಂದ ಬಂದೊ ದೆವ್ವಗಳು ಅನ್ನೋದ ತಡ್ಯೋಕೆ ಸುರು ಹಚ್ಕಂಡ್ರಂತೆ. ಹುಡುಕಾಟದಲ್ಲಿದ್ದಾಗ ಮನೆ ಹಿಂದೇನೆ ರೈಲು ಹಳಿ ಇರೋದು ತಿಳೀತಂತೆ. ಶಾನೆ ರೈಲು ಓಡಾಡ್ತವೆ ಅನ್ನೋದ್ನೂ ಪತ್ತೆಹಚ್ಚಿದರಂತೆ. ರೈಲಿಗೆ ಸಿಕ್ಕಿ ಸಾಯುವವರೇನು ಮಸಿ ಜನವಾ. ಬೇಜಾನಾಗಿ ಸಾಯ್ತಾರೆ. ಹಂಗೆ ಸತ್ತಿರೋರು ದೆವ್ವ ಆಗವೆ. ತಂಗಕ್ಕೆ ಜಾಗ ಅಂತ ಒಂದು ಬೇಕಲ್ಲ, ಊರಗಲ ಅದಲ್ಲ ಮನೆ ಇದೇ ಸರಿಯಾದ ಜಾಗ ಅಂದ್ಕಂಡು 'ಅನುಗ್ರಹ'ದಲ್ಲಿ ಠಿಕಾಣಿ ಹೂಡವಂತೆ! ಇದನ್ನೆಲ್ಲ ತಿಳಿದೋರು ಪತ್ತೆಹಚ್ಚಿದರು. ಬೆಂಗಳೂರಿನಲ್ಲೇನು ಮನೆಗಳಿಗೆ ಬರವಾ. ಬೇರೆ ಎಲ್ಲಿಯಾದರೂ ಇರಬಹುದಾಗಿತ್ತಲ್ಲ ಅಂದ್ರೆ... ಏಯ್ ಅದರೊಂದು, ಇಲ್ಲಿರೋ ಸವಲತ್ತು ಎಲ್ಲ ಮನೆಗಳಲ್ಲೂ ಇರುತ್ತಾ....

ಇನ್ನೊಂದು ಪ್ರಶ್ನೆಗೂ ಉತ್ತರ ಕಂಡುಹಿಡಿದು ಕೊ[...] ಬೇಕಾದ ಆವಶ್ಯಕತೆ ಇದೆ. 'ಅನುಗ್ರಹ' ಹೊಕ್ಕಿರುವುದ[...] ಹೆಣ್ಣು ದೆವ್ವವೊ? ಗಂಡು ದೆವ್ವವೊ? ಅದಕ್ಕಿಂತಲ[...] ಮಹತ್ವದ ಸಂಗತಿ ಎಂದರೆ ಅದರ ಕುಲ, ಗೋ[...] ಯಾವುದು? ಹಿಂದೂ ದೆವ್ವ ಆದರೆ ಹೇಗೋ ನಿಭಾಯಿ[...] ಬಹುದು. ಕ್ರಿಶ್ಚಿಯನ್ ದೆವ್ವ ಆದರೂ ಪರವಾಗಿಲ್ಲ, `Hol[y] Water' ಹಾಕಿದರೆ ಪದರಗುಟ್ಟಿಕೊಂಡು ಓಡಿಹೋಗ[...] ತ್ತವಂತೆ. ಆದರೆ ಹಾಳಾದ ಸಾಬರ ದೆವ್ವ ಆಗಿದ್ದರೇನ[...] ಗತಿ? ಮೊದಲೇ ಸದಾನಂದ ಗೌಡರಿಗೂ ಸಾಬರಿಗೂ ಆಗಬರುವುದಿಲ್ಲ, ದೆವ್ವಗಳಿಗೆ



ಎಚ್.ಎಲ್. ಕೇಶವಮೂರ್ತಿ

ಅಣಕ

ದಿಗ್ಬಂಧನ ಮಾಡಿಸಬಹುದು. ಆದರೂ ಸಾಬರ ದೆ[...] ಅವರನ್ನ ನೆಮ್ಮದಿಯಿಂದ ಇರುವುದಕ್ಕೆ ಬಿಡುತ್ತಾ? ಆ[...] ತಿಂಗಳೂ ಬೇಕಿಲ್ಲ. ಅದರ ಮೊದಲೇ.... ಹುಂ ಇರಲಿ[...] 'ಅನುಗ್ರಹ'ದಲ್ಲೇ ವಾಸ್ತವ್ಯ ಹೂಡುವಂತೆ ಗೌಡರಿಗೆ ಸಲ[...] ನೀಡಿದವರು ಯಾರು?..... ಯಡ್ಯೂರಪ್ನೋರೆ ಇರಬಹುದ[...] ಅನ್ನೊ ಅನುಮಾನ ಅಷ್ಟೆ!

'ಅನುಗ್ರಹ ಯಾವಾಗ ಖಾಲಿ ಆಗುತ್ತಂತೆ?'

'ಗೊತ್ತಿಲ್ಲ, ಕೆಲವೇ ದಿವಸಗಳಲ್ಲಿ ಆಗುತ್ತೆ.'

'ಬಾಡಿಗೆಗೆ ಸಿಗುತ್ತಾ?

'ಕೇಳಿ ನೋಡಿ. ತಿಳಿದೋರು ಕೆಡವಿ ಅನ್ನುತ್ತಿದ್ದರು'

'ಹೋಗ್ಲಿ ಸೈಟಾದ್ರೂ ಸಿಗಬಹುದಾ?'

'ಗೌಡರ ನೆಂಟರಾ ನೀವು?'

'ದೂರದ ನೆಂಟ.'

'ಮಠಗಳ ಸಂಬಂಧ?'

'ಬೇಜಾನಾಗಿದೆ'

'ಟ್ರೈ ಮಾಡಿನೋಡಿ. ಸಿಕ್ಕಿದರೂ ಸಿಕ್ಕಬಹುದು!'

ಹಾಳಾದ ಕನಸು

ಬೆಂಗಳೂರು ಸಿಲಿಕಾನ್ ವ್ಯಾಲಿ. ಐಟಿ ಬಿಟಿಯ ಸ್ವರ್ಗ[...]

ಹಣಕ್ಕೆ ಕೊರತೆ ಇಲ್ಲ,

'ಸಿಂಗಪುರ' ಆಗ ಬಾರದೆ 'ಬೆಂಗಳೂರು'?

ಇದು ಬಹುದಿನದ ಕನಸು.

ಏನಾಶ್ಚರ್ಯ, ಬೆಂಗಳೂರು 'ಸಿಂಗಪುರ' ಆಗಿಯೆ[...] ಹೋಯಿತು!

ಯಡ್ಯೂರಪ್ಪನವರು ಬಂದರು. ಸಿಂಗಪುರ ಆಗಿ[...] ಬೆಂಗಳೂರು ನೋಡಿದರು. ಮನಸ್ಸಿಗೆ ಹಿಡಿಯಿತು.

ಏನು ಮಾಡಿದರು ಅವರು?

'ಸಿಂಗಪುರ'ವನ್ನೇ ಕೊಂಡುಕೊಂಡರು!

ಥೂ ಹಾಳಾದ ಕನಸು.....

ಇಂದಿರಾ ಅವರ 'ಹುಳಿಮಾವು ಮತ್ತು ನಾನು' ಚೆನ್ನಾಗಿದೆ

ಇಂದಿರಾ ಲಂಕೇಶರ ಹಳೆಯ ನೆನಪುಗಳ ಓದುತ್ತಿದ್ದಂತೆ ಬಾಲ್ಯದ ದಿನಗಳು ನೆಪ್ಪಿಗೆ ಬಂದವು. ಮದುವೆಯ ಬಗ್ಗೆ ಅಷ್ಟಾಗಿ ತಿಳಿಯದ, ಮನೆಯವರ ಇಷ್ಟದಂತೆ ತಲೆ ಅಲ್ಲಾಡಿಸುವ ಹುಡುಗಿಯೊಬ್ಬಳು ವರ ಮನೆಗೆ ಬಂದಾಗ ಅನುಭವಿಸುವ ಮುಜುಗರ ಆಕೆಗಷ್ಟೇ ಗೊತ್ತು. ವಧು ನೋಡಲು ಬಂದ ಲಂಕೇಶರು ಟೈಂ ಕೇಳಿದೊಡನೆ ಇಂದಿರಾ ಅವರು "ಹತ್ತುಗಂಟೆ ಹತ್ತು ನಿಮಿಷ" ಎಂದು ಉತ್ತರಿಸಿದ ರೀತಿ ನಗೆಬರಿಸಿತು. 'ತಾಯಿ ಸತ್ತರೆ ಮಕ್ಕಳ ಗತಿ ಆಯಿತು' ಎನ್ನುವ ವಾತಾವರಣದಲ್ಲಿ ಹೆಣ್ಣುಮಕ್ಕಳನ್ನು ಪ್ರೀತಿ, ವಾತ್ಸಲ್ಯದಿಂದ ಕಂಡು ಅವರನ್ನು ಜತನದಿಂದ ಸಾಕಿದ ಇಂದಿರಾ ಅವರ ತಂದೆ ಸೋಮಸುಂದರ್ ಅವರ ಕಾಳಜಿ ಸ್ಮರಣೀಯ. ತಾವು ಬೆಳೆದ ಪರಿಸರದ ದಟ್ಟ ಅನುಭವಗಳನ್ನು 'ಹುಳಿಮಾವು ಮತ್ತು ನಾನು'ವಿನಲ್ಲಿ ಕಟ್ಟಿಕೊಡುತ್ತಿರುವ ಇಂದಿರಾ ಲಂಕೇಶರ ಅಕ್ಷರ ಹಾದಿ ಹೀಗೆ ಮುಂದುವರೆಯಲಿ.

- ಹಳ್ಳಿ ಬಸವರಾಜ, ಹಸಮಕಲ್ (ಸಿಂಧನೂರು)

ನನ್ನ ಕಣ್ಣಾಲಿಗಳಲ್ಲಿ ಹನಿಗೂಡಿದವು. ಉಪ್ಪುಪ್ಪಾದ - ಹುಳಿಯಾದ ಆ ಹನಿಗಳು ನನಗರಿವಿಲ್ಲದಂತೇ ಕೆನ್ನೆಗೆ ಜಾರಿ ತುಟಿಯಂಚನ್ನು ತಲುಪಿದವು. ಒಂದುಕ್ಷಣ ಅವಾಕ್ಕಾದೆ. ಪತ್ರಿಕೆಯನ್ನು ಕೈಯಲ್ಲಿ ಹಿಡಿದೇ ಸುತ್ತಲೂ ಕಣ್ಣಾಡಿಸಿದೆ. ಯಾರೂ ಇರಲಿಲ್ಲ, ಸುಧಾರಿಸಿದೆ.

ಈ ಮೇಲಿನ ಭಾವನೆಗಳನ್ನು ವ್ಯಕ್ತಪಡಿಸಲು ಹಿರಿಯ ಪತ್ರಕರ್ತ ಅರುಣ್ ಶೌರಿ, ಅವರ ಪತ್ನಿ ಅನಿತ ಮತ್ತು ಅವರ ಅಂಗವಿಕಲ ಪುತ್ರ ಆದಿತ್ಯರೇ ಕಾರಣ. 1999ರ ಲೋಕಸಭಾ ಚುನಾವಣೆಯ ಆ ದಿನಗಳಲ್ಲಿ ಬಳ್ಳಾರಿ ಲೋಕಸಭಾ ಕ್ಷೇತ್ರ ವಿಶ್ವಗಮನ ಸೆಳೆದಿತ್ತು, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ - ಬಿಜೆಪಿಯ ಫೈರ್ ಬ್ರಾಂಡ್ ಸುಷ್ಮಾ ಸ್ವರಾಜ್ ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರು. ದೇಶದ ಜಿದ್ದಾಜಿದ್ದಿನ ಕ್ಷೇತ್ರ[...] ಕಾಂಗ್ರೆಸ್-ಬಿಜೆಪಿ ಮಧ್ಯೆ ತೀವ್ರ ತಿಕ್ಕಾಟವಿದ್ದ ಕ್ಷೇತ್ರ. ಆ ಸಂದರ್ಭದ[...] ಬಿಜೆಪಿ ಪರವಾಗಿ ಪ್ರಚಾರ ನಿರ್ವಹಣೆಗಾಗಿ ಪತ್ರಕರ್ತ ಅರುಣ್ ಶೌರಿ ಅವರು ವಾರಗಟ್ಟಲೆ ಇಲ್ಲೇ ನೆಲೆಸಿದ್ದರು.

ಆ ಸಂದರ್ಭದಲ್ಲಿ ಅವರೊಂದಿಗೆ ಕೆಲಕ್ಷಣಗಳನ್ನು ಕಳೆದಿದ್ದ ನನ[...] ಅವರೊಮ್ಮೆ "ವಿಶೇಷ ವಿಕಲ್ಪ ಮಗನ ತಂದೆ" ಎಂದಾಗ ದಂಗಾ[...] ಶೌರಿಯವರ ಮೇರು ವ್ಯಕ್ತಿತ್ವಕ್ಕೆ ಆದಿತ್ಯನ ಆರೈಕೆ ದೊಡ್ಡ ಸವಾಲಾಗಿತ[...] ಕ್ಷಣಹೊತ್ತು ಮೌನವಾಗಿಯೇ ಕೂತಲ್ಲೇ ಬೆವರಿದ್ದೆ. ಶ್ರೀಮಂತಿ[...] ಉತ್ತಮ ಸಂಪರ್ಕಗಳು, ಖ್ಯಾತಿ, ಕೀರ್ತಿ, ಏನೆಲ್ಲಗಳ ಮಧ್ಯೆ ಅವರ[...] ಮತ್ತೊಬ್ಬ ಮಗನಿಗಾಗಿ ಹಂಬಲಿಸದೇ ಇರುವ ಒಬ್ಬ ವಿಶೇಷ ಮಗ[...] ಆರೈಕೆಯಲ್ಲಿ ಪ್ರೀತಿ, ವಿಶ್ವಾಸ ತೋರಿದ್ದರು.

ಸುಷ್ಮಾ ಸ್ವರಾಜ್ ಪರವಾದ ಪ್ರಚಾರ ಕಾರ್ಯದಲ್[...] ಕೂಡ ಪ್ರತಿ 10-20 ನಿಮಿಷಗಳಿಗೊಮ್ಮೆ ದೂರ[...] ದೆಹಲಿಯಲ್ಲಿದ್ದ ಆದಿತ್ಯನ ಊಟ, ತಿಂಡಿ, ಔಷಧ ಏನೆ[...] ವಿಚಾರಣೆ ನಡೆಸಿ ತಂದೆಯ ಜವಾಬ್ದಾರಿ ನಿರ್ವಹಿಸುತ್ತಿದ್ದ[...] ಪ್ರೀತಿಯ ಆದಿತ್ಯನಿಗಾಗಿ ಬಳ್ಳಾರಿಯ ಜೀನ್ಸ್‌ಗಳನ[...] ಖರೀದಿಸಿದ್ದರು. ಆದಿತ್ಯ - ಅನಿತಾರ ಮಧ್ಯೆ ಶೌರಿ ಅವರ ತಾಳ[...] ತನ್ನವರ ಸೇವಾ ತಲ್ಲೀನತೆ, ಏಕಾಗ್ರತೆಗಳಲ್ಲಿ ಅವರ ಜೀವಾಳವಾಗಿರು[...] ಬರೆಹ - ಓದು, ರಾಜಕೀಯ ಎಲ್ಲವುಗಳನ್ನು ಮುಂದುವರೆಸುತ್ತಿರುವುದ[...] ಅವರ ಸಾಮರ್ಥ್ಯವನ್ನು ತೋರುತ್ತಿದೆ.


ಹೀಗಾಗಬಾರದಿತ್ತು,

ಯಶಸ್ವಿ ವ್ಯಕ್ತಿಯಲ್ಲಿ ಇಷ್ಟೊಂದು ತಾಳ್ಮೆ-ಸಹನೆಗಳ[...] ಸಿಗುತ್ತಿರುವುದರಿಂದಲೇ ಶೌರಿ ಅವರು ನನಗೆ ಸದಾ ಸ್ಮರಣೀಯರ[...] ಸಾಧ್ಯವಾದಲ್ಲಿ ಅವರ ಪುಸ್ತಕವನ್ನು ಕನ್ನಡಕ್ಕೆ ತನ್ನಿ. ನನ್ನಂತಹ ಅನೇ[...] ಓದುಗರಿಗೆ ನೆರವಾದೀತು.


- ಮಹೇಂದ್ರ ಕುಮಾರ್, ಬಳ್ಳಾ[...]

ರಾಮದಾಸ್ ಕುರಿತ ಪುಸ್ತಕ ಯಾಕೆ ಬಂದಿಲ್ಲ, ಗೊತ್ತಿಲ್ಲ

ತಮ್ಮ ಪತ್ರಿಕೆಯ ಕಳೆದ ವಾರದ ಸಂಚಿಕೆಯಲ್ಲಿ (17.8.2011) ಕಿ.ರಂ. ನಾಗರಾಜ ಅವರು ನಿಧನರಾದ ಒಂದು ವರ್ಷದಲ್ಲೇ ಅವರ ಬಗ್ಗೆ ಪುಸ್ತಕವೊಂದು ಹೊರಬರುತ್ತಿರುವುದನ್ನು ತಿಳಿಸುತ್ತಾ ಕೆ.ರಾಮದಾಸ್ ನಿಧನರಾಗಿ ನಾಲ್ಕು ವರ್ಷವಾದರೂ ಅವರ ನೆನಪಿನಲ್ಲಿ ಒಂದು ಪುಸ್ತಕವೂ ಹೊರಬರದಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದ್ದೀರಿ. ನಿಮ್ಮ ಬೇಸರ ಸಮರ್ಥನೀಯವೇ ಆಗಿದೆ.



ಆದರೆ, ರಾಮದಾಸ್ ನಿಧನರಾದ ಕೆಲವೇ ದಿನಗಳಲ್ಲಿ ಅವರ ಮನೆಯಲ್ಲಿ ಸಭೆ ಸೇರಿದ ಅವರ ಗೆಳೆಯರು, ಅವರ ಬಗ್ಗೆ ನೆನಪಿನ ಸಂಪುಟವೊಂದನ್ನು ಹೊರತರಲು ತೀರ್ಮಾನಿಸಿದರು. ಈ ಗೆಳೆಯರ ಪರವಾಗಿ ರಾಜಶೇಖರ ಕೋಟಿ ಮತ್ತು ಎಚ್.ಎಲ್ ಕೇಶವಮೂರ್ತಿಯವರು, ಶಿವಮೊಗ್ಗದಲ್ಲಿದ್ದ ನನಗೆ ದೂರವಾಣಿ ಕರೆ ಮಾಡಿ; ಈ ಸಂಪುಟದ ಸಂಪಾದನೆಯ ಕೆಲಸವನ್ನು, ಒಲ್ಲೆನೆಂದರೂ ನನಗೆ ವಹಿಸಿದರು. ನಾನು ವಹಿಸಿಕೊಂಡ ಈ ಜವಾಬ್ದಾರಿಯನ್ನು, ಎಚ್.ಎಲ್.ಕೇಶವಮೂರ್ತಿ ಮತ್ತು ಮೈಸೂರಿನ ಮುದ್ದುಕೃಷ್ಣ ಅವರೊಂದಿಗೆ ಎರಡು ಮೂರು ಬಾರಿ ಶಿವಮೊಗ್ಗದಲ್ಲೇ ಸಭೆ ಸೇರಿ ಆರು ತಿಂಗಳುಗಳಲ್ಲೇ ಮುಗಿಸಿಕೊಟ್ಟೆ.




ಸುಮಾರು ನಾನೂರರಿಂದ ಐದು ನೂರು ಪುಟಗಳ ಈ ಸಂಪುಟವನ್ನು ಪ್ರಕಟಿಸುವ ಜವಾಬ್ದಾರಿಯನ್ನು ಮೈಸೂರಿನ ಗೆಳೆಯರು ಅಭಿರುಚಿ ಪ್ರಕಾಶನಕ್ಕೆ ನೀಡಿದ್ದರು. ಸ್ವತಃ ನಾನೇ ಎರಡು ಬಾರಿ ಸಂಪುಟದ ಕರಡನ್ನೂ ತಿದ್ದಿಕೊಟ್ಟೆ. ಕೇಶವಮೂರ್ತಿಯವರು ಈಗ್ಗೆ ಮೂರು ವರ್ಷಗಳ ಹಿಂದೆ ಒಮ್ಮೆ ಶಿವಮೊಗ್ಗಕ್ಕೆ ಬಂದು ಅದರ ಬಿಡುಗಡೆ ಸಮಾರಂಭದ ದಿನಾಂಕ ಮತ್ತು ಇತರೆ ವಿವರಗಳ ರೂಪುರೇಷೆಗಳನ್ನು ಸಿದ್ಧಪಡಿಸಿಕೊಂಡು ಹೋದರು. ನಂತರ ಎರಡು ವರ್ಷಗಳ ಹಿಂದೆ ಪ್ರಕಾಶಕರು, ತಡವಾಯಿತೆಂದು ನನ್ನಿಂದ ಹೊಸ 'ಸಂಪಾದಕರ ಮಾತು'ಗಳನ್ನೂ ತರಿಸಿಕೊಂಡರು. ಆದರೆ ಆ ನಂತರ ಏನಾಯಿತೆಂದು ತಿಳಿಯದು. ಈ ಬಗ್ಗೆ ಮೈಸೂರಿನ ಗೆಳೆಯರಿಗೆ ಎರಡು ಮೂರು ಬಾರಿ ನೆನಪಿಸಿದ್ದೇನೆ. ಏನೂ ಆಗಿಲ್ಲ. ಏಕೆಂದು ತಿಳಿಯದು!

- ಡಿ.ಎಸ್.ನಾಗಭೂಷಣ, ಶಿವಮೊಗ್ಗ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.

ಈ ಪ್ರೇಮ್‌ಗೆ ಏನಾಗಿದೆ?



ತನ್ನ ನಿರ್ದೇಶನದ ಚಿತ್ರದ ನಿರ್ಮಾಣ ಕಾರ್ಯವನ್ನು ಚುಯಿಂಗ್‌ಗಮ್ ತರಹ ಎಳೆಯುವುದು ಪ್ರೇಮ್‌ನ ಹವ್ಯಾಸ. ಅದರಿಂದ ಬಹಳಷ್ಟು ನಿರ್ಮಾಪಕರು ರೋಸಿಹೋಗಿದ್ದೂ ಇದೆ. ಆದರೆ ಸ್ವತಃ ತಾನೇ ನಿರ್ಮಾಣಕ್ಕೆ ಇಳಿದಾಗ ಈತ ಅಚ್ಚುಕಟ್ಟಾಗಿ ಸಿನಿಮಾ ಮುಗಿಸಿ ಬಿಡುಗಡೆ ಮಾಡುತ್ತಾರೆ ಎಂದೇ ಜನ ನಂಬಿದ್ದರು. ಆದರೆ 'ಜೋಗಯ್ಯ'ನ ವಿಷಯದಲ್ಲೂ ಪ್ರೇಮ್ ತನ್ನ ಹಳೆ ಚಾಳಿಯನ್ನೇ ಮುಂದುವರೆಸಿದ್ದಾರೆ.


ಉದಾಹರಣೆಗೆ ಎರಡು ವರ್ಷಗಳ ಹಿಂದೆ ಇದರ ಚಿತ್ರೀಕರಣ ಆರಂಭವಾದಾಗ ಈ ಚಿತ್ರ ಯಾವಾಗ ಬಿಡುಗಡೆಯಾಗುತ್ತದೆ ಎಂಬುದು ನಿರ್ಧಾರವಾಗಿರಲಿಲ್ಲ. ಆದರೆ ಸ್ವಲ್ಪ ಸಮಯದ ನಂತರ "ಅಣ್ಣಾವ್ರ ಬರ್ತಡೇ ದಿನದಂದು ಚಿತ್ರ ಬಿಡುಗಡೆಯಾಗುತ್ತದೆ" ಎಂಬ ಸುದ್ದಿಯನ್ನು ಪ್ರೇಮ್ ತೇಲಿಬಿಟ್ಟರು. ಅಣ್ಣಾವ್ರ ಬರ್ತಡೇ ಬಂದುಹೋದರೂ ಚಿತ್ರದ ಕೆಲಸ ಮುಗಿಯಲಿಲ್ಲ. ಆಗ "ಸಂಕ್ರಾಂತಿ ಹಬ್ಬದಂದು 'ಜೋಗಯ್ಯ' ತೆರೆ ಕಾಣುವುದು ಶತಸಿದ್ಧ" ಎಂದಿದ್ದರು. ಸಂಕ್ರಾಂತಿ ಹಬ್ಬ ಕೂಡ ಬಂದುಹೋಯಿತು. ಮತ್ತೆ "ಶಿವಣ್ಣನ ಬರ್ತಡೇಗೆ ಬಿಡುಗಡೆ" ಎಂದು ಘೋಷಿಸಿದ್ದರು. ಅದೂ ಬಂದುಹೋಯಿತು. ಕೊನೆಗೆ "ವರಮಹಾಲಕ್ಷ್ಮಿ ಹಬ್ಬದ ದಿನ 'ಜೋಗಯ್ಯ' ಬಿಡುಗಡೆಗೆ ಫಿಕ್ಸ್ ಆಗಿದೆ" ಎಂದರು. ಆದರೀಗ ನೋಡಿದರೆ 'ಜೋಗಯ್ಯ' ಇನ್ನೂ ರೆಡಿಗೊಂಡಿಲ್ಲ!


ಶಿವಣ್ಣನ ಅಭಿಮಾನಿಗಳ ಪಾಲಿಗೆ ಈ 'ಜೋಗಯ್ಯ' ಯಾಕೋ ಮರೀಚಿಕೆಯಾಗುತ್ತಿದ್ದಾನೆ.

ಮುಂದಿನ ನಾಲ್ಕು ವಾರ ಕನ್ನಡ ಚಿತ್ರರಂಗದ ನಾಲ್ಕು ಲಕ್ಷ್ಮಿ ಪುತ್ರರ ಹಣೆಬರಹ ನಿರ್ಧಾರವಾಗಲಿದೆ. ಜೊತೆಗೆ ...ಟ್ಟು 35 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಚಿತ್ರಗಳ ಭವಿಷ್ಯವೂ ಗೊತ್ತಾಗಲಿದೆ.

...ಲಕ್ಷ್ಮೀ ಹಬ್ಬದಲ್ಲಿ ...ಯಾರು ಭದ್ರ... ...ಯಾರು ಛಿದ್ರ...

ನಾಡಿದ್ದು ವರಮಹಾಲಕ್ಷ್ಮಿ ಹಬ್ಬ. ಸಿನಿಮಾದವರಿಗೆ ಈ ಹಬ್ಬ ಅಂದರೆ ಅಚ್ಚುಮೆಚ್ಚು. ಆ ದಿನ ತಮ್ಮ ಚಿತ್ರವನ್ನು ಬಿಡುಗಡೆ ಮಾಡಿದರೆ ಲಕ್ಷ್ಮಿ ತಮ್ಮ ಮನೆ ಬಾಗಿಲಿಗೆ ಬರುತ್ತಾಳೆ ಎಂಬುದು ನಿರ್ಮಾಪಕರ ಮೂಢನಂಬಿಕೆ. ಕಾಕತಾಳೀಯವೆಂಬಂತೆ ಈ ಹಿಂದೆ ಪ್ರೇಮ್ ನಿರ್ದೇಶನದ 'ಜೋಗಿ' ಮತ್ತು ದ್ವಾರಕೀಶ್ ನಿರ್ಮಾಣದ 'ಆಪ್ತಮಿತ್ರ' ವರಮಹಾಲಕ್ಷ್ಮಿ ಹಬ್ಬದಂದೇ






ಬಿಡುಗಡೆಗೊಂಡು ಬಾಕ್ಸ್ ಆಫೀಸ್‌ನಲ್ಲಿ ಜಯಭೇರಿ ಬಾರಿಸಿದ್ದವು. ಅಂದಿನಿಂದ ವರಮಹಾಲಕ್ಷ್ಮಿ ಹಬ್ಬಕ್ಕೆ ಗಾಂಧಿನಗರದಲ್ಲಿ ಎಲ್ಲಿಲ್ಲದ ಡಿಮಾಂಡ್ ಬಂದಿದೆ. ಅದಕ್ಕೇ ಈ ವರಮಹಾಲಕ್ಷ್ಮಿ ಹಬ್ಬದಂದೇ ತಮ್ಮ ಚಿತ್ರ ಬಿಡುಗಡೆ ಮಾಡಲು ನಿರ್ಮಾಪಕರು ಶತಪ್ರಯತ್ನ ಮಾಡಿದ್ದರು.

ಪ್ರೇಮ್ ನಿರ್ದೇಶನದ 'ಜೋಗಯ್ಯ' ವರಮಹಾಲಕ್ಷ್ಮಿ ಹಬ್ಬದಂದು ಬಿಡುಗಡೆಯಾಗುತ್ತಿದೆ ಎಂದು ಪ್ರಚಾರ ಮಾಡಲಾಗಿತ್ತು, ಆದರೆ ಲೇಟ್ ಲತೀಫ್ ಪ್ರೇಮ್ ಮತ್ತೊಮ್ಮೆ ಎಡವಿದ್ದಾರೆ. ಅವರ 'ಜೋಗಯ್ಯ'ದ ತ್ರೀಡಿ ತಾಂತ್ರಿಕತೆಯ ಕೆಲಸ ಅವರಿಗೆ ಕೈಕೊಟ್ಟಿದೆ. ಹೀಗಾಗಿ 'ಜೋಗಯ್ಯ' ಇನ್ನು ಸ್ವಲ್ಪ ದಿನ ನಿದ್ದೆಯಲ್ಲಿರುತ್ತಾನೆ.

ಆದರೆ ಇದಕ್ಕು ಮುನ್ನ "ಹಬ್ಬದ ದಿನದಂದು ನನ್ನ ಚಿತ್ರ ಬಿಡುಗಡೆ ಆಗುತ್ತೆ, ಅದಕ್ಕೆ ನಿಮ್ಮ ಚಿತ್ರದ ಬಿಡುಗಡೆಯನ್ನು ಮುಂದೂಡಿ" ಎಂದು ಪ್ರೇಮ್ ಕುಳ್ಳ ದ್ವಾರಕೀಶ್ ಅವರನ್ನು ...ಳಿಕೊಂಡಿದ್ದರು. ಆಗ 'ಜೋಗಯ್ಯ'ನಿಗಾಗಿ ದಾರಿ ಮಾಡಿಕೊಟ್ಟ ದ್ವಾರಕೀಶ್ ತಮ್ಮ ...ರ್ಮಾಣದ 'ವಿಷ್ಣುವರ್ಧನ್' ಚಿತ್ರವನ್ನು ಗಣೇಶ ಹಬ್ಬದ ...ಂದರ್ಭದಲ್ಲಿ ಬಿಡುಗಡೆ ಮಾಡಲು ನಿರ್ಧರಿಸಿದರು.





ಇಬ್ಬರ ಜಗಳದಲ್ಲಿ ಮೂರನೆಯವನಿಗೆ ಲಾಭ ಎಂಬಂತೆ ...ಜ್ವಲ್ ದೇವರಾಜ್ ನಟಿಸಿರುವ 'ಭದ್ರ' ಚಿತ್ರ ವರಮಹಾಲಕ್ಷ್ಮಿ ...ಬ್ಬದಂದು ಬಿಡುಗಡೆಯಾಗುತ್ತಿದೆ.

ಹಾಗೆ ನೋಡಿದರೆ ಸದ್ಯದಲ್ಲೇ 'ಜೋಗಯ್ಯ' ಮತ್ತು ...ಷ್ಣುವರ್ಧನ್' ಜೊತೆಜೊತೆಗೆ ಪುನೀತ್ ರಾಜ್‌ಕುಮಾರ್ ...ಟಿಸಿರುವ ಯೋಗರಾಜ್ ಭಟ್ ನಿರ್ದೇಶಿಸಿರುವ 'ಪರಮಾತ್ಮ' ...ತ್ತು ದರ್ಶನ್ ನಟಿಸಿರುವ 'ಸಾರಥಿ' ಚಿತ್ರಗಳು ಒಂದರ ...ಂದೊಂದರಂತೆ ಬಿಡುಗಡೆಯಾಗಲಿವೆ. ಈ ನಾಲ್ಕು ಚಿತ್ರಗಳಿಗೆ ...ಮಾರು ಎಂಟು ಕೋಟಿ ರೂಪಾಯಿಗಳು ವೆಚ್ಚ ಆಗಿದೆ.

ಪ್ರೇಮ್ 'ಜೋಗಯ್ಯ'ನಲ್ಲಿ ತನ್ನ ಸ್ವಪ್ರತಿಷ್ಠೆಯನ್ನೇ ಪಣಕ್ಕೆ ...ಟ್ಟಿದ್ದಾರೆ. ಹಾಗೆಯೇ ತಮ್ಮ ನೂರನೇ ಚಿತ್ರವಾದ ಕಾರಣಕ್ಕೆ ...ವಣ್ಣನಿಗೂ ಈ ಚಿತ್ರದ ಗೆಲುವು ಮುಖ್ಯ. ಆರಂಭದಿಂದಲೇ ...ವಾದಾತ್ಮಕವಾಗಿರುವ 'ವಿಷ್ಣುವರ್ಧನ್' ಚಿತ್ರದ ಗೆಲುವು ...ರಕೀಶ್‌ಗೂ ಮುಖ್ಯವಾಗಿದೆ. ಕಳೆದ ಮೂರ್ನಾಲ್ಕು ವರ್ಷಗಳಿಂದ ಸೋಲಿನ ರುಚಿಯನ್ನೇ ...ಣುತ್ತಿರುವ ದರ್ಶನ್ ತನ್ನ ಸಹೋದರ ನಿರ್ದೇಶಿಸಿದ 'ಸಾರಥಿ' ಚಿತ್ರದ ಮೇಲೆ ...ರೀ ದೊಡ್ಡ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಇದೆಲ್ಲದರ ಮಧ್ಯೆ ನಂಬರ್ 1 ಪಟ್ಟವನ್ನು ...ಲಂಕರಿಸಿರುವ ಪುನೀತ್ ರಾಜ್‌ಕುಮಾರ್ ಮತ್ತು ಯೋಗರಾಜ್ ಭಟ್ ತಮ್ಮ ...ಮ್ಮ ರ್‍ಯಾಂಕಿಂಗ್‌ನ್ನು ಉಳಿಸಿಕೊಳ್ಳಬೇಕಾದರೆ 'ಪರಮಾತ್ಮ' ಸಿಕ್ಕಾಪಟ್ಟೆ ಹಿಟ್ ...ಗಲೇಬೇಕಿದೆ.

ಅದೇನೇ ಇರಲಿ. ಕನ್ನಡ ಚಿತ್ರರಂಗದ ಅಭಿಮಾನಿಗಳಿಗೆ ಮುಂದಿನ ನಾಲ್ಕು ...ರ ಮೃಷ್ಟಾನ್ನ ಭೋಜನ ಕಾದಿದೆ. ಆದರೆ ಈ ನಾಲ್ಕು ಚಿತ್ರಗಳ ನಿರ್ಮಾಪಕರು ...ುಂಬರುವ ದಿನಗಳಲ್ಲಿ ಮೃಷ್ಟಾನ್ನ ತಿನ್ನುತ್ತಾರೋ ಅಥವಾ ಚಿತ್ರಾನ್ನ ...ನ್ನುವಂತವರಾಗುತ್ತಾರೋ ಎಂಬುದು ಅವರವರ ಚಿತ್ರಗಳ ಫಲಿತಾಂಶದ ಮೇಲೆ ...ವಲಂಬಿತವಾಗಿದೆ.

• ಶೆಣೈ



ಡಬ್ಬಿಂಗ್ ಭೀತಿಯಲ್ಲಿ ಕನ್ನಡ ಚಿತ್ರರಂಗ

27 ವರ್ಷಗಳ ನಂತರ ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾವಣೆ ನಡೆಸಿ ಹೊಸ ಅಧ್ಯಕ್ಷ ಮತ್ತವರ ತಂಡವನ್ನು ನಿರ್ಮಾಪಕರ ಸಂಘ ಆಯ್ಕೆ ಮಾಡಿದೆ. ಇದರ ಫಲವಾಗಿ ಅಧ್ಯಕ್ಷರಾಗಿ ಮುನಿರತ್ನಂ ನಾಯ್ಡು ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಸೂರಪ್ಪ ಬಾಬು ಹಾಗೂ ಉಪಾಧ್ಯಕ್ಷರಾಗಿ ಎ.ಗಣೇಶ್ ಮೊದಲಾದವರು ಆಯ್ಕೆಯಾಗಿದ್ದಾರೆ.

ನಿರ್ಮಾಪಕರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಕೆ.ಸಿ.ಎನ್.ಚಂದ್ರಶೇಖರ್ ರಾಜಿನಾಮೆ ನೀಡಿದ್ದರಿಂದ ಈ ಚುನಾವಣೆ ನಡೆದಿದೆ. ಅದೇನೇ ಇರಲಿ, ಆಯ್ಕೆಯಾದ ನಂತರ ಕಾಂಗ್ರೆಸ್ ಕಾರ್ಪೋರೇಟರ್ ಕೂಡ ಆಗಿರುವ ಮುನಿರತ್ನಂ ನಾಯ್ಡು ಮತ್ತವರ ತಂಡ ಚಿತ್ರರಂಗದ ಗಣ್ಯರಾದ ಅಂಬರೀಷ್, ರವಿಚಂದ್ರನ್ ಮತ್ತು ಪಾರ್ವತಮ್ಮ ರಾಜ್‌ಕುಮಾರ್ ಮೊದಲಾದವರನ್ನು ಭೇಟಿಯಾಗಿ ಅವರ ಆಶೀರ್ವಾದವನ್ನು ಪಡೆದಿದ್ದಾರೆ.

ಅವರಲ್ಲಿ ರವಿಚಂದ್ರನ್ ಸುಮಾರು ಮೂರು ಗಂಟೆಗಳ ಕಾಲ ಈ ಹೊಸ ಪದಾಧಿಕಾರಿಗಳಿಗೆ ಭಾಷಣ ಮಾಡಿದರಂತೆ. ಅಷ್ಟೇ ಅಲ್ಲ, ನಿರ್ಮಾಪಕರ ಸಂಘ ಹೇಗೆ ಕೆಲಸ ಮಾಡಬೇಕು ಎಂಬುದರ ಬಗ್ಗೆ ಕೆಲವು ವರ್ಷಗಳ ಹಿಂದೆ ತಾವೇ ಬರೆದಿದ್ದ ಪುಸ್ತಕವೊಂದನ್ನು ಮುನಿರತ್ನಂ ನಾಯ್ಡುರವರಿಗೆ ಹಸ್ತಾಂತರಿಸಿ, ಈ ಪುಸ್ತಕದಲ್ಲಿರುವುದನ್ನು ನೀವು ಅನುಷ್ಠಾನಕ್ಕೆ ತಂದರೆ ಸಾಕು ಎಂದು ಹೇಳಿದರಂತೆ.

ಡಬ್ಬಿಂಗ್ ಪರ ನಿಲುವನ್ನು ಹೊಂದಿರುವ ಮುನಿರತ್ನಂ ನಾಯ್ಡು ಮತ್ತು ಸೂರಪ್ಪ ಬಾಬು ಈಗ ಅದನ್ನೇ ತಮ್ಮ ಸಂಘದ ಅಫೀಶಿಯಲ್ ನಿಲುವಾಗಿ ಮಾಡುತ್ತಾರೋ ಎಂಬ ಗುಮಾನಿ ಎಲ್ಲರನ್ನು ಕಾಡುತ್ತಿದೆ. ಡಬ್ಬಿಂಗ್ ವಿರೋಧಿ ನಿಲುವನ್ನು ತಾಳಿರುವ ಕಾರ್ಮಿಕ ನಾಯಕ ಅಶೋಕ್ ವಿರುದ್ಧ ಮುನಿರತ್ನಂ ನಾಯ್ಡು ಈಗಾಗಲೇ ಗುಡುಗಿರುವುದನ್ನು ನೋಡಿದರೆ ಮುಂದಿನ ದಿನಗಳಲ್ಲಿ ಮುನಿ ವರ್ಸಸ್ ಅಶೋಕ್ ಕದನ ಆರಂಭವಾಗುವ ಎಲ್ಲಾ ಸೂಚನೆಗಳೂ ಕಾಣಿಸುತ್ತಿವೆ.

ಪಾಯಿಂಟ್ ಬ್ಲಾಂಕ್



ಕವಿತಾ ಲಂಕೇಶ್ ನಿರ್ದೇಶಿಸುತ್ತಿರುವ 'ಕ್ರೇಜಿ ಲೋಕ' ಸಿನಿಮಾದ ಮೂಲಕ ಸೂರ್ಯ ಎಂಬ ಹೊಸ ಹುಡುಗ ಚಿತ್ರರಂಗಕ್ಕೆ ಕಾಲಿಡುತ್ತಿದ್ದಾನೆ. ಆತನಿಗೆ ಜೋಡಿಯಾಗಿ ಈಗಾಗಲೇ ಕೆಲವು ಸಿನಿಮಾಗಳಲ್ಲಿ ನಟಿಸಿ ಸೈ ಎನಿಸಿಕೊಂಡಿರುವ ಹರ್ಷಿಕಾ ಇದ್ದಾಳೆ. ಇವರಿಬ್ಬರಿಗೆ ಈ ವಾರದ ಪಾಯಿಂಟ್ ಬ್ಲಾಂಕ್ ಪ್ರಶ್ನೆಗಳನ್ನು ಕೇಳಿದಾಗ ಬಂದ ಉತ್ತರಗಳು ಇಲ್ಲಿವೆ:

ಹರ್ಷಿಕಾ

1. ಅಮ್ಮ ಅಂದರೆ: ಸ್ಫೂರ್ತಿ ತುಂಬುವ ದೇವರು.
2. ಬೋಲ್ಡ್ ಸೀನ್‌ಗಳಲ್ಲಿ ನಟಿಸೋದು ಅಂದ್ರೆ: ಗ್ಲಾಮರ್ ಓಕೆ, ವಲ್ಗರ್ ಯಾಕೆ?
3. ಆರತಿ, ಭಾರತಿ, ಕಲ್ಪನಾ: ಕನ್ನಡ ಚಿತ್ರರಂಗದ ದಂತಕಥೆಗಳು.
4. ಕಷ್ಟಪಟ್ಟು ದುಡಿಯುವುದು: ಅದೃಷ್ಟಕ್ಕಿಂತ ಮುಖ್ಯ
5. ಇವತ್ತು ರಾಜ್ಯದ ಮುಖ್ಯಮಂತ್ರಿ: ತುಂಬಾ ನಗುತ್ತಿರುತ್ತಾರೆ.
6. ನಕ್ಷತ್ರಗಳು ಅಂದರೆ: ನಾನೂ ಸ್ಟಾರ್ ಆಗಬೇಕೆಂಬ ಕನಸ್ಸು ಹುಟ್ಟಿಸುತ್ತವೆ.
7. ರೋಲ್ ಮಾಡೆಲ್: ಅಮಿತಾಬ್ ಬಚ್ಚನ್.
8. ಪ್ರತಿಭಾ ಪಾಟೀಲ್: ಭಾರತೀಯ ನಾರಿಯರ ಯಶಸ್ಸಿನ ಸಂಕೇತ.
9. ಸಮುದ್ರದಷ್ಟು ಆಳ: ಆಳದಷ್ಟು ಜ್ಞಾನ ಸಂಪಾದಿಸಬೇಕು.
10. ದುಡ್ಡಿದ್ದವಳು: ತಗ್ಗಿ, ಬಗ್ಗಿ ನಡಿ.

ಸೂರ್ಯ

1. ತಾಯಿ ಕೊಡುವ ತುತ್ತು: ಇಲ್ಲದೆ ಇರಕ್ಕಾಗಲ್ಲ.
2. ಮೊದಲ ಬಾರಿಗೆ ಕ್ಯಾಮೆರಾ ಎದುರಿಸಿದಾಗ: ಕಾಲು ನಡುಕ.
3. ರಾಜ್‌ಕುಮಾರ್: ನಟಸಾರ್ವಭೌಮ.
4. ಇವತ್ತು ರಾಜ್ಯದ ಮುಖ್ಯಮಂತ್ರಿ: ರಾಜಕೀಯ ಗೊತ್ತಿಲ್ಲ.
5. ಸಿನಿಮಾ ಲೋಕ: ನನ್ನ ಭವಿಷ್ಯ.
6. ನಕ್ಷತ್ರಗಳು ಅಂದರೆ: ಕನಸುಗಳು
7. ಬರಾಕ್ ಒಬಾಮಾ: ಅಮೆರಿಕದ ಅಧ್ಯಕ್ಷ.
8. ಸಮುದ್ರದಷ್ಟು ಆಳ: ತಾಯಿಯ ಪ್ರೀತಿ.
9. ಕವಿತಾ ಲಂಕೇಶ್: ನನ್ನ ಭಾಗ್ಯದ ಬಾಗಿಲು ತೆರೆದವರು.

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R.B.P LANKESH, Kannada Weekly Price Rs. 14/- 24-8-2011 RNI No. KARKAN2005/14

ಸಿಕ್ಕುಗಟ್ಟಿದ ಸ್ನೇಹ



ನಾಗಶೇಖರ್ ಮತ್ತು ಗಣೇಶ್ ಎಂಬ ಇಬ್ಬರು ಹಳೇ ದೋಸ್ತಿಗಳ ನಡುವೆ ದೊಡ್ಡ ಗಾತ್ರದ ಬಿರುಕು ಕಾಣಿಸಿಕೊಂಡಿದೆ.

ಹಿಂದೆ ಚಿತ್ರಾನ್ನ ತಿನ್ನಲೂ ಕಾಸಿಲ್ಲದೆ ಒದ್ದಾಡುತ್ತಿದ್ದ ಸಂದರ್ಭದಲ್ಲಿ ನಟ ಗಣೇಶ್ ಮತ್ತು ನಿರ್ದೇಶಕ ನಾಗಶೇಖರ್ ಒಟ್ಟಿಗೇ ಇದ್ದರು. ಬೆಂಗಳೂರಿನ ತ್ಯಾಗರಾಜನಗರದ ಇಕ್ಕಟ್ಟಿನ ರೂಮಿನಲ್ಲಿ ರಾಜರಂತೆ ಬಾಳಿದ್ದರು. ಆದರೀಗ ಗೆಲುವು ಮತ್ತು ಹಣ ಇವರಿಬ್ಬರ ಸ್ನೇಹದಲ್ಲಿ ವಿರಸ ಮೂಡಿಸಿದೆ.

ಗಣೇಶ್ ನಟಿಸಿದ 'ಅರಮನೆ' ಚಿತ್ರವನ್ನು ಇದೇ ನಾಗಶೇಖರ್ ನಿರ್ದೇಶಿಸಿದ್ದರು. ತೀರಾ ಇತ್ತೀಚೆಗೆ 'ಸಂಜು ವೆಡ್ಸ್ ಗೀತಾ' ಚಿತ್ರವನ್ನು ನಿರ್ದೇಶಿಸಿ, ನಿರ್ಮಾಣದಲ್ಲೂ ಪಾಲುದಾರನಾಗಿದ್ದ ನಾಗಶೇಖರ್ ಬಳಿ ಸಿನಿಮಾ ಬಿಡುಗಡೆ ಮಾಡಲು ದುಡ್ಡಿರಲಿಲ್ಲ. ಆಗ ತಮ್ಮ ಎಲ್ಲ ಸ್ನೇಹಿತರಿಂದ ಅಷ್ಟಿಷ್ಟು ಹಣ ಪಡೆದು ಚಿತ್ರವನ್ನು ರಿಲೀಸ್ ಮಾಡಲು ಮುಂದಾದರು. ಆ ಸಂದರ್ಭದಲ್ಲಿ ಗಣೇಶ್‌ನನ್ನು ಎರಡು ಲಕ್ಷ ರೂಪಾಯಿ ಸಾಲ ಕೇಳಿದ್ದಕ್ಕೆ ಗಣೇಶ್ ಫೋನ್ ರಿಸೀವ್ ಮಾಡೋದನ್ನೇ ನಿಲ್ಲಿಸಿಬಿಟ್ಟಿದ್ದನಂತೆ.

ಕೊನೆಗೂ 'ಸಂಜು ವೆಡ್ಸ್ ಗೀತಾ' ಬಿಡುಗಡೆಯಾಗಿ ಭರ್ಜರಿ ನೂರು ದಿನ ಓಡಿದ್ದು ಮಾತ್ರವಲ್ಲ, ನಾಗಶೇಖರನ ಜೇಬನ್ನೂ ತುಂಬಿಸಿದೆ. ಈಗ 'ಮೈನಾ' ಎಂಬ ಚಿತ್ರದಲ್ಲಿ ನಾಗಶೇಖರ್ ಹೀರೋ ಆಗಿ ಕೂಡಾ ನಟಿಸುತ್ತಿದ್ದಾನೆ. ಇದೇ ವೇಳೆಗೆ ತಮಿಳಿನಲ್ಲಿ ಹಿಟ್ ಆಗಿದ್ದ 'ಮೈನಾ' ಕೂಡಾ ಕನ್ನಡದಲ್ಲಿ ನಿರ್ಮಾಣವಾಗುತ್ತಿದೆ. ಇದರಲ್ಲಿ ಗಣೇಶನೇ ಹೀರೋ. ಈ ಚಿತ್ರದ ನಿರ್ಮಾಪಕ ಕೆ. ಮಂಜು "'ಮೈನಾ' ಚಿತ್ರದ ಟೈಟಲ್ ಅನ್ನು ನಮಗೆ ಕೊಡಿ" ಎಂದು ಕೇಳಿದ್ದಕ್ಕೆ ನಾಗಶೇಖರ್ ಸುತರಾಂ ಒಪ್ಪಲಿಲ್ಲವಂತೆ. ಕಡೆಗೆ ನಿರ್ದೇಶಕ ಎಸ್. ನಾಣಿ 'ಶೈಲೂ' ಎಂಬ ಹೆಸರನ್ನಿಟ್ಟಿದ್ದಾರೆ.



"ಗಣೇಶನ ಮೇಲಿನ ಕೋಪಕ್ಕೆ ನಾಗಶೇಖರ್ ನನಗೆ ಟೈಟಲ್ ನೀಡಲಿಲ್ಲ" ಎಂದು ಮಂಜು ಗೊಣಗುತ್ತಿದ್ದಾರೆ.

ಒಟ್ಟಿನಲ್ಲಿ ಸದ್ಯಕ್ಕೆ ಗಣೇಶ-ನಾಗಶೇಖರ್ ನಡುವೆ ಉಂಟಾಗಿರುವ ವಿರಸ ತಣ್ಣಗಾಗುವಂತೆ ಕಾಣುತ್ತಿಲ್ಲ.

'ಕೋಮಲ' ಗಿಮಿಕ್

ಮೂರ್‍ನಾಲ್ಕು ದಶಕಗಳ ಹಿಂದೆ ಯಾವುದೇ ಊರಿನಲ್ಲಿ ಸಿನಿಮಾ ಬಿಡುಗಡೆಗೊಂಡರೆ ಅಥವಾ ನಾಟಕದ ಶೋ ಇದ್ದರೆ ಜಟಕಾ ಅಥವಾ ಎತ್ತಿನ ಗಾಡಿ, ಸೈಕಲ್‌ಗಳಲ್ಲಿ ಕರಪತ್ರಗಳನ್ನು ಹಂಚುತ್ತಾ ಪ್ರಚಾರ ಮಾಡುತ್ತಿದ್ದರಲ್ಲಾ? ಈಗ ಮತ್ತದೇ ಟ್ರೆಂಡು ಶುರುವಾಗಿರುವಂತಿದೆ ಕೋಮಲ್ ಅವರ ಹೊಸ ಯೋಚನೆಯನ್ನು ನೋಡಿದರೆ.

ಕೋಮಲ್ ನಟಿಸಿರುವ 'ರಾಮಣ್ಣ' ಎಂಬ ಚಿತ್ರದ ಪ್ರಚಾರಕ್ಕೆಂದು ಅವರು ಬೆಂಗಳೂರು ಹೊರವಲಯದಲ್ಲಿರುವ ನೆಲಮಂಗಲದಿಂದ ದೂರದ ಬೀದರ್ ತನಕ ಜಾಥಾ ಹೋಗುತ್ತಿದ್ದಾರೆ. ಅದೂ ಸೈಕಲ್ ಮೇಲೆ! ಅವರು ರಾಜ್ಯದ ಪ್ರತಿ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಸೈಕಲ್ ಏರಿ ನೂರಾರು ಅಭಿಮಾನಿಗಳ ಜೊತೆ ಗಲ್ಲಿಗಲ್ಲಿಗಳಲ್ಲಿ ಪ್ರದಕ್ಷಿಣೆ ಹಾಕುತ್ತಾರಂತೆ.

ಕೋಮಲ್ ಅವರ ಈ ಸೈಕಲ್ ಜಾಥಾದಿಂದ ಸಿನಿಮಾಗೆ ಪ್ರಚಾರ ಸಿಗುತ್ತದೋ ಇಲ್ಲವೋ, ಅದು ಬೇರೆ ಮಾತು, ಆದರೆ ಈಗ ಉಬ್ಬಿಕೊಂಡಿರುವ ಕೋಮಲ್ ದೇಹ ಮತ್ತು ಅವರ ತೂಕ ಒಂದಿಷ್ಟು ಕಮ್ಮಿಯಾಗುವುದು ಖಚಿತ!



ಜೋಗಯ್ಯ
ಸುಮಿತ್ ಕೌರ್ ಅತ್ವಾಲ್

ಮಂಜಣ್ಣನ ಮಾಂಜಾ

ಪ್ರಕಾಶ್ ರೈ, ಕಿಶೋರ್, ಅವಿನಾಶ್, ಚರಣ್‌ರಾಜ್‌ರಂತೆ ದಕ್ಷಿಣ ಭಾರತದಲ್ಲಿ ಇ... ಅತಿ ಬೇಡಿಕೆಯ ಪೋಷಕ ಕಲಾವಿದರಲ್ಲಿ ಒಬ್ಬರಾದ ಸಂಪತ್ ಕೂಡ ಬೆಂಗಳೂರಿನವರೇ. ಈ ಸಂಪತ್ ವಿರುದ್ಧ ಕನ್ನಡ ನಿರ್ಮಾಪಕರೊಬ್ಬರು ಕಿಡಿಕಾರುತ್ತಿ...


ಕವಿತಾ ಲಂಕೇಶ್ ನಿರ್ದೇಶಿಸಿದ್ದ 'ಬಿಂಬ' ಎಂಬ ಕನ್ನಡ ಚಿತ್ರದ ಮೂಲಕ ಸಂ... ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದರೂ ಆತ ಈಗ ಹೆಚ್ಚು ಬ್ಯುಸಿಯಾಗಿರುವುದು ನೆರೆಯ ತೆಲ... ಮತ್ತು ತಮಿಳು ಚಿತ್ರರಂಗಗಳಲ್ಲಿ, ಇತ್ತೀಚೆಗೆ ಪುನೀತ್ ರಾಜ್‌ಕುಮಾರ್ ನಟಿಸಿದ್ದ 'ರಾ... ಮತ್ತು 'ಜಾಕಿ' ಚಿತ್ರಗಳಲ್ಲೂ ಈತ ನಟಿಸಿದ್ದರು. ಈಗ ಗಣೇಶ್ ನಟಿಸುತ್ತಿರುವ 'ಶೈಲೂ' ... ಚಿತ್ರವನ್ನು ನಿರ್ಮಿಸುತ್ತಿರುವ ಕೊಬ್ರಿ ಮಂಜು ಆ ಚಿತ್ರದ ಮುಖ್ಯ ಪಾತ್ರವೊಂದಕ್ಕೆ ಸಂ... ಅವರನ್ನು ಕೇಳಿದರಂತೆ. ಆ ಪಾತ್ರದಲ್ಲಿ ನಟಿಸಲು ಒಪ್ಪಿದ ಸಂಪತ್ ಸಂಭಾವನೆ ... ಕೊಡಬೇಕು ಎಂದಿದ್ದಕ್ಕೆ "ಇಪ್ಪತ್ತು ಲಕ್ಷ ಕೊಡಿ ಸಾಕು" ಅಂದರಂತೆ! ಅದಕ್ಕೆ ಕೊಬ್ರಿ ಮ... "ಬೇಕಿದ್ದರೆ ನಾಲ್ಕು ಲಕ್ಷ ಕೊಡ್ತೀನಿ. ಇಷ್ಟ ಇದ್ರೆ ಮಾಡಿ ಇಲ್ಲಾಂದ್ರೆ ಆರಾಮಾಗಿ ಅಲ್ಲೇ ... ಎಂದು ಹೇಳಿ ಫೋನ್ ಕುಕ್ಕಿದರಂತೆ!



ಸಂಪತ್ ಅಪೇಕ್ಷಿಸಿದ ಮೊತ್ತ ಕನ್ನಡ ನಿರ್ಮಾಪಕರಿಗೆ ನಿಜಕ್ಕೂ ಹೊರೆ ಎಂಬುದು ಸುಳ್ಳಲ್ಲ. ಆದರೆ ಗಣೇಶ್‌ನಂಥ ಫ್ಲಾಪ್ ಹೀರೋಗೆ ಕೋಟಿಗಟ್ಟಲೆ ಸಂಭಾವನೆ ನೀಡಲು ಒಪ್ಪಿರುವ ಕೊಬ್ರಿ ಮಂಜಣ್ಣ ನಾಯಕನಿಗೆ ಸರಿಗಟ್ಟುವ ವಿಲನ್ ಪಾತ್ರದಲ್ಲಿ ನಟಿಸಲು ಸಂಪತ್ ಕೇಳಿದ ಮೊತ್ತಕ್ಕೆ ಯಾಕೆ ಹಿಂದೇಟು ಹಾಕಿದರು? ಅದಕ್ಕೆ ಕೊಬ್ರಿ ಮಂಜು ನೀಡಿದ ಉತ್ತರ "ಗಣೇಶನನ್ನು ನೋಡಲು ಜನ ಸಿನಿಮಾಗೆ ಬರ್ತಾರೆ. ಸಂಪತ್‌ನನ್ನು ನೋಡಲು ಐನೂರ್ ಜನ ಅಲ್ಲ, ಐವತ್ತು ಜನ ಕೂಡಾ ಬರಲ್ಲ..."

ಹಂಗಂದ್ರೆ ಮಂಜಣ್ಣ ನೀವೇ ವಿಲನ್ ಪಾತ್ರದಲ್ಲಿ ನಟಿಸಿ ಹಣ ಉಳಿಸಬಹುದಲ್ಲಾ...?!

ತಿಕ್ಕಲು ಚಂದ್ರನ ರೀ-ಎಂಟ್ರಿ



'ಪೆಟ್ರೆ ಲವ್ಸ್ ಪದ್ಮ' ಎಂಬ ಭೀಕರ ಸಿನಿಮಾ ನಿರ್ದೇಶಿಸಿದ ನಂತರ ನಾಪತ್ತೆಯಾಗಿದ್ದ ತಿಕ್ಕಲು ಗಿರಾಕಿ ಚಂದ್ರಶೇಖರ ಶ್ರೀವಾತ್ಸವ ಎಂಬ ವ್ಯಕ್ತಿ ಮತ್ತೆ ಗಾಂಧಿನಗರಕ್ಕೆ ಎಂಟ್ರಿ ಕೊಟ್ಟಿದ್ದಾರೆ. ಈಗ ಲೂಸ್ ಮಾದ ಯೋಗಿಯನ್ನು ಹಾಕಿಕೊಂಡು 'ಕಾಲಾಯತಸ್ಮೈನಮಃ' ಎಂಬ ಸಿನಿಮಾವೊಂದನ್ನು ಆರಂಭಿಸಿರುವ ಶ್ರೀವಾತ್ಸವ ಪೊಗರಿನಿಂದ ಮಾತಾಡುವುದೇ ಟ್ಯಾಲೆಂಟು, ಯದ್ರಾಬಿರ್ರಿ ಶೋ ಕೊಡುವುದೇ ದೊಡ್ಡಸ್ಥಿಕೆ ಎಂ... ನಂಬಿರುವಂತಿದೆ.

ಮೊನ್ನೆ ತನ್ನ ಸಿನಿಮಾದ ಮುಹೂರ್ತ... ಪತ್ರಕರ್ತರನ್ನು ಕರೆಸಿದ್ದ ಶ್ರೀವಾತ್ಸವ ತನ್ನ ಚಿ... ಬಗ್ಗೆ ಒಂದಿಷ್ಟೂ ಮಾತನಾಡದೆ "ಏನಾದರೂ ... ಇದ್ರೆ ಕೇಳಿ, ಆನ್ಸರ್ ಕೊಡ್ತೀನಿ" ಎಂದಿದ... ಒಂದು ವೇಳೆ ಈತ ಹತ್ತಾರು ಸಿನಿಮಾಗಳ... ಮಾಡಿ ಅವುಗಳಲ್ಲಿ ಒಂದೆರಡಾದರೂ ಹಿ... ಆಗಿದ್ದಿದ್ದರೆ ಈತನ ಸಿನಿಮಾ ... ಮಾತನಾಡಲು ಪತ್ರಕರ್ತ... ಪ್ರಶ್ನೆಗಳಿರುತ್ತಿದ್ದವು. ಆದರೆ ಈತ ನಿರ್ದೇಶಿಸಿ... ಒಂದೇಒಂದು ಸಿನೆಮಾ ಕೂಡ ತುಕ್ಕುಹಿಡಿದಿತ್ತು!

ಹಿಂದೊಮ್ಮೆ "ಛೇಂಬರ್‌ನಲ್ಲಿರೋರ... ಟ್ಯೂಬ್‌ಲೈಟ್‌ಗಳು" ಎಂದು ಹೇಳಿ ಎಲ್ಲರಿಂದ ... ಶ್ರೀವಾತ್ಸವ ಉಗಿಸಿಕೊಂಡಿದ್ದ. ಮುಂದೆ ಈತ ಇನ್ನೇನ... ಯಡವಟ್ಟುಗಳನ್ನು ಮಾಡಿಕೊಳ್ಳುತ್ತಾನೋ... ಕಾಲಾಯ ತಸ್ಮೈ ನಮ...

PRINTER, PUBLISHER, PROPRIETOR AND EDITOR: GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail : lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44